ಪುಸ್ತಕ ಪ್ರಪಂಚ

ಸಂಪುಟ ೫೧ ಮೇ ೨೦೦೧ ಸಂಚಿಕೆ ೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಇತ್ತೀಚೆಗೆ ಅಫಘಾನಿಸ್ಥಾನದಲ್ಲಿ 'ತಾಲಿಬಾನ' ರಿಂದ
ನಾಶಪಡಿಸಿರುವ ಬುದ್ಧನ ಮೂರ್ತಿ

PUSTAKA PRAPANCHA: Monthly

Published and printed by Karnataka State Adult Education Council,Mysore-
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

೧. ಶ್ರೀ ಕೆ.ಎಸ್.ಸುದರ್ಶನ್ ಅವರ ಭಾರತೀಕರಣವಾದ

'ನನಗೆ ಕ್ರಿಶ್ಚಿಯಾನಿಟಿಯಲ್ಲಿ ಗೌರವವಿದೆಯೆ ಹೊರತು ಚರ್ಚಿಯಾನಿಟಿಯಲ್ಲಲ್ಲ' ವೆಂದೊಮ್ಮೆ ಟಾಲ್‌ಸ್ಟಾಯ್ ಹೇಳಿದ. ಈವತ್ತು ಜಗತ್ತಿನಲ್ಲಿರುವುದು ಚರ್ಚಿಯಾನಿಟಿಯೆ ಹೊರತು ಕ್ರಿಶ್ಚಿಯಾನಿಟಿಯಲ್ಲ. ಈ ಮಾತನ್ನು ಜಗತ್ತಿನ ಎಲ್ಲ ಮತಗಳಿಗೂ ಅನ್ವಯಿಸಬಹುದು. ಮೂಲ ಮತಸ್ಥಾಪಕರು ಹೇಳಿದ್ದೊಂದಾದರೆ, ನಡೆಯುವುದೆ ಮತ್ತೊಂದು. ಹಿಂದೆ ಮತ ಹುಟ್ಟಿದ ಪರಿಸರವೆ ಬೇರೆ, ಇಂದಿನ ಪರಿಸರವೆ ಬೇರೆ. ಮಗುವಾಗಿದ್ದಾಗ ಹೊಲಿಸಿದ ಚಡ್ಡಿ ಯೌವನ ಕಾಲಕ್ಕಾಗದು. ಇಂದಿನ ವೈಜ್ಞಾನಿಕ -ವೈಚಾರಿಕ ಯುಗಕ್ಕೆ ಹಳೆಯ ಮತಗಳು ಪೂರ್ಣವಾಗಿ ಹೊಂದುತ್ತವೆಯೆ ಎಂಬುದು ಮೂಲ ಭೂತ ಪ್ರಶ್ನೆ. ಅಷ್ಟೇ ಅಲ್ಲ, ಒಂದು ವಾತಾವರಣಕ್ಕೊಗ್ಗಿದ ಮತಗಳು ಬೇರೆ ವಾತಾವರಣವನ್ನು ಪ್ರವೇಶಿಸಿದಾಗ, ಅದಕ್ಕನುಗುಣವಾಗಿ ಜೀವನ ವ್ಯವಹಾರಗಳನ್ನು ಹೊಂದಿಸಿಕೊಳ್ಳಬೇಡವೆ ಎಂಬ ಪ್ರಶ್ನೆಯೂ ಇದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಾದ ಶ್ರೀ ಕೆ.ಎಸ್. ಸುದರ್ಶನ್ ಅವರು ಕ್ರಿಸ್ತಮತ ಭಾರತೀಕರಣಗೊಳ್ಳಬೇಕೆಂದು ಇತ್ತೀಚೆಗೆ ಸೂಚಿಸಿದ್ದಾರಷ್ಟೆ. ಚರ್ಚುಗಳು ಭಾರತೀಕರಣಗೊಳ್ಳಬೇಕೆಂದು ಸುಮಾರು ೬೦ ವರ್ಷಗಳ ಹಿಂದೆ ಭಾರತ ಸಂಜಾತ ಪಾದ್ರಿಗಳೇ ಪ್ರಸ್ತಾಪಿಸುತ್ತಿದ್ದರೆಂದು ನೆನಪು. ಮತಾಂತರ ಕೂಡದೆಂದು ಸುದರ್ಶನ್ ಹೇಳಿಲ್ಲ. ಬಲಾತ್ಕಾರದ ಮತಾಂತರವಾಗಲಿ, ಆಮಿಷಾಕರ್ಷಣೆಯ ಮತಾಂತರವಾಗಲಿ ತಪ್ಪೆಂದವರು ಹೇಳಿದ್ದರೂ ಯಾರೂ ಆಕ್ಷೇಪವೆತ್ತುವಂತಿರಲಿಲ್ಲ. ಅವರು ಅದೂ ಹೇಳಿಲ್ಲ. ಅವರ ಹೇಳಿಕೆಯ ಹಿನ್ನೆಲೆಯಲ್ಲಿ, ವಿದೇಶೀ ಉಪದೇಶಿಗಳ ಪ್ರಚಾರ ವೈಖರಿಯ ನೆನಪಿದ್ದಿರಬೇಕೆಂದು ತೋರುತ್ತದೆ. ವಿದೇಶೀ ಮೂಲದ ಮತೀಯ ಸಂಸ್ಥೆಗಳು ವಿಶಾಲಾರ್ಥದಲ್ಲಿ ಭಾರತೀಕರಣಗೊಳ್ಳುವುದಾದರೆ, ದೇಶದಲ್ಲಿ ಸಾಮರಸ್ಯವೂ ಏಕತಾಭಾವನೆಯೂ ಅಧಿಕಗೊಳ್ಳುತ್ತದೆಂಬುದರಲ್ಲಿ ಅನುಮಾನವಿಲ್ಲ. ಆದರೆ ಬೇಕಾದವರು ಮೆಕ್ಕ ಮದೀನ ವ್ಯಾಟಿಕನ್‌ಗೆ ಹೋದರೆ ಅಡ್ಡಿಯಿರಬಾರದು.

ವರ್ಣಾಶ್ರಮಧರ್ಮ ಜಾತೀಯತೆ ಅಸ್ಪೃಶ್ಯತೆಗಳೇ ವಿದೇಶೀಯ ಮತಗಳ ಪ್ರಾಬಲ್ಯಕ್ಕೆ ಕಾರಣವೆಂಬುದನ್ನು ಮೇಲ್ವರ್ಗದ ಜನರೂ, ಲಕ್ಷಾಂತರ ಮಠಗಳೂ, ಸನ್ಯಾಸಿಗಳೂ ಅರಿಯಬೇಕು. ವರ್ಣಾಶ್ರಮ ವ್ಯವಸ್ಥೆಯನ್ನು ತೊಲಗಿಸಬೇಕು; ಅಸ್ಪೃಶ್ಯರಿಗೂ ಪೌರೋಹಿತ್ಯದ ಅರ್ಹತೆಯನ್ನೊದಗಿಸಬೇಕು, ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ನೀಡಬೇಕು, ಸ್ವಯಿಚ್ಛೆಯಿಂದ ಹಿಂದೂಧರ್ಮಕ್ಕೆ ಮರಳುವ ಜನರಿಗೆ ಉತ್ತಮ ಸ್ಥಾನಮಾನಗಳನ್ನು ಕಲ್ಪಿಸಬೇಕು. ಅವರಿಗೆ ಜೀವನೋಪಾಯಗಳನ್ನು ಕಲಿಸಬೇಕು. ಜಾತಿಮತಗಳ ತಾರತಮ್ಯ ನಿವಾರಣೆಗೆ ಜೀವನಾನುಕೂಲಗಳ ಸೃಷ್ಟಿ ಅತ್ಯವಶ್ಯ. 'ಹಿಂದೂ' ಪದಕ್ಕೆ ಬದಲಾಗಿ 'ಭಾರತೀಯ' ಎಂಬ ಪದವನ್ನು ಬಳಸಬಾರದೇಕೆ ? ಎಲ್ಲ ಧಾರ್ಮಿಕ ಸಂಸ್ಥೆಗಳಲ್ಲಿಯೂ ದೇಶಭಾಷೆಗಳನ್ನು ಬಳಸಬೇಕಾದ್ದು ಅತ್ಯಗತ್ಯ. ಇಷ್ಟೆಲ್ಲ ಪೂರೈಕೆಯಾಗುವುದಾದರೆ ಭಾರತೀಕರಣ ಸಾಧ್ಯವಾದೀತು.

ಇಂಡಿಯಾದ ಮತಾಂತರವನ್ನು ಕುರಿತು ಗ್ರಂಥ ರಚನೆ ಮಾಡಿರುವ ಲಾರ ಕೆಲ್ಲಿ(Laura Kelley) ೧೩..೩..೨೦೦೧ನೆಯ ಹಿಂದೂಪತ್ರಿಕೆಯ ಪುರವಣಿಯಲ್ಲಿ 'ಏಕಾದಶ ಧರ್ಮಸೂತ್ರ: ನೀನು ಮತಾಂತರಮಾಡಬಾರದು' ಎಂಬ ಅಂಕಣವನ್ನು ಬರೆದಿದ್ದಾರೆ. ಅದರ ಓದು ಸಮಯೋಚಿತವೆಂದು ತಿಳಿದು, ಅದರ ಸಾರಾನುವಾದವನ್ನಿಲ್ಲಿ ಕೊಡಲಾಗಿದೆ : 'ತಮ್ಮ ಆಯುಧಗಳ ಮಾರಾಟಕ್ಕೆ ಗಿರಾಕಿ ಪಡೆಯುವ ಸಲುವಾಗಿ, ಜಗತ್ತಿನಲ್ಲೆಲ್ಲ ರಾಜಕೀಯ ಸಾಮಾಜಿಕ

ಕಲಹಗಳು ನಿರಂತರವಾಗಿ ನಡೆಯುತ್ತಿರಲೆಂದು ಪಾಶ್ಚಾತ್ಯ ರಾಷ್ಟ್ರಗಳು ಕಾತರದಿಂದಿವೆ. ಸಾಂಸ್ಕೃತಿಕ ಮೌಲ್ಯಗಳನ್ನು ಸಿಡಿಸಲು, ರಾಜಕೀಯ ಸಂಬಂಧಗಳನ್ನು ಕದಡಲು ಮತ್ತು ರಾಷ್ಟ್ರೀಯ ನಿಷ್ಠೆಗಳನ್ನು ಧೂಳಿಪಟಮಾಡಲು ಸುವ್ಯವಸ್ಥಿತ ಮತಾಂತರವೆ ಸಶಕ್ತ ಬಾಂಬೆಂಬುದು ಹಂಟಿಂಗ್‌ಟನ್ ವರದಿಯ ದಾಖಲೆಯಾಗಿದೆ. ಪಾಕಿಸ್ತಾನ ರಾಷ್ಟ್ರ ಮತ್ತು ಜರ್ಖಂಡ್ ರಾಜ್ಯಗಳ ವಿಭಜನೆ ಮತಾಂತರದ ಫಲ.'

'ಮತಾಂತರದಿಂದ ಜಗತ್ತಿನ ಶಾಂತಿಗೆ ಅಪಾಯ. ನನಗೆ ಅಧಿಕಾರವಿದ್ದರೆ ಅದನ್ನು ತಡೆಗಟ್ಟುತ್ತಿದ್ದೆ' ಎಂದು ಗಾಂಧೀಜಿ ಸ್ಪಷ್ಟಪಡಿಸಿದ್ದಾರೆ. ಚರ್ಚು ಹೊರತಾಗಿ ಮೋಕ್ಷ ಸಾಧ್ಯವಿಲ್ಲವೆನ್ನುವ ಸಂತ ಪಾಲನ ಮಾತು ವಿಶ್ವಾಸಾರ್ಹವಲ್ಲ. ಹರಿಜನರಿಗೆ ದೇವಾಲಯ ಪ್ರವೇಶದ ಹಕ್ಕನ್ನು ನೀಡಲು ತಿರುವಾಂಕೂರಿನ ದಿವಾನರಾದ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರು ಶಾಸನವನ್ನು ರಚಿಸಿದಾಗ, ಮತಾಂತರಕ್ಕೆ ಭಾರಿ ಪೆಟ್ಟು ಬಿದ್ದೀತೆಂದು ಕ್ಯಾಂಟರ್ ಬರಿ ಆರ್ಕ್‌ಬಿಷಪ್ ಹೌಹಾರುತ್ತಾರೆ. ಏಷಿಯಾದಲ್ಲಿ ಒಂದು ಸಾವಿರ ಮಿಲಿಯ ಜನರನ್ನು ಮತಾಂತರಿಸತಕ್ಕದ್ದೆಂದು ಜಾಗತಿಕ ಚರ್ಚ್‌ಮಂಡಲಿ ಕ್ರೈಸ್ತಮತಬೋಧಕರಿಗೆ ಆಜ್ಞಾಪಿಸುತ್ತದೆ. ವಾಸ್ತವವಾಗಿ ಮಿಷನರಿ ಕಾರ್ಯಕ್ರಮ ಉನ್ನತ ಧ್ಯೇಯದ ಯುದ್ಧವಾಗಿದೆ. ಮತಾಂತರ ಸೈನಿಕ ತರಬೇತಿಯಂತಿದ್ದು, ಅದಕ್ಕಾಗಿ ಬಿಲಿಯಾಂತರ ಹಣ ಖರ್ಚಾಗುತ್ತಿದೆ.

ಜಾಗತಿಕ ಚರ್ಚ್ ಮಂಡಲಿಯ ಕಾರ್ಯದರ್ಶಿ ಚೀನೀ ಪ್ರಧಾನಿ ಚೌಎನ್‌ಲಾಯಿಯವರನ್ನು ೧೯೫೬ರಲ್ಲಿ ಭೇಟಿ ಮಾಡಿ 'ಕಮ್ಯೂನಿಸಂವಾದಿ ಚೀನಾದಲ್ಲಿ ಮತದ ಸ್ಥಾನವೇನು?' ಎಂದು ಕೇಳಿದಾಗ ಪ್ರಧಾನಿ ಕೊಟ್ಟ ಉತ್ತರವಿದು: 'ಚೀನಾಸರ್ಕಾರವನ್ನು ತಲೆಕೆಳಗುಮಾಡುವ ಸ್ವಾತಂತ್ರ್ಯ ಯಾರಿಗೂ ಇಲ್ಲ. ವಸಾಹತುಷಾಹಿ ಮನೋಭಾವದ ವಿದೇಶೀ ಉಪದೇಶಿಗಳನ್ನು ಈಗಾಗಲೇ ಹೊರಹಾಕಲಾಗಿದೆ. ಇನ್ನವರು ವಾಪಸು ಬರುವಂತಿಲ್ಲ'. ಸೆಕ್ಯೂಲರ್ ಎಂದು ಕರೆದು ಕೊಳ್ಳುವ ಇಂಡಿಯಾ ಮತಬೋಧಕರ ಚತ್ರವಾಗಿದೆ. ಅಲ್ಪ ಸಂಖ್ಯಾತಕೋಮಿನ ಹೆಸರಿನಲ್ಲಿ ಅವರಿಗೆ ರಾಜಾತಿಥ್ಯ ನೀಡಲಾಗುತ್ತದೆ. ಕ್ರೈಸ್ತೋಪದೇಶಿ ಚಟುವಟಿಕೆಗಳ ವಿಚಾರಣ ಮಂಡಲಿಯ ಅಧ್ಯಕ್ಷರಾದ ನಿಯೋಗಿಯವರು ಮತಾಂತರದ ಬಗ್ಗೆ ಏನು ಹೇಳುತ್ತಾರೆ ಕೇಳಬಹುದು : ನಾಗಾಲ್ಯಾಂಡ್ ಅಸ್ಸಾಂ ರಾಜ್ಯಗಳಲ್ಲಿ ಮಂತ್ರಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಮತ ಪ್ರಚಾರ ಮಾಡುವ ಉಪದೇಶಿಗಳಿಗೆ ಸರ್ವ ಸಹಾಯ ನೀಡುತ್ತಾರಲ್ಲದೆ, ತಾವೇ ಪ್ರಚಾರಕಾರ್ಯದಲ್ಲಿ ತೊಡಗುವುದುಂಟು. ಈಶಾನ್ಯರಾಜ್ಯಗಳಲ್ಲಿ ಕ್ರಿಶ್ಚಿಯನ್ನರೇ ಬಹುಸಂಖ್ಯಾತರು. ೧೯೭೩ರಲ್ಲಿ ಉಪದೇಶಿಗಳ ಸಂಖ್ಯೆ ೪೨೦ ಇದ್ದದ್ದು, ೧೯೯೮ರಲ್ಲಿ ೫೯೮೬ ಆಗಿದೆ. ಚರ್ಚ್ ಸಲಹಾ ಮಂಡಲಿಗಳಲ್ಲಿ ಯುದ್ಧಾನುಭವಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಸ್ವಯಂ ಕ್ರಿಶ್ಚಿಯನ್ನರೂ ಗಾಂಧಿವಿಚಾರವಾದಿಗಳೂ ಆದ ಜೆಸಿ. ಕುಮಾರಪ್ಪನವರೆ ಒಮ್ಮೆ ಈ ರೀತಿ ಹೇಳಿದ್ದುಂಟು: ಪಾಶ್ಚಾತ್ಯ ರಾಷ್ಟ್ರಗಳು ನಾಲ್ಕು ಸೇನಾಬಾಹುಗಳನ್ನು ಹೊಂದಿವೆ : ಸೈನ್ಯ, ನೌಕಾಬಲ, ವಾಯುಪಡೆ ಮತ್ತು ಚರ್ಚು. ಜತೆಗೆ ಆಯುಧಗಳನ್ನೂ ಸೇರಿಸಿಕೊಳ್ಳಬಹುದು.

ನ್ಯಾಯಮೂರ್ತಿ ನಿಯೋಗಿ ಮಂಡಲಿಯ ಕೆಲವು ಶಿಫಾರಸುಗಳಿವು: ೧. ಮತಾಂತರೋದ್ದೇಶವುಳ್ಳ ಉಪದೇಶಿಗಳನ್ನು ವಾಪಸು ಕಳಿಸಬೇಕು. ವಿದೇಶೀಯ ಉಪದೇಶಿಗಳು ದೇಶದೊಳಗೆ ಬರದಂತೆ ತಡೆಗಟ್ಟಬೇಕು. ೨. ವಿದೇಶೀಯ ಬೆಂಬಲವಿಲ್ಲದ ಸಂಯುಕ್ತ ಸ್ವತಂತ್ರ

ಕ್ರಿಶ್ಚಿಯನ್ ಚರ್ಚನ್ನು ಇಂಡಿಯಾದಲ್ಲಿ ಸ್ಥಾಪಿಸಬೇಕು. ೩. ಮತಾಂತರದ ಸಾಧನವಾಗಿ ವೈದ್ಯಕೀಯ ಹಾಗೂ ಇತರ ವೃತ್ತಿಗಳ ಸೇವೆಯನ್ನು ನಿಲ್ಲಿಸಬೇಕು. ೪. ತಂದೆತಾಯಿಯರ ಮತ್ತು ಪೋಷಕರ ಅನುಮತಿಯಿಲ್ಲದೆ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನು ನೀಡಬಾರದೆಂಬ ಸಂವಿಧಾನವಿಧಿಯನ್ನು ಜಾರಿಗೆತರಬೇಕು. ೫. ವೈದ್ಯರು ಮತ್ತು ದಾದಿಯರು ತಮ್ಮ ವೃತ್ತಿಸಂಬಂಧವಾದ ಸೇವಾವಧಿಯಲ್ಲಿ ಮತ ಪ್ರಚಾರ ಮಾಡಬಾರದೆಂದು ನಿಯಮಗಳನ್ನು ರಚಿಸಬೇಕು. ೬. ರಾಜ್ಯಸರ್ಕಾರದ ಅನುಮತಿಯಿಲ್ಲದೆ ಧಾರ್ಮಿಕ ಪ್ರಚಾರ ಸಾಹಿತ್ಯ ಹಂಚದಂತೆ ನಿಯಂತ್ರಿಸಬೇಕು. ೭. ಸರ್ಕಾರಿ ದ್ವಾರದ ಮೂಲಕವಲ್ಲದೆ ಬರುವ ವಿದೇಶೀಯ ನಾಣ್ಯವನ್ನು ಯಾರೂ ಸ್ವೀಕರಿಸಬಾರದು. ೮. ಪರಿಶಿಷ್ಟ ಜಾತಿಯವರಿಗೆ ವೈದ್ಯ ಆರೋಗ್ಯ ಮತ್ತು ಶೈಕ್ಷಣಿಕ ಸೇವೆಯನ್ನು ರಾಜ್ಯ ಸರ್ಕಾರಗಳೇ ನಿರ್ವಹಿಸಬೇಕು. ೯. ಅಧಿಕಾರೇತರ ಮತ್ತು ಧಾರ್ಮಿಕ ಸಂಸ್ಥೆಗಳು ರೂಪಿಸುವ ಕಾರ್ಯಕ್ರಮಗಳು ಮೊದಲೇ ಸರ್ಕಾರದ ಅನುಮತಿಯನ್ನು ಪಡೆಯಬೇಕು.

'ಮತಾಂತರದಿಂದ ಆರ್ಥಿಕಾಭಿವೃದ್ಧಿ ಸಾಧನೆ ಸಾಧ್ಯ ಎಂಬ ವಾದದಲ್ಲಿ ತಿರುಳಿಲ್ಲ. ಅದಕ್ಕೆ ರುಜುವಾತು ಸಹ ಸಿಗುವುದಿಲ್ಲ. ಆದ್ದರಿಂದ ಮತಾಂತರ ನಿಲ್ಲಬೇಕು. 'ನೀವು ಮತಾಂತರ ಮಾಡಕೂಡದು' ಎಂಬ ಹನ್ನೊಂದನೆಯ ಧರ್ಮಸೂತ್ರವನ್ನು ಉಪದೇಶಿಗಳಿಗೆ ಕಲಿಸಬೇಕು. ಅವೈಜ್ಞಾನಿಕವಾದ ದೈವೀಕೇಂದ್ರವಾದ ಅಣುಬಾಂಬಿನಷ್ಟೆ ಅಪಾಯಕಾರಿ. 'ನನ್ನ ದೇವರು ನಿನ್ನ ದೇವರೂ ಹೌದು ; ಆದರೆ ನಿನ್ನ ದೇವರು ದೇವರೇಅಲ್ಲ ಎಂಬ ಚರ್ಚಿನ ಉಪದೇಶ ಸಾಮರಸ್ಯ ಭ್ರಾತೃತ್ವಗಳನ್ನು ಕುದುರಿಸಲಾರದು. ನಿನ್ನ ದೇವರು ನನ್ನ ದೇವರೇ ; ನನ್ನ ದೇವರು ನಿನ್ನ ದೇವರೇ' ಎಂಬ ಸೂತ್ರವನ್ನು ಎಲ್ಲ ಮತದವರೂ ಒಪ್ಪಿಕೊಂಡಾಗ ಜಗತ್ತಿನಲ್ಲಿ ಶಾಂತಿ ನೆಲಸುವಂತಾಗುತ್ತದೆ.

'ಮತಾಂತರ ಮೂಲಭೂತ ಹಕ್ಕಾಗುವುದಿಲ್ಲವೆಂದು ೧೯೭೭ರಲ್ಲಿ ರಾಷ್ಟ್ರದ ವರಿಷ್ಠ ನ್ಯಾಯಾಲಯ ತೀರ್ಪಿತ್ತಿದೆ. ಚರ್ಚಿನ ಅಪರಾಧಗಳಿಗಾಗಿ ತಾವು ಕ್ಷಮೆ ಕೇಳುವುದಾಗಿ ೧೪.೩.೨೦೦೦ನೆಯ ದಿನದಂದು ಪೋಪ್ ಜಗದ್ಗುರು ಎರಡನೆಯ ಜಾನ್‌ಪಾಲ್ ಘೋಷಿಸಿದ್ದುಂಟು. 'ಕ್ರಿಶ್ಚಿಯನ್ನರ ನಡುವಣ ವಿಭಜನೆಗಾಗಿ , ಸತ್ಯದ ಹೆಸರಿನಲ್ಲಿ ಬಳಸುವ ಹಿಂಸಾಕೃತ್ಯಗಳಿಗಾಗಿ ಬೇರೆ ಮತಗಳ ಅನುಯಾಯಿಗಳಿಗೆ ವಿರುದ್ಧವಾಗಿ ನಡಸಿದ ಕಲಹಕ್ಕಾಗಿ ನಾನು ಕ್ಷಮೆ ಯಾಚಿಸುತ್ತೇನೆ' ಎಂದು ಜಗದ್ಗುರುಗಳು ಮಾಡಿದ ಘೋಷಣೆ ಶ್ಲಾಘ್ಯವಾದದ್ದು.'

-ಲಾರಾ ಕೆಲ್ಲಿಯವರ ಈ ಲೇಖನ ಕ್ರಿಶ್ಚಿಯನ್ನರಿಗೆ ಮಾತ್ರವಲ್ಲ, ಎಲ್ಲ ಮತೀಯರಿಗೂ ಮಾರ್ಗದರ್ಶಿಯಾಗಬೇಕಾಗಿದೆ. ವಿಜ್ಞಾನಯುಗದಲ್ಲಿ ಮತಾಂತರವೊಂದು ವಿರೋಧಾಭಾಸ. ಜನ ಸ್ವಯಿಚ್ಛೆಯಿಂದ ಮತಾಂತರ ಹೊಂದುವುದಾದರೆ ತಪ್ಪಿಲ್ಲ. ಆದರೆ ಸುಳ್ಳು ಪ್ರಚಾರ, ಅಪಪ್ರಚಾರ, ಅಶ್ಲೀಲಪ್ರಚಾರಗಳು ನಿಲ್ಲಬೇಕು. ಪ್ರಚಾರಕರು ನಾಗರಿಕರಂತೆ ವರ್ತಿಸಬೇಕು. ಮತಾಂತರದ ಉದ್ದೇಶದಿಂದ ಮಾಡಿದ ವೈದ್ಯಕೀಯ ಹಾಗೂ ಶೈಕ್ಷಣಿಕ ಸೇವೆಯಿಂದ ಯಾವ ಪುರುಷಾರ್ಥವೂ ಪ್ರಾಪ್ತವಾಗುವುದಿಲ್ಲ; ಅಷ್ಟೇ ಅಲ್ಲ ಅದರಿಂದ ಐಹಿಕ ಪ್ರಯೋಜನಗಳೇ ಇಲ್ಲ; ಪಾರಮಾರ್ಥಿಕಲಾಭವಂತು ಮೊಲದ ಕೋಡು. ಪಾಶ್ಚಾತ್ಯೀಕರಣ ಸಾಕಾಗಿದೆ ; ಇನ್ನು ಮುಂದಾದರೂ ಭಾರತೀಯ ಜೀವನದ ಯಾವ ಸ್ತರದಲ್ಲಿಯಾದರೂ ಪಾಶ್ಚಾತ್ಯೀಕರಣ ತಲೆಯೆತ್ತದಂತೆ, ಆತ್ಮಗೌರವಕ್ಕೆ ಹಾನಿಯಾಗದಂತೆ, ಮತ್ತೆ ಗುಲಾಮಗಿರಿ ನುಸುಳದಂತೆ ಭಾರತೀಯರು, ಮುಖ್ಯವಾಗಿ ಯುವ ಜನರು ಎಚ್ಚರಿಕೆ ವಹಿಸಬೇಕಾಗಿದೆ. ಒಟ್ಟಿನಲ್ಲಿ ಶ್ರೀ ಸುದರ್ಶನ್ ಅವರ ಭಾರತೀಕರಣವಾದದಲ್ಲಿ ಹುರುಳಿದೆ ; ಪ್ರಕೃತ ಬರಹದ ಲೇಖನದಾರರ ವಾದದಲ್ಲಿ ತಿರುಳಿದೆಯೆಂದು ಭಾವಿಸಬಹುದಾಗಿದೆ.

ಶ್ರೀ ಜೆ.ಎಚ್.ಪಟೇಲರನ್ನು ಕುರಿತ ಸಂಪಾದಕೀಯಕ್ಕೆ ಪ್ರತಿಕ್ರಿಯೆ :

ಶ್ರೀ ಜೆ.ಎಚ್. ಪಟೇಲರು ತೀರಿಕೊಂಡಾಗ 'ಜೆ.ಎಚ್.ಪಟೇಲರಿಗೆ ಶರಣು ಶರಣಾರ್ಥಿ' ಎಂದು ಸಂಪಾದಕೀಯ ಬರೆಯಲಾಗಿತ್ತು. ಬೆಂಗಳೂರಿನ ಲೋಯರ್ ಪ್ಯಾಲೇಸ್ ಆರ್ಚರ್ಡ್ಸ್‌ನ ಶ್ರೀ ಬಿ.ವಿ.ರಾವ್ ಎಂಬ ಮಿತ್ರರು ಆ ಸಂಪಾದಕೀಯಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿ ೬.೨.೨೦೦೧ರಂದು ನನಗೊಂದು ಪತ್ರ ಬರೆದಿದ್ದರು. ಅದನ್ನಿಲ್ಲಿ ಮುದ್ರಿಸಲಾಗಿದೆ.

'ಪುಸ್ತಕಪ್ರಪಂಚದ' ಕಳೆದ ತಿಂಗಳ ಸಂಚಿಕೆಯಲ್ಲಿನ 'ಜೆ.ಎಚ್. ಪಟೇಲರಿಗೆ ಶರಣು ಶರಮಾರ್ಥಿ' ನಿಮ್ಮ ಲೇಖನ ಒಂದು ಅಂಶದ ಬಗ್ಗೆ ನನ್ನ ಅನಿಸಿಕೆ ವ್ಯಕ್ತಪಡಿಸಲು ಈ ಪತ್ರ.

> ಪಟೇಲರು ಹೆಣ್ಣು ಹೆಂಡಗಳ ಪ್ರಿಯರೆಂಬುದನ್ನಿಲ್ಲಿ ಬಹಿರಂಗವಾಗಿ ಹೇಳಿಕೊಂಡದ್ದನ್ನು ನೀವು ಸಮರ್ಥಿಸುತ್ತಾ, ಈ ಹೇಳಿಕೆಗಾಗಿ ಅವರು ವಂದ್ಯರೇ ಹೊರತು ನಿಂದ್ಯರಲ್ಲ. 'ತಾನಾಗಿ ಬಯಸಿ ಬಂದ ಹೆಣ್ಣನ್ನು ಭೋಗಿಸುವುದು ತಪ್ಪಲ್ಲ ಎಂದು ಬರೆದಿದ್ದೀರಿ.
>
> ಅಂದರೆ ನಿಮ್ಮ ದೃಷ್ಟಿಯಲ್ಲಿ ಗಂಡು ಹೆಣ್ಣಿನ ಲೈಂಗಿಕ ಸಂಬಂಧಗಳ ವಿಷಯದಲ್ಲಿ ನೈತಿಕತೆಯೇ ಅಗತ್ಯವಿಲ್ಲ. ಸ್ವಚ್ಛಂದ ಲೈಂಗಿಕತೆಯಿಂದಾಗುವ ಸಾಮಾಜಿಕ ಹಾಗೂ ವೈಯಕ್ತಿಕ ಅನಾಹುತಗಳ ಬಗ್ಗೆ ಕಾಳಜಿಯೂ ಇಲ್ಲ. ಬಲಾತ್ಕಾರ ಅಥವಾ ಬಲವಂತವಿಲ್ಲದೆ ಪರಸ್ಪರ ಒಪ್ಪಿಗೆ ಯಿಂದ ನಡೆಯುವ ಲೈಂಗಿಕ ಸಂಬಂಧಗಳನ್ನು ತಾತ್ವಿಕವಾಗಿ ಒಪ್ಪಬಹುದು. ಆದರೆ ಇಲ್ಲಿ ಮೂರು ಅಂಶಗಳಿವೆ. ಒಂದು ವ್ಯಕ್ತಿಯಾಗಿ ವ್ಯಭಿಚಾರ ವಂದ್ಯವೇ ? ಎರಡನೆಯದು : ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಅಪಾರ ಅಧಿಕಾರ ಹಾಗೂ ನಿಗ್ರಹಾನುಗ್ರಹ ಶಕ್ತಿ ಇರುವ ವ್ಯಕ್ತಿ ಹೆಣ್ಣು -ಹೆಂಡಗಳ ಗೀಳಿಗೆ ಬಿದ್ದರೆ ಆ ದೌರ್ಬಲ್ಯಗಳ ದುರುಪಯೋಗವಾಗಿ, ಅದನ್ನು ಸರಬರಾಜುಮಾಡುವವರು ಅನೈತಿಕ ಲಾಭಗಳನ್ನು ಪಡೆಯುವುದು ಸಹಜವಲ್ಲವೆ ? ಅದಕ್ಕೆ ಅವಕಾಶ ಕೊಡುವುದು ನ್ಯಾಯವೇ? ಮೂರನೆಯದಾಗಿ ಒಂದು ಅನೈತಿಕ ವರ್ತನೆಯನ್ನು ಬಹಿರಂಗವಾಗಿ ಮಾಧ್ಯಮಗಳ ಮುಂದೆ ರಾಜಾರೋಷವಾಗಿ ಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿ ಸಮರ್ಥಿಸಿಕೊಂಡರೆ ಅದು ಅನ್ಯರ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ? ಈ ಅಂಶಗಳನ್ನೆಲ್ಲಾ ಈ ಸಂದರ್ಭದಲ್ಲಿ ನೀವು ಯೋಚಿಸಿದಂತೆ ಕಾಣುವುದಿಲ್ಲ. ಇದು ನಿಮ್ಮಂಥ ವಿದ್ವಾಂಸರಿಂದ ನಿರೀಕ್ಷಿಸಲಾಗದ ಅನೌಚಿತ್ಯ. ಅಲ್ಲ ಅಪರಾಧ ಎಂದರೂ ಸರಿಯೆ.
>
> ಎಲ್ಲರೂ ಅಖಂಡ ಬ್ರಹ್ಮಚಾರಿಗಳಾಗಬೇಕೆಂಬ ಅತಿ ಆದರ್ಶವಾದಿ ನಾನಲ್ಲ. ಎಲ್ಲೋ ನೂರಕ್ಕೊಬ್ಬರು ಅಥವಾ ಸಾವಿರಕ್ಕೊಬ್ಬರು ಲೈಂಗಿಕ ಕ್ರಿಯೆ ನಡೆಸದೆ ಬದುಕಬಲ್ಲರು. ಉಳಿದವರೆಲ್ಲ ಮಾನಸಿಕವಾಗಿ ವ್ಯಭಿಚಾರಿಗಳೇ . ಆದರೆ ಸಂಸ್ಕೃತಿ , ಶಿಷ್ಟಾಚಾರ, ಕಾನೂನು, ಜನಾಭಿಪ್ರಾಯ, ಕೌಟುಂಬಿಕ ಪ್ರತಿಕ್ರಿಯೆ, ಹಣದ ಅಭಾವ, ಧೈರ್ಯದ ಅಭಾವ, ಅವಕಾಶಗಳ ಅಭಾವ

ರೋಗಭಯ ಮುಂತಾದ ಕಾರಣಗಳಿಂದ ಹೆಚ್ಚಿನವರು ಶಾರೀರಿಕ ವ್ಯಭಿಚಾರ ಮಾಡಲು ಅಸಮರ್ಥರಾಗಿರುತ್ತಾರೆ ಎಂಬ ವಾಸ್ತವವನ್ನು ನಾನು ಬಲ್ಲೆ. (ನನಗೆ ೬೩ ವರ್ಷ) ಆತ್ಯಂತಿಕ ಮಾತಾಗಿ ಹೇಳುವುದಾದರೆ ಪ್ರತಿ ವ್ಯಕ್ತಿಯೂ ತನ್ನಿಂದ ಸಾಧ್ಯವಾದಷ್ಟು ವ್ಯಭಿಚಾರಿಯಾಗಬಹುದು. ಆದರೆ ಅದನ್ನು ಮುಚ್ಚಿಕೊಳ್ಳು ವುದರಲ್ಲೂ ಒಂದು ಔಚಿತ್ಯವಿಲ್ಲದಿಲ್ಲ. ಇಂದಿನ, ನಮ್ಮ ದೇಶದ ಸಂಸ್ಕೃತಿಯ ಸಂದರ್ಭದಲ್ಲಿ ಇದು ಅಗತ್ಯ. ಇನ್ನೂ ೧೦೦ ವರ್ಷಗಳಲ್ಲಿ ವ್ಯಭಿಚಾರ ಎಂಬ ಶಬ್ದಕ್ಕೆ ಅರ್ಥವೇ ಇಲ್ಲವಾಗಬಹುದು. ಲೈಂಗಿಕ ಸ್ವಚ್ಛಂದತೆಯನ್ನು ಸಮಾಜ ಒಪ್ಪಿಕೊಳ್ಳಬಹುದು. ಪಾಶ್ಚಾತ್ಯದೇಶಗಳಲ್ಲಿ ಬಹುಮಟ್ಟಿಗೆ ಹಾಗಾಗಿದೆ. ಆದರೆ ಅಮೆರಿಕದಲ್ಲೂ ಅಧ್ಯಕ್ಷ ಹುದ್ದೆಯಲ್ಲಿದ್ದ ಕ್ಲಿಂಟನ್ ನಡೆಸಿದ ವ್ಯಭಿಚಾರಕ್ಕೆ ಸಾರ್ವಜನಿಕರ ಒಪ್ಪಿಗೆ ದೊರೆಯಲಿಲ್ಲ. ಕಾರಣ ಅಧಿಕಾರ ಸ್ಥಾನದಲ್ಲಿರುವವರು ನಡೆಸುವ ಅನೈತಿಕ ವರ್ತನೆ ಅಪಾರ ಭ್ರಷ್ಟಾಚಾರಕ್ಕೆ ಹೇತುವಾಗಿ, ರಾಷ್ಟ್ರವಿರೋಧಿ, ಜನವಿರೋಧಿ ಚಟುವಟಿಕೆಗಳಿಗೆ ದಾರಿಮಾಡುತ್ತದೆ.

ವ್ಯಭಿಚಾರ ಕಾನೂನಿಗೂ ವಿರುದ್ಧವಾಗಿದೆ. ಬಯಸಿ ಬಂದ ಸ್ತ್ರೀಯರನ್ನು ಭೋಗಿಸುವುದು ತಪ್ಪಲ್ಲ ಎನ್ನುತ್ತೀರಿ. ೬೦ ದಾಟಿದ ವ್ಯಕ್ತಿಯನ್ನು ಬಯಸಿ ಬರುವವರು ಲೈಂಗಿಕಸುಖಕ್ಕಾಗಿ ಖಂಡಿತ ಬರಲಾರರು. ಮುಖ್ಯಮಂತ್ರಿ ಅಥವಾ ಮಂತ್ರಿ, ರಾಜಕಾರಣಿಯಾಗಿರುವ ವ್ಯಕ್ತಿಯಿಂದ ಏನೋ ಬೇರೆ ಪ್ರಯೋಜನ ಪಡೆಯುವುದಕ್ಕಷ್ಟೇ ಅವರು 'ಬಯುಸಿಬರುವುದು' ಸಾಧ್ಯ. ಆ ಪ್ರಯೋಜನವನ್ನು ಅವರು ಈ ಮಂತ್ರಿಯ ಲೈಂಗಿಕ ದೌರ್ಬಲ್ಯ ವನ್ನುಪಯೋಗಿಸಿಕೊಂಡು ಪಡೆದುಕೊಳ್ಳುತ್ತಾರೆ. ಸೈಟೋ, ಉದ್ಯೋಗವೋ, ಟ್ರಾನ್ಸ್‌ಫರೋ, ಕಾಂಟ್ರಾಕ್ಟೋ, ಪ್ರಮೋಶನ್ನೋ, ಹಣವೋ ಇತ್ಯಾದಿ. ಆದ್ದರಿಂದ ಇದು ಅನ್ಯಾಯ. ಅಪರಾಧ. ಅಸಮರ್ಥನೀಯ. ನಿಂದ್ಯವೇ ಹೊರತು 'ವಂದ್ಯ' ಖಂಡಿತ ಅಲ್ಲ.

ಮಂತ್ರಿ ಸ್ಥಾನದಲ್ಲಿದ್ದವರು ಜವಾಬ್ದಾರಿಯಿಂದ ಮಾತಾಡಬೇಕು. ಮೊನ್ನೆ ಟಿ.ಜಾನ್ ಆಡಿದ ಮಾತಿನ ಪರಿಣಾಮ ಏನಾಯಿತೆಂಬುದು ನಿಮಗೂ ತಿಳಿದಿರಬೇಕು. ಮನಸ್ಸಿನಲ್ಲಿ ಎಂಥೆಂಥ ಹೊಲಸು ಭಾವನೆಗಳು ಬರುತ್ತವೆ-ಎಲ್ಲರಿಗೂ. ಅದನ್ನು ವಿವೇಕ, ಸಂಯಮಗಳಿಂದ ಸೋಸಿ, ಶುದ್ಧೀಕರಿಸಿ ವ್ಯಕ್ತಗೊಳಿಸುವುದು ಸಂಸ್ಕೃತಿ, ನಾಗರಿಕತೆ. ನಾವು ಮಾಡುವುದನ್ನೆಲ್ಲಾ ಆಡಿ ತೋರಿಸುವುದು ಸರಿಯಲ್ಲ. ಸೂಳೆಯೂ ರಸ್ತೆಯ ಮೇಲೆ ಸಂಭೋಗಿಸಲು ಒಪ್ಪುವುದಿಲ್ಲ. ಅಂದರೆ ಕೆಲವು ಕ್ರಿಯೆಗಳನ್ನು ಮಾಡುವುದು ಸಹಜವಾದರೂ ಅದನ್ನಲ್ಲಿ ಬಹಿರಂಗವಾಗಿ ಮಾಡುವುದು ಸರಿಯಲ್ಲ. ಇದನ್ನು ನಿಮ್ಮಂಥ ಮಹಾವಿದ್ವಾಂಸರೂ, ಕುವೆಂಪು ಮಹಾಕವಿಯ ಶಿಷ್ಯರೂ ಆಗಿರುವ ಹಿರಿಯರಿಗೆ ತಿಳಿಹೇಳಬೇಕಾಗಿರಲಿಲ್ಲ. ಆದರೆ ನೀವು ಪಟೇಲರನ್ನು ಆ ಹೇಳಿಕೆಗಾಗಿ 'ವಂದ್ಯರು' ಎಂದು ಬರೆದದ್ದಕ್ಕೆ ಹೇಳಬೇಕಾಯಿತು.

ಯಾವ ಮಾತನ್ನು ಅಥವಾ ಕ್ರಿಯೆಯನ್ನು ಎಲ್ಲಿ ಯಾವಾಗ, ಯಾರೊಡನೆ, ಹೇಗೆ ಮಾಡಬೇಕು, ಮಾಡಬಾರದು ಎನ್ನುವ ಔಚಿತ್ಯಪ್ರಜ್ಞೆ ಇಲ್ಲದ ವ್ಯಕ್ತಿಯನ್ನು 'ವಂದ್ಯ'ರೆನ್ನುವುದು ಹೇಗೆ? ಕೋಣೆಯೊಳಗೆ ಮಾಡಬೇಕಾದ ಕ್ರಿಯೆಯನ್ನು ಬೀದಿಯಲ್ಲಿ ಮಾಡುವುದು ವಿವೇಕವೇ? ನಾಲ್ಕು ಜನ ಆಪ್ತ ಸ್ನೇಹಿತರೊಡನೆ ಸರಸಸಲ್ಲಾಪದಲ್ಲಿ ಆಡಬಹುದಾದ ಮಾತನ್ನು ಕೋಟ್ಯಂತರ ಜನರ ಮುಂದೆ ಅದೂ ಮುಖ್ಯಮಂತ್ರಿಯೊಬ್ಬ ಆಡಬಹುದೇ ? ಅದು ನಿಂದ್ಯವಲ್ಲದೆ ವಂದ್ಯವೇ?

ಜೆ.ಎಚ್.ಪಟೇಲರಿಗೆ ಹಾಸ್ಯಪ್ರಜ್ಞೆಯಿದ್ದುದು ನಿಜ. ಆದರೆ ಅವರು ತಮ್ಮ ಕರ್ತವ್ಯವನ್ನು ಗಂಭೀರವಾಗಿ ಸ್ವೀಕರಿಸದೆ, ಎಲ್ಲವನ್ನು ಹಾಸ್ಯದ , ಹಾರಿಕೆಯ ಮಾತುಗಳಿಂದ ಜಾರಿಸಿ, ಸಾರಿಸಿ ದಿನಗಳೆದರು. ಸಮಾಜವಾದಿಯಂತೆ ಮಾತಾಡುತ್ತಾ ಮಜಾವಾದಿಯಾಗಿ ಬಾಳಿದರು. ಅವರ ಆಡಳಿತ ಕಾಲದಲ್ಲಿ ಕೆಲವು ಹೊಸಜಿಲ್ಲೆಗಳ ರಚನೆಯಾದುದು ನಿಜವಾದರೂ, ಅವುಗಳಿಂದ ಜನತೆಗೆ ಆಗಿರುವ ಪ್ರಯೋಜನ ಅಷ್ಟಕ್ಕಷ್ಟೆ. ಅದೊಂದು ಹುಸಿ ಸಾಧನೆ- Pseudo Achivement.

ಪಟೇಲ್ ದುಷ್ಟನಲ್ಲ. ಆದರೆ ದೌರ್ಬಲ್ಯಗಳಿಂದ ತುಂಬಿದ ವ್ಯಕ್ತಿ. ಆಕಸ್ಮಾತ್ತಾಗಿ (ದೇವೇಗೌಡರು ಪ್ರಧಾನಿಯಾದ್ದರಿಂದ) ಮುಖ್ಯಮಂತ್ರಿ ಪೀಠವೇರಿದ ಆತ ತನ್ನ ಕಡೆಕಾಲದಲ್ಲಿ ಸಾಧ್ಯವಾದಷ್ಟು ಮಜಾ ಮಾಡಿಹೋದ-ಅಷ್ಟೆ. ಇನ್ನು ನಿಮಗೇನಾದರೂ ಆತನಿಂದ ವೈಯಕ್ತಿಕ ಲಾಭವಾಗಿದ್ದರೆ ಆಗಿರಬಹುದು. ಅದಕ್ಕೇ ನೀವು ಆತನನ್ನು 'ವಂದ್ಯ' ಎಂದು ಹೊಗಳುತ್ತಿರಬಹುದು. ಅದರ ಗುಟ್ಟು ನಿಮಗೇ ಗೊತ್ತು. ಆದರೆ ನನ್ನಂಥ ಒಬ್ಬ ಸಾಮಾನ್ಯ ಪ್ರಜೆಯ ದೃಷ್ಟಿ : ಅವರ ಆ ಹೇಳಿಕೆಗಾಗಿ ಅವರು ವಂದ್ಯರಲ್ಲ, ನಿಂದ್ಯರೇ. ಅವರ ನಿಂದ್ಯವರ್ತನೆಯನ್ನು ವಂದ್ಯವೆಂದು ವೈಭವೀಕರಿಸುವ ನಿಮ್ಮನ್ನು ಅದೇ ಸಾಲಿಗೆ ಸೇರಿಸಬೇಕೆನಿಸುತ್ತದೆ.

ನಿಮಗೆ ಈ ಪತ್ರ ಓದಿ (ದರೆ) ಬೇಸರವಾಗಬಹುದು. ಆದರೆ ನಿಮ್ಮ ಬರಹದಿಂದ ನನಗಾದ ಬೇಸರವನ್ನೇ ನಾನು ಈ ಮೂಲಕ ತೋಡಿಕೊಂಡಿದ್ದೇನೆ ಎನ್ನುವುದನ್ನು ತಿಳಿಸಲು ಬಯಸುತ್ತೇನೆ.

೨೦.೩.೨೦೦೧ನೆಯ ದಿನಾಂಕದಂದು ನಾನವರ ಪತ್ರಕ್ಕೆ ಬರೆದ ಉತ್ತರವಿದು :

'ಪುಸ್ತಕ ಪ್ರಪಂಚ'ದ ಜನವರಿ ತಿಂಗಳ (೨೦೦೧) ಸಂಚಿಕೆಯಲ್ಲಿ ಶ್ರೀ ಜೆ.ಎಚ್.ಪಟೇಲರ ಬಗ್ಗೆ ನಾನು ಬರೆದ ಸಂಪಾದಕೀಯವನ್ನು ಓದಿ, ನಿಮ್ಮ ಅಭಿಪ್ರಾಯಗಳನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸಿದ್ದಕ್ಕಾಗಿ ವಂದನೆಗಳು.

ಶ್ರೀ ಪಟೇಲರ ಜೀವನದಲ್ಲಿ ಪಾರದರ್ಶಿಕತೆಯಿದ್ದದ್ದರಿಂದ , ಅವರು ತೀರಿಕೊಂಡ ಸಂದರ್ಭದಲ್ಲಿ, ಸಂಪಾದಕೀಯದಲ್ಲಿ ಎರಡು ಒಳ್ಳೆಯ ಮಾತಾಡುವುದು ತಪ್ಪಲ್ಲ ಎನಿಸಿತು. ಕ್ಲಿಂಟನ್ ಮೊದ ಮೊದಲು ತನ್ನ ತಪ್ಪನ್ನು ಮುಚ್ಚಿಕೊಂಡಿದ್ದರೆನ್ನುವುದೂ ನನ್ನ ಮನಸ್ಸಿನಲ್ಲಿತ್ತು. ನನ್ನ ಲೇಖನದಿಂದ ಪ್ರಚೋದಿತರಾಗಿ ಸಮಸ್ತ ಜನರೂ ವ್ಯಭಿಚಾರಮಾಡಬೇಕೆಂಬುದು ನನ್ನ

ಉದ್ದೇಶವಲ್ಲ. ಅಂಥ ದೌರ್ಬಲ್ಯ ಎಂಥವರನ್ನೂ ಹೇಯಸ್ಥಿತಿಗೆ ನೂಕುತ್ತದೆಂಬುದೇ ನನ್ನ ಅನಿಸಿಕೆ. ಅದು ಜಗತ್ತಿಗೆ ತಿಳಿಯಬೇಕೆಂಬುದೇ ನನ್ನ ಉದ್ದೇಶ. 'ಉಳಿದವರೆಲ್ಲ ಮಾನಸಿಕವಾಗಿ ವ್ಯಭಿಚಾರಿಗಳೇ' ಎಂಬ ನಿಮ್ಮ ಮಾತು ಸತ್ಯಸ್ಯ ಸತ್ಯ.

ಇನ್ನು ನಿಮಗೇನಾದರೂ ಆತನಿಂದ ವೈಯಕ್ತಿಕ ಲಾಭವಾಗಿದ್ದರೆ ಆಗಿರಬಹುದು. ಅದಕ್ಕೆ ನೀವು ಆತನನ್ನು 'ವಂದ್ಯ' ಎಂದು ಹೊಗಳುತ್ತಿರಬಹುದು, ಎಂಬ ಸಂಶಯ ಕೀಟ ನಿಮ್ಮ ತಲೆಯನ್ನು ಹೊಕ್ಕಿರುವುದು ಸಹಜ. ಏಕೆಂದರೆ ಸಾಹಿತಿಯೊಬ್ಬರು ಪಟೇಲರ ಸ್ನೇಹವನ್ನು ದುರುಪಯೋಗಪಡಿಸಿಕೊಂಡು, ಭಾರಿ ಸಹಾಯ ಪಡೆದದ್ದುಂಟು. ಸ್ವಾಮಿ, ಪಟೇಲರಿಂದ ನನಗೆ ಪ್ರಯೋಜನ ವಾಗುವುದಿರಲಿ , ನನ್ನ ಮಗ ಡಾ.ಶಶಿಧರ ಪ್ರಸಾದರಿಗೆ ಅಪೂರ್ವ ಅಪರಿಹಾರ್ಯ ನಷ್ಟವೊದಗಿ, ನಾನು ಕೆಲವು ಕಾಲ ಮಾನಸಿಕ ಆಘಾತಕ್ಕೊಳಗಾಗಿದ್ದೆ ಎನ್ನುವುದು ೧೯೯೦ನೆಯ ಸಂವತ್ಸರದ ಆಗಸ್ಟ್ ತಿಂಗಳ ಪತ್ರಿಕೆಗಳನ್ನು ಓದಿದವರಿಗೆಲ್ಲ ಗೊತ್ತು. ಆದರೆ ಪ್ರತೀಕಾರ ಮನೋಧರ್ಮ ನನ್ನದಲ್ಲ.

ನಿಮ್ಮ ಅನಿಸಿಕೆಗಳು ಸಹಜ, ಸತ್ಯ; ಅದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ನನ್ನ ಸಂಪಾದಕೀಯ ಲೇಖನಕ್ಕೆ ಸಂಬಂಧಿಸಿದ ಪ್ರತಿಕ್ರಿಯೆ ಕೇವಲ ವ್ಯಕ್ತಿಗತ ವಾದದ್ದಲ್ಲ, ಸಮುದಾಯ ನಿಷ್ಠವಾದದ್ದೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ನಿಮ್ಮ ಪತ್ರವನ್ನೂ ನನ್ನ ಉತ್ತರವನ್ನೂ ಮುಂದಿನ ಪುಸ್ತಕ ಪ್ರಪಂಚದಲ್ಲಿ ಪ್ರಕಟಿಸುತ್ತೇನೆ. ಇದರಿಂದ ನನ್ನ ಮತ್ತು ಪಟೇಲರ ಬಣ್ಣ ಕನ್ನಡಿಗರಿಗೆ ಗೊತ್ತಾಗಲೆಂಬುದೇ ನನ್ನ ಉದ್ದೇಶ. ಪ್ರಕಟಣೆಗೆ ನಿಮ್ಮ ಆಕ್ಷೇಪವಿಲ್ಲವೆಂದು ಭಾವಿಸಿದ್ದೇನೆ. ಆದರೆ ಪುಸ್ತಕ ಪ್ರಪಂಚ ಮಾಸಿಕ ಪತ್ರಿಕೆಯಾದ್ದರಿಂದ ಈ ಪತ್ರವ್ಯವಹಾರವನ್ನು ಇಷ್ಟಕ್ಕೇ ಸೀಮಿತಗೊಳಿಸಲಾಗುತ್ತದೆ.

ಇಂತು

ದೇಜಗೌ

೨೨.೩.೨೦೦೧ನೆಯ ದಿನಾಂಕದಂದು ಶ್ರೀ ಬಿ.ವಿ.ರಾವ್ ಅವರು ಬರೆದ ಉತ್ತರವಿದು :

ನಿಮ್ಮ ತಾ.೨೦ರ ಪತ್ರ ಓದಿ ಸಂತೋಷ, ಆಶ್ಚರ್ಯ ಹಾಗೂ ಕೃತಜ್ಞತಾ, ಭಾವಗಳಿಂದ ತುಂಬಿದ ಮನಸ್ಸಿನಿಂದ ಈ ಪತ್ರ ಬರೆಯುತ್ತಿದ್ದೇನೆ. ನಿಮ್ಮಿಂದ ಉತ್ತರ ಬಂದೀತೆಂದುನಾನು ನಿರೀಕ್ಷಿಸಿರಲಿಲ್ಲ. ಏಕೆಂದರೆ ಈ ತಲೆಮಾರಿನ ಸಾಹಿತಿಗಳ ಪೈಕಿ ಅನಾಮಧೇಯನೊಬ್ಬನ, ಅದೂ ಟೀಕಿಸಿ ಬರೆದ ಪತ್ರಕ್ಕೆ ಉತ್ತರಿಸುವ ಸೌಜನ್ಯವಿರುವವರನ್ನು ನಾನು ಕಂಡ ನೆನಪಾಗುವುದಿಲ್ಲ. ನೀವು ಹಿರಿಯ ಸಾಹಿತಿಗಳು, ವಿದ್ವಾಂಸರು ಅಲ್ಲದೆ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದವರು. ಆದಾಗ್ಯೂ ನೀವು ನನ್ನಂಥ ಸಾಮಾನ್ಯನ ಟೀಕೆಗೆ ಅತ್ಯಂತ ಸೌಜನ್ಯಪೂರ್ವಕವಾಗಿ ಉತ್ತರಿಸಿದ್ದೀರಿ. ಇದು ನನಗೆ ನಿಮ್ಮ ಮೇಲಿದ್ದ ಗೌರವವನ್ನು (ಅದು ನಿಮ್ಮ ಪಟೇಲರ ಕುರಿತ ಸಂಪಾದಕೀಯದಿಂದ ಕೊಂಚ ಕಡಿಮೆಯಾಗಿತ್ತು-ನಿಜ.) ತುಂಬ ಹೆಚ್ಚಿಸಿದೆ. ಶ್ರೀ ಕುವೆಂಪು ಹೇಳಿದ-

''ಮುಗಿದಿರಲಿ ಕೈ ಮತ್ತೆ ಮಣಿದಿರಲಿ ಮುಡಿ ಮತ್ತೆ ಮಡಿಯಾಗಿರಲಿ ಬಾಳ್ವೆ'' ಎಂಬ ಮಾತು ನಿಮ್ಮ ಈ ವರ್ತನೆಯಲ್ಲಿ ಪ್ರತಿಬಿಂಬಿತವಾದಂತೆ ಕಾಣುತ್ತದೆ. ನಿಮ್ಮ ಈ ಸೌಜನ್ಯಕ್ಕೆ ಅನಂತ ಕೃತಜ್ಞತೆಗಳು.

ನೀವು ನೀಡಿದ ಸ್ಪಷ್ಟೀಕರಣದಿಂದ ನನಗೆ ಬಹುಮಟ್ಟಿಗೆ ತೃಪ್ತಿಯಾಗಿದೆ. ನನ್ನ ಪತ್ರವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ತಿಳಿಸಿದ್ದೀರಿ ಆಗ ನಾನೇನು ಬರೆದಿದ್ದೆ ಎನ್ನುವುದು ನಿಖರವಾಗಿ ನೆನಪಿಲ್ಲ. (ಸ್ಥೂಲವಾಗಿ ನೆನಪಿದೆ.) ನನ್ನ ಅಂದಿನ ಪ್ರತಿಕ್ರಿಯೆ ತೀರ ಖಾರವಾಗಿದ್ದಿರಬೇಕೆಂದು ಈಗ ಅನಿಸಿದರೂ ಪ್ರಕಟಿಸುವುದಕ್ಕೆ ನನ್ನ ಆಕ್ಷೇಪವಿಲ್ಲ.

ಅಮೆರಿಕಾದಂತಹ ಸ್ವಚ್ಛಂದ ಲೈಂಗಿಕತೆ ಸ್ವೀಕೃತವಾಗಿರುವ ಸಮಾಜ ದಲ್ಲಿಯೂ ಉನ್ನತ ಅಧಿಕಾರದಲ್ಲಿರುವವರು ಶುದ್ಧ ಚಾರಿತ್ರರಾಗಿರಬೇಕೆಂಬ ಸಾರ್ವಜನಿಕಾಭಿಪ್ರಾಯವಿದೆ. ನಮ್ಮ ಸಮಾಜದಲ್ಲಿ, ಸಂಸ್ಕೃತಿಯಲ್ಲಿ ವ್ಯಭಿಚಾರ ಪಾಪವಷ್ಟೇ ಅಲ್ಲ, ಕಾನೂನಿನ ದೃಷ್ಟಿಯಲ್ಲೂ ಅಪರಾಧವಾಗಿದೆ. ಅಧಿಕಾರ ಸ್ಥಾನದಲ್ಲಿದ್ದವರು ತಮ್ಮ ವಿಷಯಲಂಪಟತನವನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳುವುದರಿಂದ, ಅವರ ಆ ದೌರ್ಬಲ್ಯವನ್ನು ಕೆಲವರು ದುರುಪಯೋಗಪಡಿಸಿ ಕೊಳ್ಳುವ ಸಂಭವ ಖಂಡಿತ ಇರುತ್ತದೆ. ಅಂದರೆ ಭ್ರಷ್ಟಾಚಾರಕ್ಕೊಂದು ದಾರಿ. ಅಲ್ಲದೆ ಉಳಿದವರಿಗೂ ಅದೊಂದು ರೀತಿಯ ಪರೋಕ್ಷ ಪ್ರೇರಣೆಯಾಗಬಹುದು. ಇನ್ನು ಲೈಂಗಿಕ ಸಮಸ್ಯೆ ಮದುವೆಯಾದ ಮಾತ್ರಕ್ಕೇ ಪರಿಹಾರವಾಗಬೇಕೆಂದಿಲ್ಲ, ಅದು ತುಂಬಾ ಸಂಕೀರ್ಣವಾದುದು ಎಂಬ ಸತ್ಯವನ್ನು ನಾನು ಅಲ್ಲಗಳೆಯುವುದಿಲ್ಲ. (ನನಗೆ ೬೩ ವರ್ಷ ವಯಸ್ಸು) ಪಾರದರ್ಶಕತೆ ಇರುವುದು ಒಳ್ಳೆಯದಾದರೂ, ಯಾರಮುಂದೆ ಎಷ್ಟರಮಟ್ಟಿಗೆ ಬತ್ತಲೆಯಾಗಬೇಕೆಂಬ ಔಚಿತ್ಯಪ್ರಜ್ಞೆಯೂ ಅಗತ್ಯವಷ್ಟೆ. ಗೆಳೆಯರ ಖಾಸಗಿಕೂಟದಲ್ಲಾಡುವ ಮಾತನ್ನು ಲಕ್ಷಾಂತರ ಸಾರ್ವಜನಿಕರ ಮುಂದೆ ಅಷ್ಟು ದೊಡ್ಡ ಸ್ಥಾನದಲ್ಲಿದ್ದವರು ಆಡಿದ್ದು ಸರಿಯಲ್ಲ ಎಂದೇ ಈಗಲೂ ನಾನು ನಂಬಿದ್ದೇನೆ. ನಾವು ಎಷ್ಟು ಪಾರದರ್ಶಕರಾಗಬೇಕೆಂದರೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಕೆಲವು ಅಂಗಗಳನ್ನು ಮುಚ್ಚಿಕೊಳ್ಳಬೇಕಾಗುತ್ತದೆ. ಇದು ನಾಗರಿಕ ಲಕ್ಷಣ. ಈ ದೃಷ್ಟಿಯಿಂದ, ಪಟೇಲರ ಮಾತು ಸಮರ್ಥನೀಯವಲ್ಲ. ಅದಕ್ಕಾಗಿ ಅವರು 'ವಂದ್ಯ'ರಂತೂ ಅಲ್ಲ ಎನ್ನುವುದೇ ನನ್ನ ಅನಿಸಿಕೆ.

ಅದೇನೇ ಇರಲಿ, ಈ ಬಗ್ಗೆ ಇನ್ನು ಚರ್ಚಿಸುವ ಅಗತ್ಯವಿಲ್ಲ. ನಿಮಗೆ ಪಟೇಲರಿಂದ ಪ್ರಯೋಜನವಾಗಿಲ್ಲ, ಅಷ್ಟೇ ಅಲ್ಲ ನೋವೂ ಆಗಿದೆ ಎಂಬುದು ನಿಮ್ಮ ಪತ್ರದಿಂದ ತಿಳಿಯಿತು. ಆದಾಗ್ಯೂ ನೀವು ಅವರ ಬಗ್ಗೆ ಅಷ್ಟು ಒಳ್ಳೆಯಮಾತನ್ನು ಬರೆದಿರುವುದು ನಿಮ್ಮ ಸೌಜನ್ಯಕ್ಕೆ ಸಾಕ್ಷಿ. ಅದಕ್ಕಾಗಿ ಅನಂತ ವಂದನೆಗಳು

ಶ್ರೀ ಬಿ.ಬಿ.ರಾವ್ ಅವರ ಸಾಚಾತನದ ಈ ಪತ್ರದೊಂದಿಗೆ ಈ ಪ್ರಕರಣಕ್ಕೆ ಪರದೆ ಎಳೆಯಲಾಗಿದೆ.

ವಾಮಚಿಂತನೆಗೆ ಅಧಿಕೃತ ಕುಮ್ಮಕ್ಕು

ಜಿ.ಟಿ.ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

ವಿಶ್ವವಿದ್ಯಾಲಯ ಧನಸಹಾಯ ಆಯೋಗವು (University Grants Commission, ಹ್ರಸ್ವರೂಪ ಯುಜಿಸಿ) ಕೇಂದ್ರ ಸರ್ಕಾರದ ಅಧೀನದಲ್ಲಿರುವ ಒಂದು ಸ್ವಾಯತ್ತ ಸಂಸ್ಥೆ. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಗುಣನಿಯಂತ್ರಣ ಮತ್ತು ಇವನ್ನು ಪ್ರೋತ್ಸಾಹಿಸಲು ಯುಕ್ತ ಧನ ಸಹಾಯ ಯುಜಿಸಿಯ ಒಂದು ಉದ್ದೇಶ, ಪ್ರಾಯಶಃ ಪ್ರಧಾನ ಉದ್ದೇಶ.

ಇಂಥ ಒಂದು ಸಂಸ್ಥೆ ನಮ್ಮ ಪ್ರಜಾಪ್ರಭುತ್ವಾತ್ಮಕ ವ್ಯವಸ್ಥೆಯಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕು? ಸರಳ ಉತ್ತರ: ಯುಜಿಸಿಯ ಸಕಲ ಕಾರ್ಯಕಲಾಪಗಳೂ ಸಂವಿಧಾನ ಬದ್ಧವಾಗಿರಬೇಕು, ಪ್ರಜಾಪ್ರಭುತ್ವಾತ್ಮಕವಾಗಿರಬೇಕು, ಮತ್ತು ಪಾರದರ್ಶಕವಾಗಿರಬೇಕು. ಜನರಲ್ಲಿ ವೈಜ್ಞಾನಿಕ ಮನೋಧರ್ಮ ಅರಳಲು ಅವಶ್ಯವಾಗುವ ಪರಿಸರವನ್ನು ಸರ್ಕಾರ ಸೃಷ್ಟಿಸಲು ಬದ್ಧ ಎಂದಿದೆ ಸಂವಿಧಾನ.

ಹಾಗಾದರೆ ವೈಜ್ಞಾನಿಕ ಮನೋಧರ್ಮ ಎಂದರೇನು? (ಇದೇ ಹೆಸರಿನಲ್ಲಿ ನಾನು ಬರೆದಿರುವ ಪುಸ್ತಕವನ್ನು ನವಕರ್ನಾಟಕ ಪ್ರಕಾಶನ ಹೊರತಂದಿದೆ.) ವಿಶ್ವದಲ್ಲಿ ಪ್ರತಿಯೊಂದು ಘಟನೆಯೂ ಕಾರ್ಯ- ಕಾರಣ ನಿಯಮದಿಂದ ಬಂಧಿತವಾಗಿದೆ: ''ಕಾರಣವಿಲ್ಲದೆ ಕಾರ್ಯ(ಪರಿಣಾಮ) ಇಲ್ಲ, ಕಾರ್ಯದ ಹಿನ್ನೆಲೆಯಲ್ಲಿ ಕಾರಣವಿದ್ದೇ ಇದೆ,'' ಎಂಬುದು ಈ ನಿಯಮದ ಸಾರ. ಇದು ಎಲ್ಲರಿಗೂ ಅನುಭವವೇದ್ಯ.

ಮಳೆ ಬರುವುದು ಕಾರ್ಯ. ಇದರ ಹಿನ್ನೆಲೆ ಕಾರಣವನ್ನು ತಿಳಿಯುವುದು ಸುಲಭ. ಬಾನಿನಲ್ಲಿ ದಟ್ಟ ಮೋಡಗಳ ಜಮಾವಣೆ ಕಾರಣ. ಇದರ ಪರಿಣಾಮ ಅಥವಾ ಕಾರ್ಯ ಮಳೆ ಅಲ್ಲವೇ? ಕಾರ್ಯವು ಪ್ರಕಟವಾಗಿದ್ದಾಗ ಕಾರಣದ ಶೋಧನೆ, ಅಂತೆಯೇ, ಕಾರಣವು ತಿಳಿದಿದ್ದಾಗ ಕಾರ್ಯದ ಶೋಧನೆ — ಈ ಅನ್ವೇಷಣೆಗೆ ತಾರ್ಕಿಕ ಮಾರ್ಗ ಎಂದು ಹೆಸರು. ನಮಗೆ 'ಕಾರ್ಯ' ಅಥವಾ 'ಕಾರಣ' ತಿಳಿದಿಲ್ಲವೆಂದರೆ ನಮ್ಮ ಅನ್ವೇಷಣೆ ನ್ಯೂನವಾಗಿದೆಯೆಂದು ಮಾತ್ರ ಅರ್ಥ. ಇನ್ನಷ್ಟು ಮುನ್ನಡೆಯುವುದೊಂದೇ ಹಾದಿ. ಏಕೆಂದರೆ ವಿಶ್ವದಲ್ಲಿ ಕಾರ್ಯ ರಹಿತ ಕಾರಣವಿಲ್ಲ, ಕಾರಣರಹಿತ ಕಾರ್ಯವೂ ಇಲ್ಲ.

ಇಂಥ ತಾರ್ಕಿಕ ಶೋಧನೆಯನ್ನು ನೈಸರ್ಗಿಕ ವಿದ್ಯಮಾನಗಳಿಗೆ ಅನ್ವಯಿಸುವಾಗ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಬೇಕಾಗುತ್ತದೆ. ನಿಸರ್ಗವೇ ಇದನ್ನು ನಮಗೆ ವಿಧಿಸುತ್ತದೆ. ಇದರ ಹೆಸರು ವೈಜ್ಞಾನಿಕ ವಿಧಾನ. ವೀಕ್ಷಣೆ, ಪ್ರಯೋಗಗಳು ಇದರ ಅವಿಭಾಜ್ಯ ಅಂಗ. ಅಂದರೆ, ಯಾವುದೇ ಸಮಸ್ಯೆ ಕುರಿತಂತೆ ಮನುಷ್ಯನ ಫಲವಂತ ಮತಿ ಅನೇಕ ಪರಿಹಾರಗಳನ್ನು ಕೇವಲ ಅಂತರ್ಬೋಧೆ (intuition), ಕಲ್ಪನೆ (imagination), ಸಾದೃಶ್ಯ (similarity), ಪೂರ್ವನಿದರ್ಶನ ಮುಂತಾದವುಗಳ ಆಧಾರ ದಿಂದ ಸೂಚಿಸಬಹುದು. ಇವು ಪ್ರಯೋಗದ ಪಾಷಾಣನಿಕಷದಲ್ಲಿ ಉತ್ತೀರ್ಣವಾಗದಿದ್ದರೆ ಇವನ್ನು ಗಾಳಿಬರುಡೆಗಳು ಎಂದು ತಿರಸ್ಕರಿಸುವುದೊಂದೇ ಮಾರ್ಗ.

ಪ್ರಯೋಗದಲ್ಲಿ ಉತ್ತೀರ್ಣವಾದ ಊಹೆ

ಮಾತ್ರ ಆ ಸಮಸ್ಯೆಯ ಪರಿಹಾರ ಎನ್ನಿಸುತ್ತದೆ-ಇದೂ ತಾತ್ಕಾಲಿಕ. ಏಕೆಂದರೆ ವಿಶ್ವದಲ್ಲಿ ಶಾಶ್ವತ ಸಮಸ್ಯೆಯೂ ಇಲ್ಲ, ಶಾಶ್ವತ ಪರಿಹಾರವೂ ಇಲ್ಲ- ನಿರಂತರ ಸತ್ಯಾನ್ವೇಷಣೆಯೊಂದೇ ಮಾನವನ ಮುಂದೆ ತೆರೆದಿರುವ ಹಾದಿ. ಆದ್ದರಿಂದಲೇ ಡಿ.ವಿ.ಗುಂಡಪ್ಪನವರು (೧೮೮೭-೧೯೭೫) ಬರೆದಿರುವಂತೆ :

ಸಂದೇಹವಿಣ್ಕೃತಿಯೊಳಿನ್ನಿಲ್ಲವೆಂದಲ್ಲ
ಇಂದು ನಂಬಿಹುದೆ ಮುಂದೆಂದುಮೆಂದಲ್ಲ
ಕುಂದು ತೋರ್ದಂದದನು ತಿದ್ದಿಕೊಳೆ ಮನಸುಂಟು
ಇಂದಿಗೀ ಮತವುಚಿತ ಮಂಕುತಿಮ್ಮ

ಹೀಗೆ, ಯಾವುದೇ ಸಮಸ್ಯೆ ಕುರಿತಂತೆ ಪರಿಹಾರವನ್ನು ಅನ್ವೇಷಿಸಲು ವ್ಯಕ್ತಿಯು ವೈಜ್ಞಾನಿಕ ವಿಧಾನ ಆಧರಿಸಿ ಮುನ್ನಡೆಯುವಾಗ ಆತನ ಮನಸ್ಸಿಗೆ ಒಂದು ''ಹದ'' ಅಥವಾ ''ಸ್ಥೈರ್ಯ'' ಒದಗುತ್ತದೆ. ಅರ್ಜುನ ಲಕ್ಷ್ಯ ಅಥವಾ ಕರ್ಣ ಏಕಾಗ್ರತೆ ಇಂಥ ಮನಃಸ್ಥೈರ್ಯಕ್ಕೆ ನಿದರ್ಶನಗಳು. ಈ ಸನ್ನಿವೇಶದಲ್ಲಿ ವ್ಯಕ್ತಿಯು ಪೂರ್ತಿ ಸಮಸ್ಯೆಯಲ್ಲಿಯೇ ಲೀನನಾಗಿ ಅದೇ ಆಗಿಬಿಡುತ್ತಾನೆ. ಇಂಥ ಮನಃಸ್ಥಿತಿಗೆ ವೈಜ್ಞಾನಿಕ ಮನೋಧರ್ಮ(scientific temper) ಎಂದು ಹೆಸರು.

ಆದ್ದರಿಂದ ಸರ್ಕಾರದ ಯಾವುದೇ ಅಂಗಸಂಸ್ಥೆಯ ವ್ಯವಹಾರಗಳು ಜನರಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಕುದುರಿಸಲು ವೇದಿಕೆ ಒದಗಿಸಬೇಕು ಎಂಬುದು ಸ್ಪಷ್ಟ-ಸಂವಿಧಾನದ ಆದೇಶವಿದು.

ವಾಮಚಿಂತನೆ ಎಂದರೆ ಪ್ರಗತಿಮಾರಕ, ಸಮಾಜಶೋಷಕ, ಅಂಧಶ್ರದ್ಧಾ ಪ್ರಚೋದಕ, ರಾಷ್ಟ್ರಘಾತಕ ಇತ್ಯಾದಿ ಯೋಚನೆಗಳೆಂದರ್ಥ. ಕೊಲೆ, ಸುಲಿಗೆ , ದರೋಡೆ ಮುಂತಾದವು ವಾಮಚಿಂತನೆಯ ದುಷ್ಫಲಗಳು ; ಕುರುಡು ನಂಬಿಕೆ, ಪ್ರಕೃತಿವಿರೋಧೀ ನಡವಳಿಕೆ, ಮಾಯ, ಮಾಟ ಮುಂತಾದವು ಅದೇ ವಾಮಚಿಂತನೆಯ ಮಾನಸಿಕ ರೋಗಗಳು. ದುಷ್ಫಲ ಏನೇ ಇರಲಿ ಮೂಲಪ್ರೇರಣೆ ಮಾತ್ರ ವಾಮಚಿಂತನೆಯೇ.

ಈ ದುಷ್ಫಲಗಳ ಪೈಕಿ ಅಗ್ರಸ್ಥಾನ ಫಲಜ್ಯೋತಿಷ್ಯಕ್ಕೆ (astrology)ಸಲ್ಲುತ್ತದೆ. ಎಲ್ಲ ಕುರುಡುನಂಬಿಕೆಗಳ ರಕ್ಕಸತಾಯಿ ಇದು. ಜಾತಕದ ಮೂಲಕ ಇದರ ವ್ಯವಹಾರ.

ವ್ಯಕ್ತಿ ಜನಿಸಿದ ಕ್ಷಣ ಮತ್ತು ಸ್ಥಳ ಆಧರಿಸಿ ಆತನ ಜಾತಕವನ್ನು (horoscope) ತಯಾರಿಸಲಾಗುತ್ತದೆ.ಇಂದು ಈ ಕೆಲಸವನ್ನು ಗಣಕಗಳು (computers)ಕ್ಷಣಮಾತ್ರದಲ್ಲಿ ಮಾಡಿಕೊಡುತ್ತವೆ. ಜಾತಕದಲ್ಲಿಮೇಷದಿಂದ ಮೀನದವರೆಗೆ ೧೨ ರಾಶಿಗಳು (ಮನೆಗಳು) ಇವೆ. ವ್ಯಕ್ತಿಯು ಜನನ ಕ್ಷಣದಲ್ಲಿ ಸೂರ್ಯ, ಚಂದ್ರ , ಕುಜ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತು ಇವುಗಳ ವಿತರಣೆಯನ್ನು ಜಾತಕ ಪ್ರದರ್ಶಿಸುತ್ತದೆ. ಈ ಹಂತದ ತನಕ ಇದೊಂದು ವಿಜ್ಞಾನ : ಖಗೋಳವಿಜ್ಞಾನ (astronomy)ಎಂದು ಹೆಸರು.

ಮೇಲೆ ನಮೂದಿಸಿರುವ ೯ಕಾಯಗಳ ನೆಲೆ ಆಧರಿಸಿ ಆ ಜಾತಕನ ಭೂತ-ವರ್ತಮಾನ-ಭವಿಷ್ಯಗಳನ್ನು 'ಓದುವಾತ'' ಫಲಜ್ಯೋತಿಷಿ (astrologer). ಉದಾಹರಣೆಗೆ ಶನಿಯು ಕುಜನ ಮನೆಯಲ್ಲಿ ಸಂಗಮಿಸುವಾಗ ಆ ಜಾತಕನಿಗೆ ಆಪತ್ತಿದೆ ಎನ್ನುತ್ತಾನೆ ಫಲಜ್ಯೋತಿಷಿ. ಈ ದುರ್ಘಟನೆ ಎಂದು ಸಂಭವಿಸಲಿದೆ ಎಂದು ಮುಂದಾಗಿಯೇ ಕಣಿನುಡಿಯುತ್ತಾನೆ, ಹಾಗೂ ಆಗ ಘಟಿಸಲಿರುವ ಆಪತ್ತಿನಿಂದ ಪಾರಾಗಲು ವ್ಯಕ್ತಿ ಏನು ಮಾಡಬೇಕು ಎಂಬುದನ್ನು ವಿವರಿಸುತ್ತಾನೆ: ಹರಕೆ, ಹೋಮ, ಶಾಂತಿ, ತಾಯಿತಿ ಮುಂತಾದವು ಇಲ್ಲಿಯ ಪರಿಹಾರೋಪಾಯಗಳು. ತನ್ನ ಈ

''ಆಧ್ಯಾತ್ಮಿಕ''ಸೇವೆಗೆ ಫಲಜ್ಯೋತಿಷಿಯು ಜಾತಕನಿಂದ ಸಮೃದ್ಧ ದಕ್ಷಿಣೆ ಪಡೆಯುತ್ತಾನೆ. ವಾಸ್ತವವಾಗಿ ಇದೊಂದು ಅಂತಾರಾಷ್ಟ್ರೀಯ ದಂಧೆ: ಮುಗ್ಧಮತಿಗಳ ಕುರುಡು ನಂಬಿಕೆ ಗಳಿಗೆ ಗರಳವೆರೆದು ತಾವು (ಫಲಜ್ಯೋತಿಷಿಗಳು) ಸಂಭ್ರಮಿಸುವ ವಿಕರಾಳ ವರ್ತನೆ.

ನಿಸರ್ಗದಲ್ಲಿ ಫಲಜ್ಯೋತಿಷ್ಯಕ್ಕೆ ಆಧಾರ ವಿಲ್ಲ, ಅಸ್ತಿತ್ವವಿಲ್ಲ, ಕವಡೆ ಕಿಮ್ಮತ್ತು ಬೆಲೆಯೂ ಇಲ್ಲ.(ನಾನು ಬರೆದಿರುವ 'ಜಾತಕ ಮತ್ತು ಭವಿಷ್ಯ' ಕೃತಿಯಲ್ಲಿ ಈ ಎಲ್ಲ ವಿವರಗಳನ್ನೂ ಚರ್ಚಿಸಿದ್ದೇನೆ.) ಹಾಗಾದರೆ ಇದು ಸಾರ್ವ ಕಾಲಿಕವಾಗಿಯೂ ಸಾರ್ವದೈಶಿಕವಾಗಿ ಪ್ರವರ್ಧಿಸುತ್ತಿರುವುದು ಹೇಗೆ? ಏಕೆ? ದುಷ್ಟ ಅಭಿಲಾಷೆಗಳಿರದ, ಸ್ವಾರ್ಥಲಾಲಸೆಗಳಿರದ, ಕುಟಿಲ ಚಿಂತನೆಗಳಿರದ ಕಾಲವಿತ್ತೇ ? ವ್ಯಕ್ತಿ ಗಳಿದ್ದರೇ? ಈ ಎಲ್ಲ ಕರಾಳ ಚಿಂತನೆಗಳ ಘನೀಭವಿತ ''ಶಾಸ್ತ್ರ''ವೇ ಫಲಜ್ಯೋತಿಷ್ಯ. ಆಕಾಶಕಾಯಗಳು ನಿರ್ಧರಿಸುವುದಿಲ್ಲ ವ್ಯಕ್ತಿಯ ಭವಿಷ್ಯವನ್ನು, ಆತನೇ ತನ್ನ ಭವಿಷ್ಯದ ನಿರ್ಮಾಪಕ ಎಂಬ ಸರಳ ಸತ್ಯವನ್ನು ಆತ ಎಂದು ಅರಿತು ಅನುಷ್ಠಾನಿಸುತ್ತಾನೋ ಅಂದು ಫಲಜ್ಯೋತಿಷ್ಯ ಮಂಗಮಾಯ ! ಆದ್ದರಿಂದ ವ್ಯಕ್ತಿ ಸ್ವಪ್ರಯತ್ನದಿಂದ ನೈತಿಕ ಮಾರ್ಗದಲ್ಲಿ ಮುನ್ನಡೆಯಲು ಸತತ ಕಾರ್ಯೋದ್ಯುಕ್ತನಾಗಿರಬೇಕೇ ವಿನಾ ಜಾತಕ ದಂಥ ಪಾತಕವನ್ನು ಅವಲಂಬಿಸುವುದಲ್ಲ.

ಈಗ ಯುಜಿಸಿಗೆ ಬರೋಣ. ಇಸವಿ ೨೦೦೧ರಲ್ಲಿ ಯುಜಿಸಿ ಏನು ಮಾಡಿದೆ ಗೊತ್ತೇ? ಎಲ್ಲ ವಿಶ್ವವಿದ್ಯಾಲಯಗಳಿಗೂ ಫಲಜ್ಯೋತಿಷ್ಯದ ಪೀಠ, ತರಗತಿ, ಬೋಧನೆ ಮುಂತಾದವನ್ನು ಸ್ಥಾಪಿಸಲು ಧನಸಹಾಯ ಒದಗಿಸಲು ಮುಂಬಂದಿದೆ! ''ವೈದಿಕ ಫಲಜ್ಯೋತಿಷ್ಯವು ಸಕಲ ಜ್ಞಾನ ವಿಜ್ಞಾನಗಳ ಆಕರ, ಅದರಲ್ಲಿ ನಮ್ಮ ಯುವಕ ಯುವತಿ ಯರು ಶಿಕ್ಷಣ ಪಡೆದು ಪಾಶ್ಚಾತ್ಯ ದೇಶಗಳಿಗೆ ತೆರಳಿ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಅಲ್ಲಿ ಪ್ರಸರಿಸಬೇಕು,'' ಮುಂತಾಗಿ ಹರಿದಿದೆ ಯುಜಿಸಿಯ ಚಿಂತನ ಧಾಟಿ. ಅಂದರೆ ಬುದ್ಧಿ ಮೌಢ್ಯಕ್ಕೆ ರಾಜಮರ್ಯಾದೆ! ಈಗಾಗಲೇ ದೇಶದ ಅನೇಕ ವಿಶ್ವವಿದ್ಯಾಲಯಗಳು ಯುಜಿಸಿಯ ''ಆಮಿಷ''ಕ್ಕೆ ''ಎರೆ''ಗಳಾಗಿವೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ.

ಇಪ್ಪತ್ತೊಂದನೇ ಶತಮಾನದಲ್ಲಿರುವ ಭಾರತವನ್ನು ಕ್ರಿಸ್ತಪೂರ್ವ ದಿನಗಳ ಅಜ್ಞಾ ನಾಂಧಕಾರಕ್ಕೆ ಅಧಿಕೃತವಾಗಿ ತಳ್ಳುವ ಈ ಪ್ರಯತ್ನವನ್ನು ಯಾರೂ ಬೆಂಬಲಿಸಬಾರದು, ವಿಶ್ವವಿದ್ಯಾಲಯಗಳು ಸಾರಾಸಗಟಾಗಿ ತಿರಸ್ಕರಿಸಬೇಕು, ಪರದೇಶೀ ಬ್ರಿಟಿಷ್ ಬಂದಿಳಿಕೆ ಯನ್ನು (ದಾಸ್ಯ) ತರಿದೊಗೆದಂತೆ ಈ ಸ್ವದೇಶೀ ಯುಜಿಸಿ ಧೃತರಾಷ್ಟ್ರಾಲಿಂಗನವನ್ನು ಸಂಹರಿಸುವ ನರಸಿಂಹರು ನಾವಾಗಬೇಕು.

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?
ವಿಹಿತವಾಗಿಹುದದರ ಗತಿ ಸೃಷ್ಟಿವಿಧಿಯಿಂ
ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ ಮಂಕುತಿಮ್ಮ
ಗ್ರಹಗತಿಯ ತಿದ್ದುವನು ವೀರ ಪುರುಷೋತ್ತಮನು
ಗ್ರಹಗತಿಗೆ ಶರಣಾಗಿ ಮಸಳುವನು ಹೆಂಬೇಡಿ
ಸಹನೆ ನೀತಿಯ ಮೇಲೆ ವರ್ತಿಸಲು ಜೀವನವು
ಸಹನೀಯವಾಗುವುದು ದಿಟಕಣಾ ಅತ್ರಿಸೂನು

ಸೌರಶಕ್ತಿಯಿಂದ ಕುಡಿಯುವ ನೀರಿನ ಉತ್ಪಾದನೆ

ಪ್ರೊ. ಎಂ.ಎನ್. ಗೋಪಾಲನ್
೫೬, ಮಾರುತಿ ದೇವಸ್ಥಾನ ರಸ್ತೆ,
೪ನೇ ಮುಖ್ಯ ರಸ್ತೆ, ಕುವೆಂಪುನಗರ,
ಮೈಸೂರು - ೫೭೦ ೦೦೯

ಆಂಗ್ಲಭಾಷೆಯಲ್ಲಿ ಒಂದು ಹೇಳಿಕೆಯ ಅರ್ಥ: ನೀರೇ ನೀರು ಎಲ್ಲಲ್ಲೂ, ಆದರೆ ಕುಡಿಯಲು ಇಲ್ಲ ಹನಿ ನೀರು ! ಈ ಹೇಳಿಕೆಯನ್ನು ನಮ್ಮ ಪೃಥ್ವಿಯ ಮೇಲಿರುವ ಸಾಗರ ಮತ್ತು ಸಮುದ್ರಗಳ ನೀರನ್ನು ಕುಡಿಯಲೆತ್ನಿಸಿ ಸಾಧ್ಯವಾಗದಿದ್ದ ಕಾರಣ ಹೇಳಿರಬಹುದೆನಿಸುತ್ತದೆ. ನಮ್ಮ ಭೂಮಿಯ ಮೇಲ್ಮೈ ಮುಕ್ಕಾಲು ಪಾಲು ನೀರಿನಿಂದ ಆವರಿಸಿದೆ. ಆದರೂ ಭೂಮಿಯ ಮೇಲೆ ವಾಸಿಸುವ ಪಶು, ಪಕ್ಷಿ ಮತ್ತು ಮಾನವ ಕುಡಿಯುವ ನೀರಿಗಾಗಿ ಪರಿತಪಿಸುವುದನ್ನು ನೋಡಿದರೆ, ಮನಸ್ಸಿಗೆ. ಆಶ್ಚರ್ಯ ಮತ್ತು ಖೇದ ಒಮ್ಮೆಗೇ ಉಂಟಾಗುತ್ತದೆ. ಇಷ್ಟೇ ಅಲ್ಲ. ಅನೇಕ ಜಾತಿಯ ಮರಗಳೂ ನೀರಿಲ್ಲದೆ ಒಣಗಿ ಸಾಯುತ್ತವೆ. ಎಷ್ಟಾದರೂ ಅವು ಪಶು,ಪಕ್ಷಿ, ಮಾನವನಂತೆ ರೂಪಗೊಂಡಿಲ್ಲದಿದ್ದರೂ, ತಮ್ಮದೇ ಆದ ಜೀವನ ನಡೆಸುತ್ತವೆ ಅಲ್ಲವೇ?

ಸಾಗರ ಮತ್ತು ಸಮುದ್ರಗಳ ನೀರಿನಲ್ಲಿ ಬಹಳಷ್ಟು ಪ್ರಮಾಣದಲ್ಲಿ ನಾವು ನಿತ್ಯ ಉಪಯೋಗಿಸುವ ಅಡುಗೆ ಉಪ್ಪು ಮತ್ತು ಇತರ ಲವಣಗಳು ವಿಲೀನಿಸಿರುವ ಕಾರಣ ಅಂಥ ನೀರು ಕುಡಿಯಲು ಅನರ್ಹವಾಗುತ್ತದೆ.ನದಿಗಳ ನೀರಿನಲ್ಲಿ ಲವಣಾಂಶ ಇಲ್ಲವಾದರೂ, ಮಾನವ ಮಾತ್ರ ಈ ನೀರನ್ನು ನಾನಾ ರೀತಿಯಲ್ಲಿ ಕಲುಷಿತಗೊಳಿಸಿದ್ದಾನೆ. ಅನೇಕ ನದಿಗಳ ನೀರಿನಲ್ಲಿ ವಾಸಿಸುತ್ತಿದ್ದ ಮೀನುಗಳ ಸಾವೇ ಇದಕ್ಕೆ ಸಾಕ್ಷಿ. ಮಾನವ ಪರಿಸರವನ್ನು ಅತ್ಯಂತ ಹೇಯಕರ ರೀತಿಯಲ್ಲಿ ಹದಗೆಡಿಸಿ, ತನ್ನ ಇರುವಿಕೆಗೇ ಕೊಡಲಿ ಪೆಟ್ಟು ಹಾಕಿದ್ದಾನೆ. ಇಂಥ ದಾರುಣ ಪರಿಸ್ಥಿತಿಯಲ್ಲಿ ಜೀವನವನ್ನು ಸುಗಮವಾಗಿ ಸಾಗಲು ಮಾಡುವ ಪ್ರಯತ್ನಗಳು ಸ್ತುತ್ಯರ್ಹ. ಈ ದಿಶೆಯಲ್ಲಿ ಸೂರ್ಯನ ಕಿರಣಗಳ ನೆರವಿನಿಂದ ಕುಡಿ ಯುವ ನೀರನ್ನು ಪಡೆಯುವ ಯತ್ನದ ಯಶಸ್ಸು ಸ್ವಿಸ್ ಫೆಡರಲ್ ಇನ್ಸ್ಟ್ಯೂಟ್‌ಫಾರ್ ಎನ್ವಿರನ್ಮೆಂಟಲ್ ಸೈನ್ಸ್ ಎಂಡ್ ಟೆಕ್ನಾಲಜಿ, ಡ್ಯೂಬೆಂಡೊರ್ಫ್‌ಗೆ ಸೇರುತ್ತದೆ. ಈ ಸಂಸ್ಥೆಯಲ್ಲಿ ಸಂಶೋಧನ ವಿಭಾಗದಲ್ಲಿ ಪ್ರಾಜೆಕ್ಟ್ ಡೈರೆಕ್ಟರ್ ಆಗಿರುವ ಪ್ರೊಫೆಸರ್ ಮಾರ್ಟಿನ್ ವ್ಯಾಗಿಲಿನ್ ಮತ್ತು ಅವರ ತಂಡದವರು ಮಾಡಿದ ಪ್ರಯೋಗದ ವಿವರ ಹೀಗಿದೆ.

ಭೂಮಿ ಮೇಲಿರುವ ಮತ್ತು ಜಲಾಂತರ್ಗಾಮಿ ಜೀವರಾಶಿಗಳು ತಮ್ಮ ಜೀವನಕ್ಕೆ ಬೇಕಾಗುವ ವಸ್ತುಗಳನ್ನು ತಯಾರಿಸಲು ಸೌರವಿಕಿರಣ ಅತ್ಯಾವಶ್ಯಕ. ಒಂದು ವೇಳೆ ಸೂರ್ಯನಿಲ್ಲವಾದರೆ, ಜೀವನವೇ ವಿಕಸಿಸುತ್ತಿರಲಿಲ್ಲ. ಸೂರ್ಯ ಒಂದು ತೇಜೋರಾಶಿ. ಭೂಮಿಯ ಮೇಲಿರುವ ನಾನಾ ಸಾಂಕ್ರಾಮಿಕ ರೋಗಗಳಿಗೆ ಕಾರಣವಾದ ಸೂಕ್ಷ್ಮಾಣುಗಳು ಸೂರ್ಯಕಿರಣಗಳಿಂದ ನಾಶ ಹೊಂದುತ್ತವೆ. ಇದು ಅತ್ಯಂತ ಪ್ರಮುಖವಾದ ವಿಷಯ. ಇದನ್ನು ಅವಲಂಬಿಸಿ, ಮಾರ್ಟಿನ್ ವ್ಯಾಗಿಲಿನ್

ದಿನಾಂಕ ೧೯.೧೨.೨೦೦೦ದ ಸೈನ್ಸ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾದ ಶ್ರೀ ಟಿ. ಆರ್. ತ್ಯಾಗರಾಜನ್ ಅವರ "ಪೊಟಬಲ್ ವಾಟರ್ ಥ್ರೂ ಸೋಲಾರ್ ಎನರ್ಜಿ" ಎಂಬ ಲೇಖನದ ಅನುವಾದ

ತಂಡವು ಒಂದು ಅತ್ಯಂತ ಸರಳ ಮತ್ತು ದುಬಾರಿಯಲ್ಲದ ಪದ್ಧತಿಯನ್ನು ರೂಢೀಕರಿಸಿದೆ. ಇವರ ಪ್ರಕಾರ ಪ್ಲಾಸ್ಟಿಕ್ ಶೀಷೆಗಳಲ್ಲಿ ಭರ್ತಿಮಾಡಿರುವ ನೀರನ್ನು ಸೂರ್ಯ ರಶ್ಮಿ ಮೂಲಕ ಶುದ್ಧಿಗೊಳಿಸಬಹುದು. ಈ ಪದ್ಧತಿಯನ್ನು ''ಸೋಲಾರ್ ಡಿಸಿನ್ಫೆಕ್ಷನ್ -ಸೋಡಿಸ್' ಎಂದು ಹೆಸರಿಸಲಾಗಿದೆ. ಈ ಪದ್ಧತಿ ಮೂಲಕ ನೀರನ್ನು ಸಾಕಷ್ಟು ಉಷ್ಣತೆಗೆ ಏರಿಸಿದಾಗ, ಸೂರ್ಯನಿಂದ ಪ್ರಸರಿಸುವ ಅತಿನೇರಳೆ ಕಿರಣಗಳು ನೀರಿನಲ್ಲಿರುವ ಬಹಳ ಹಾನಿಕರ ಮತ್ತು ಕಣ್ಣಿಗೂ ಕಾಣಿಸದಂಥ ಸೂಕ್ಷ್ಮಾಣುಗಳನ್ನು ನಾಶಗೊಳಿಸುತ್ತವೆ. ಪ್ರೊಫೆಸರ್ ಮಾರ್ಟಿನ್ ವ್ಯಾಗಿಲಿನ್ ಮತ್ತು ಅವರ ತಂಡದವರ ಹೇಳಿಕೆ ಮೇರೆಗೆ, ನೀರನ್ನು ಮೇಲೆ ವಿವರಿಸಿದ ಪ್ರಕಾರದಲ್ಲಿ ೬೦ ಡಿಗ್ರಿ ಉಷ್ಣತೆಗೆ ಏರಿಸಿದಾಗ, ಶೇಕಡ ೯೯.೯ರಷ್ಟು ಹಾನಿಕಾರಕ ಸೂಕ್ಷ್ಮಾಣುಗಳು ನಾಶಹೊಂದುತ್ತವೆ ಎನ್ನುತ್ತಾರೆ. ನೀರನ್ನು ಶೀಘ್ರಕಾಲದಲ್ಲಿ ಪರಿಶುದ್ಧಗೊಳಿಸಬೇಕಾದಲ್ಲಿ, ಪ್ಲಾಸ್ಟಿಕ್ ಶೀಷೆಗಳಿಗೆ ಅರ್ಧಭಾಗ ಕರಿಬಣ್ಣ ಬಳಿದು, ಅವನ್ನು ಸತುವು ಬಳಿದ ಕಬ್ಬಿಣದ ಮುತ್ರಿ ಮುತ್ರಿ ಹಲಗೆಗಳ ಮೇಲಿಡಬೇಕೆಂದು ಸಲಹೆ ಮಾಡಿದ್ದಾರೆ.

ಮಾರ್ಟಿನ್ ವ್ಯಾಗಿಲಿನ್ ಮತ್ತು ಅವರ ತಂಡ ಮೇಲೆ ವಿಸ್ತರಿಸಿದ ಪ್ರಯೋಗಗಳನ್ನು ಏಷ್ಯ, ಆಫ್ರಿಕ ಮತ್ತು ದಕ್ಷಿಣ ಅಮೆರಿಕಾ ದೇಶಗಳ ಹಳ್ಳಿಗಳಲ್ಲಿ ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ. ಈ ತಂಡದ ಸಂಶೋಧನೆಯಿಂದ ಎರಡು ಮುಖ್ಯಾಂಶಗಳು ಕಾಣಬರುತ್ತವೆ: ಕಾಲರಾ ರೋಗ ಹರಡಲು ಕಾರಣವಾದ ''ವಿಬ್ರಿಯೋ ಕಾಲರೆ'' ಸೂಕ್ಷ್ಮಾಣುಗಳನ್ನು ನಾಶಪಡಿಸಬಹುದು ಮತ್ತು ಮಾನವನಲ್ಲಿ ಉಂಟಾಗುವ ಅತಿಸಾರಕ್ಕೆ ಕಾರಣವಾದ ''ಕ್ರಿಪ್ಟೊಸ್ಪೋರಿಡಿಯಮ್ ಸೂಕ್ಷ್ಮಾಣುಗಳನ್ನು ಸಹ ನಾಶಪಡಿಸಬಹುದು.



ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು; ಎಲ್ಲರನ್ನೂ ಪ್ರೀತಿಸುವುದು; ಎಲ್ಲರಿಗೂ ಒಳ್ಳೆಯದನ್ನು ಬಯಸುವುದು- ಇದೇ ಅಹಿಂಸಾಧರ್ಮ.

-ಮಹಾತ್ಮ ಗಾಂಧೀಜಿ

ಐವತ್ತರ ಅಳುಕು

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಭಯಾನಕ ಮೂವತ್ತರ ದಶಕದಿಂದ ಪಾರಾಗಿ ನಲವತ್ತರ ದಶಕದಲ್ಲಿ ಹೋರಾಡಿ, ಭಯಭೀತ ಐವತ್ತರಲ್ಲಿ ಕಾಲಿಟ್ಟಿದ್ದೇನೆ. ಅಷ್ಟೇ ಅಲ್ಲ, ನಾನು ಗಾಬರಿಗೊಂಡಿದ್ದೇನೆ.

ವೃದ್ಧಾಪ್ಯದಲ್ಲಿ ಕಾಲಿಡುವುದು ಒಂದು ಸಹಜ ಪ್ರಕ್ರಿಯೆ ಎಂಬುದನ್ನು ಎಲ್ಲ ಗ್ರಂಥಗಳೂ ಒಪ್ಪಿವೆ. ಅದನ್ನು ನಿರಾಕರಿಸದೆ ಸಂತೋಷದಿಂದ ಸ್ವೀಕರಿಸಬೇಕೆಂದು ಅಲ್ಲಿ ಹೇಳಲಾಗಿದೆ. ಪ್ರತಿಯೊಂದು ದಶಕದಲ್ಲಿ ಸಾಧಿಸಲು ಸಾಕಷ್ಟು ಅವಕಾಶವುಂಟು. ಮಕ್ಕಳು ಗೂಡನ್ನು ಬಿಟ್ಟು ಹೋಗಿ ತಮ್ಮ ಮಕ್ಕಳ ಪಾಲನೆಯಲ್ಲಿ ತೊಡಗಿದ್ದರೂ ಚಿಂತಿಸಬೇಕಾಗಿಲ್ಲ. ನೀವೊಬ್ಬ ಸೊಬಗಿನ ಅಜ್ಜಿಯಾಗಲು ಸಾಧ್ಯವಿದೆ. ನೀವು ಪತಿಯನ್ನು ಕಳೆದುಕೊಂಡಿದ್ದರೆ, ನೀವು ನಗುಮುಖದ ವಿಧವೆಯಾಗಿರಬಹುದು. ನನ್ನಂತೆ ನಿಮಗೆ ಕೂಡಾ ಮದುವೆ ನೌಕೆ ಏರುವಲ್ಲಿ ತಡವಾಗಿದ್ದರೆ, ನಿಮ್ಮನ್ನು ನಡುನೀರಿನಲ್ಲಿ ಕೈಬಿಡುವ ಪ್ರಸಂಗದಿಂದ ಪಾರಾದೆವೆಂದು ಹೇಳಬಹುದು.

ಸುದೈವದಿಂದ ನನ್ನ ನೆರೆಹೊರೆಯವರಲ್ಲಿ ...ರ್ಷಕ್ಕಿಂತಲೂ ಹೆಚ್ಚಿನ ನಿವಾಸಿಗಳು ...ವರ್ಷಕ್ಕಿಂ...ಲೂ ಹೆಚ್ಚಿನ ವಯಸ್ಸಿನವ... ...ದ್ದಾರೆ ಮತ್ತು ಇವರಲ್ಲಿ ಬಹಳಷ್ಟು ಜನ ...ಳೆಯರಿದ್ದಾರೆ. ಏಕಾಕಿ ಮಹಿಳೆಯರು ವಿಧವೆಯರು. ಕೆಲವು ಮಹಿಳೆಯ ಗಂಡಂದಿರು ಇನ್ನೂ ಜೀವಂತವಾಗಿದ್ದಾರೆ.

ಈ ಸೊಬಗಿನ ಮಹಿಳೆಯರಿಗೆ ಬಿಳಿ ಕೂದಲಿದ್ದರೂ ಅವರೆಲ್ಲಾ ಚೆನ್ನಾಗಿ ಉಡುಪು ಧರಿಸುತ್ತಾರೆ. ಅಷ್ಟೇ ಅಲ್ಲ, ತಮ್ಮ ಸಮಯವನ್ನು ವ್ಯರ್ಥವಾಗಿ ಕಳೆಯದೆ, ಅದರ ಸದ್ವಿನಿಯೋಗ ಮಾಡುವ ಕಲೆಯಲ್ಲಿ ನಿಪುಣರಾಗಿದ್ದಾರೆ. ರಮ್ಮಿ, ಬ್ರಿಜ್ ಅಥವಾ ಮಾಹಜೋಗ್ ಆಡುತ್ತಾರೆ. ಮನರಂಜನೆಯಲ್ಲಿ ಪಾಲ್ಗೊಳ್ಳುತ್ತಾರೆ. ಮೊಮ್ಮಕ್ಕಳ ಪಾಲನೆಯಲ್ಲಿ ತೊಡಗಿರುತ್ತಾರೆ; ತೋಟದ ಕೆಲಸ ಮಾಡುತ್ತಾರೆ. ಅವರಿಗೆ ಗ್ರಂಥಾಲಯಗಳ ಸಂಪರ್ಕವಿದೆ; ಬಟ್ಟೆತುಂಡುಗಳ ಅಂಚನ್ನು ಜೋಡಿಸಿ ಚೆನ್ನಾಗಿ ಹೊಲಿಯುವುದು ಕೂಡಾ ಅವರಿಗೆ ಗೊತ್ತು. ಕೆಲವರಂತೂ ಸಲಹಾ ಸಮಿತಿಗಳಿಗೆ ಆಯ್ಕೆ ಗೊಂಡಿದ್ದಾರೆ. ಒಬ್ಬ ಮಹಿಳೆ, ೮೦ ವರ್ಷದ ವಯಸ್ಸು ತಲುಪುವವರೆಗೆ ದ್ವಿಚಕ್ರವಾಹನ ನಡೆಸಿದ್ದುಂಟು. ಈ ಅಸಾಧಾರಣ ಮಹಿಳೆಯರ ಬಗ್ಗೆ ನನಗೆ ಅತ್ಯಂತ ಗೌರವವಿದೆ.

ನಾನಂತೂ ತೃಪ್ತಿಕರವಾದ ಅರವತ್ತರ ಹಾಗೂ ಪ್ರಶಾಂತವಾದ ಎಪ್ಪತ್ತರ ದಶಕಗಳನ್ನು ಸಂತೋಷದಿಂದ ನಿರೀಕ್ಷಿಸುತ್ತಿದ್ದೇನೆ. ಆದರೆ ಈ ಭಯಾನಕ ಐವತ್ತರ ದಶಕವನ್ನು ಹೇಗೆ ದಾಟಬೇಕೆಂಬುದೇ ನನಗೆ ತೋಚುತ್ತಿಲ್ಲ.

...ವೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೂನ್ ವಲ್ಲಾದರೆಸ್, ಪುಣೆರವರ "ಫಿಯರ್ ಆಫ ...ಫ್ಟಿ" ಎಂಬ ಲೇಖನದ ಅನುವಾದ

ಪಾವಗಡದ ನಿಗೂಢ ಶಿಶುಹಂತಕರು

ಡಾ. ವಸಂತಕುಮಾರ ಪೆರ್ಲ
ಕಾರ್ಯಕ್ರಮ ನಿರ್ವಾಹಕರು,
ಆಕಾಶವಾಣಿ, ಮೈಸೂರು-೨೦

ಡಾ. ವಸಂತಕುಮಾರ ಪೆರ್ಲ ಅವರ ಸಾಹಸ ಲೇಖನಗಳ ಸಂಗ್ರಹ ''ಕಾಡಾನೆಗಳ ದವಡೆಯಲ್ಲಿ'', ಕೃತಿಯಿಂದ ಆಯ್ದ ಲೇಖನವೊಂದರ ಸಂಗ್ರಹ ಇದು. -ಸಂ

೧೯೮೩ರ ಜುಲೈ ತಿಂಗಳ ಎರಡನೇ ವಾರ. ಬೆಂಗಳೂರಿನಲ್ಲಿ ನಾನು ಕೆಲಸ ಮಾಡುತ್ತಿದ್ದ ಪತ್ರಿಕಾ ಕಚೇರಿಯಲ್ಲಿ ದೈನಂದಿನ ಕೆಲಸದಲ್ಲಿ ತಲ್ಲೀನನಾಗಿದ್ದೆ. ಪತ್ರಿಕೆಗೆ ಬಂದಿದ್ದ ಪತ್ರಗಳ ರಾಶಿಯಿಂದ ಜವಾನ ಪತ್ರವೊಂದನ್ನು ತಂದು ನನ್ನ ಕೈಗಿತ್ತ. ಪಾವಗಡದ ಪತ್ರಿಕಾ ಪ್ರತಿನಿಧಿ ನನ್ನ ಹೆಸರಿಗೆ ಬರೆದ ಪತ್ರ ಅದು. ಸಾರಾಂಶ ಇಷ್ಟೆ: ''ಪಾವಗಡದಲ್ಲಿ ಇತ್ತೀಚೆಗೆ ನಿಗೂಢ ರೀತಿಯಲ್ಲಿ ನಾಲ್ಕು ಮಕ್ಕಳ ಹತ್ಯೆಯಾಗಿದೆ. ಎಲ್ಲರೂ ಐದು ವರ್ಷದೊಳಗಿನ ಹೆಣ್ಣು ಮಕ್ಕಳು. ವಿಶೇಷವೆಂದರೆ ಅವರೆಲ್ಲ ತಂದೆ ತಾಯಿಯರ ಒಂದೊಂದೇ ಮಗು. ಕಳೇಬರ ಪತ್ತೆಯಾಗಿಲ್ಲ. ಮಾಂತ್ರಿಕರ ಕೈವಾಡ ಇರಬೇಕೆಂಬ ಶಂಕೆ ಇದೆ. ಕೂಡಲೇ ಬಂದು ತನಿಖೆ ಮಾಡಿ ಪತ್ರಿಕೆಗೆ ಲೇಖನ ಬರೆಯಿರಿ.''

ಪತ್ರ ಓದಿ ತುಸು ಹೊತ್ತಾಗಿತ್ತು. ಫೋನ್ ಬಾರಿಸಿತು. ಆ ಬದಿಯಿಂದ ಪತ್ರಿಕಾ ಪ್ರತಿನಿಧಿ ತನ್ನ ಪತ್ರ ಸಿಕ್ಕಿತೇ ಎಂಬುದನ್ನು ಖಾತ್ರಿ ಪಡಿಸಿಕೊಂಡು ಮಾತಾಡುತ್ತಿದ್ದರು. ನಿನ್ನೆ ಸಂಜೆ ಇನ್ನೂ ಒಂದು ಮಗುವಿನ ಹತ್ಯೆಯಾಗಿದೆ; ಪರಿಸ್ಥಿತಿ ಬಿಗುವಾಗಿದೆ. ಕೆಲವು ಮೂಳೆಗಳು, ತಲೆಬುರುಡೆ ಸಿಕ್ಕಿದೆ. ಅಲ್ಲಲ್ಲಿ ಮಾಂತ್ರಿಕರ ಚಿಹ್ನೆಗಳು ಕಾಣಿಸುತ್ತಿವೆ. ತಡಮಾಡಬೇಡಿ. ಕೂಡಲೇ ಬನ್ನಿ.

ನಾನು ಮರುದಿನ ಪಾವಗಡಕ್ಕೆ ಕಾಲಿಟ್ಟಾಗ ಕಂಡದ್ದು ತೀರ ಬಿಗುವಿನ ವಾತಾವರಣ. ಹೊಸಬರನ್ನು ಕಂಡರೆ ಹೊಡೆದು ಸಾಯಿಸಿಬಿಡುವಷ್ಟು ಜನ ಉದ್ರಿಕ್ತರಾಗಿದ್ದರು.

ವೆಂಕಟಪ್ಪ-ಸಂಜೀಮ್ಮ ದಂಪತಿಗಳ ಮಗು ಕಾಣೆಯಾದದ್ದು ಹೀಗೆ: ಸುಮಾರು ಎರಡು ಗಂಟೆ ರಾತ್ರಿಯಾಗಿರಬಹುದು. 'ಅಮ್ಮಾ' ಎಂದು ಕಿರುಚಿದ ಶಬ್ದ. ಎಚ್ಚರವಾಗಿ ನೋಡಿದಾಗ ಏನೂ ಇರಲಿಲ್ಲ. ಸುತ್ತಲೂ ಕತ್ತಲು . ಕಣ್ಣು ಕಟ್ಟಿದಂತಿತ್ತು., ತಡಕಾಡಿ ನೋಡಿದರೆ ಮಗಳು ವೆಂಕಟಸುಬ್ಬಮ್ಮ ಕಾಣಲಿಲ್ಲ. ಗಂಡ, ಹೆಂಡತಿ ಮತ್ತು ಎರಡು ಗಂಡು ಮಕ್ಕಳ ಮಧ್ಯೆ ಮಲಗಿದ್ದ ಹೆಣ್ಣು ಮಗು ಕಾಣೆಯಾಗಿತ್ತು.

ಸುತ್ತುಮುತ್ತ ಹಲವಾರು ಮನೆಗಳಿವೆ ಹೆಚ್ಚಿನ ಮನೆಗಳಲ್ಲೂ ನಾಯಿಗಳಿವೆ. ಯಾರಿಗೂ ತಿಳಿಯದಂತೆ ಮಗುವನ್ನು ಎಗರಿಸಿದ್ದು ಹೇಗೆ?

ಶಿಶು ಅಪಹರಣದ ಈ ನಿಗೂಢ ಘಟನೆ ಆರಂಭವಾದದ್ದು ಏಪ್ರಿಲ್ ತಿಂಗಳ ೨೯ರಂದು. ಪಾವಗಡ ಪೇಟೆಗೆ ಸಮೀಪದ ದಾಸರಮ್ಮನ ಹಳ್ಳಿಯ ಪಾಪಮ್ಮ ಎಂಬ ಐದರ ಹರೆಯದ ಬಾಲಕಿ ಈ ದುಷ್ಕೃತ್ಯಕ್ಕೆ ಮೊದಲ ಬಲಿ. ಅನಂತರ ಹತ್ತು ದಿನಗಳವರೆಗೆ ಯಾವುದೇ ಅಹಿತಕರ ಘಟನೆ ಜರುಗಲಿಲ್ಲ. ಮೇ ೯ರಂದು ಬೊಮ್ಮಗಾನ ಹಳ್ಳಿಯ ಶ್ರೀಮತಿ ಎಂಬ ಒಂಬತ್ತು ತಿಂಗಳ ಶಿಶು ಎರಡನೇ ಬಲಿಯಾಯಿತು.

ಇವರಿಬ್ಬರ ಮೃತದೇಹವಾಗಲೀ ಅವಶೇಷವಾಗಲೀ ಪತ್ತೆಯಾಗದ್ದರಿಂದ ಕಾಡುಪ್ರಾಣಿಯೊಂದು ತಿಂದುಹಾಕಿರಬಹುದೆಂಬ ಸಂಶಯಕ್ಕೆ ಎಡೆಯಾಯಿತು. ಈ ಪ್ರಕರಣದ ಏಳು ದಿನಗಳ ನಂತರ ಮತ್ತೊಬ್ಬ ಬಾಲಕಿ

ಕಾಣೆಯಾದಳು! ಪೇಟೆಗೆ ಪಕ್ಕದ ಕಣಿವೇನಹಳ್ಳಿಯ ಜನತಾ ಕಾಲೋನಿಯ ನಾಗವೇಣಿ ಎಂಬ ಎರಡು ವರ್ಷದ ಬಾಲಕಿಯನ್ನು ಅಪರರಾತ್ರಿಯಲ್ಲಿ ಕದ್ದೊಯ್ಯಲಾಯಿತು. ಆ ಮಗುವಿನ ಒಂದು ಕಾಲನ್ನು ಮಚ್ಚಿನಿಂದ ಕತ್ತರಿಸಿದಂತೆ ತುಂಡುಮಾಡಿ ಹೊಲವೊಂದರಲ್ಲಿ ಎಸೆಯಲಾಗಿತ್ತು.

ಕೇವಲ ಆರು ದಿನಗಳು ಕಳೆದಿದ್ದವು. ಸ್ಥಳೀಯ ದೇವಾಲಯವೊಂದರ ಅಳೆತ್ತರದ ಕಟ್ಟೆಯ ಮೇಲೆ ಆರು ಮಂದಿಯ ಜೊತೆಗೆ ತೀರಾ ಅಚೆಯ ಬದಿಗೆ-ಗೋಡೆಯ ಸನಿಹ-ಮಲಗಿದ್ದ ಆದಿಲಕ್ಷ್ಮಿ ಎಂಬ ಎರಡರ ಹರೆಯದ ಬಾಲಕಿ ಅತ್ಯಾಶ್ಚರ್ಯಕರ ರೀತಿಯಲ್ಲಿ ಕಣ್ಮರೆಯಾದಳು. ಆರು ಮಂದಿಯನ್ನು ಬಿಟ್ಟು ಗೋಡೆ ಬದಿಯಲ್ಲಿ ಮಲಗಿದ್ದ ಮಗುವನ್ನು ಯಾರಿಗೂ ತಿಳಿಯದಂತೆ ಹೊತ್ತೊಯ್ಯಲಾಯಿತು.

ಪಾವಗಡ ಬೆಟ್ಟದ ಮೇಲಿರುವ ನಿಧಿಯೆತ್ತಲು ಮಾಂತ್ರಿಕರು ಮಕ್ಕಳನ್ನು ಬಲಿಕೊಡುತ್ತಿದ್ದಾರೆ ಎಂದು ಜನ ನಂಬಿದರು. 'ಚೈಲ್ಡ್ ಲಿಫ್ಟಿಂಗ್ ಅನಿಮಲ್' ಇರಬೇಕೆಂದು ಪೊಲೀಸರು ಮತ್ತು ಅರಣ್ಯ ಇಲಾಖೆಯವರು ವಾದ ಮಂಡಿಸಿದರು. ಪಾವಗಡದ ಬೆಟ್ಟದ ಮೇಲಿರುವ ನೆಲಮಾಳಿಗೆಯ ಬಾಗಿಲವರೆಗೂ ಪೊಲೀಸ್ ನಾಯಿಗಳು ತೆರಳಿ ಬೊಗಳಿದ್ದವು.

ಪೇಟೆ ಮಧ್ಯೆ ಇರುವ ಶನಿದೇವರ ದೇವಸ್ಥಾನದ ಆವರಣದಲ್ಲಿ ದಿನಾ ಸೇರುತ್ತಿದ್ದ ಜನರ ಗುಂಪು ಮುಸ್ಸಂಜೆಯಗುತ್ತಿದ್ದಂತೆ ಕರಗತೊಡಗಿತು. ರಾತ್ರಿಯಾಗುತ್ತಿದ್ದಂತೆ ಮನೆಯಿಂದ ಹೊರಬರಲು ಜನ ಹೆದರತೊಡಗಿದರು.

ಮಕ್ಕಳು ಕಣ್ಮರೆಯಾದ ಭಾಗಗಳನ್ನು ಸಂದರ್ಶಿಸಿ ವಿಷಯ ಸಂಗ್ರಹಿಸುವಷ್ಟರಲ್ಲಿ ಸಂಜೆಯಾಯಿತು. ಬೆಟ್ಟಕ್ಕೆ ಹೋಗದಿದ್ದರೆ ನನ್ನ ಕೆಲಸ ಅಪೂರ್ಣ. ಸಂಜೆ ಆರುಗಂಟೆ ಸುಮಾರಿಗೆ ಬೆಟ್ಟ ಹತ್ತುವ ನಿರ್ಧಾರ ಕೈಗೊಂಡಾಗ ನನ್ನ ಹುಚ್ಚು ಸಾಹಸಕ್ಕೆ ಎಲ್ಲರೂ ಬೈಯ್ಯುವವರೇ.

ನನ್ನ ಜೊತೆ ಇನ್ನೂ ಮೂವರು ತರುಣರು ಸೇರಿಕೊಂಡರು. ಮುಂದೆ ನಾನು ; ಹಿಂದೆ ಅವರು. ಕೆಲವು ಕಡೆ ಅಗಲ ಕಿರಿದಾದ ದಾರಿ. ಬೆಟ್ಟ ಹತ್ತಲು ಹಾಕಿದ್ದ ಹಾಸುಕಲ್ಲುಗಳ ಸಂದುಗಳಲ್ಲಿರುವ ಮಣ್ಣು ಸವೆದು ಕಾಲಿಡುವುದೇ ಕಷ್ಟವಾಗುತ್ತಿತ್ತು. ಕೆಲವು ಕಡೆ ಬೇರೊಂದು ಕಲ್ಲನ್ನು ಆತು ಹಿಡಿದು ಎರಡು ಮೆಟ್ಟಲುಗಳನ್ನು ಒಂದೇ ಬಾರಿಗೆ ಹತ್ತಬೇಕಾಗಿತ್ತು. ಆಗ ಸಣ್ಣಪುಟ್ಟ ಕಲ್ಲುಗಳು, ಮಣ್ಣು ಹೆಂಟೆ ಜರಿದು ಬಿದ್ದು ಸದ್ದಾಗಿ ನಮ್ಮ ಶಬ್ದಕ್ಕೆ ನಾವೇ ಹೆದರುವಂತಾಗುತ್ತಿತ್ತು.

ಪ್ರತಿಯೊಂದು ಸುತ್ತಿನ ಕೋಟೆ ಪ್ರವೇಶಿಸುವಾಗಲೂ ಎಡಬಲಗಳಲ್ಲಿ ವಿಶಾಲವಾದ ಹಜಾರದಂತಹ ರಚನೆಗಳು. ಶಿಲಾಸ್ತಂಭಗಳು. ರೆಕ್ಕೆ ಬಿಚ್ಚಿ ಪಟಪಟ ಹಾರುವ ಬಾವಲಿಗಳು. ಸನಿಹದ ಪೊದರಿನಿಂದ ಏನೋ ಓಡುವ ಸದ್ದು.

ಏಳು ಗಂಟೆಯ ಸುಮಾರಿಗೆ ಬೆಟ್ಟದ ನೆತ್ತಿ ತಲುಪಿದೆವು. ಒಂದು ಬದಿಯಲ್ಲಿ ವಿಶಾಲವಾದ ಬಯಲು. ಇನ್ನೊಂದು ಬದಿಯಲ್ಲಿ ಪಾವಗಡ ಪೇಟೆ. ಬಿರುಸಾಗಿ ಬೀಸುವ ಗಾಳಿಯ ಶಬ್ದ ಬಿಟ್ಟರೆ ಸ್ಮಶಾನ ಮೌನ.

ಬೆಟ್ಟದ ಒಂದು ತಪ್ಪಲು ಮುಗಿದು, ಇನ್ನೊಂದು ಎತ್ತರದ ಕೋಡು ಉಳಿದಿತ್ತು. ಆ ಕೋಡಿನ ತುದಿಯಲ್ಲಿ ಸುಮಾರು ಐವತ್ತು ಮೀಟರ್ ಸುತ್ತಳತೆಯ ಅಂಗಳ ಇದೆ. ಅಲ್ಲಿ ಗುಡಿಯಂತಹ ಒಂದು ರಚನೆ. ಅಂಗಳದ ಸುತ್ತಲೂ ಸುಮಾರು ಮೂರು ಅಡಿ ಎತ್ತರದ ಕಲ್ಲಿನ ಗೋಡೆ. ಮೆಟ್ಟಲಿಳಿದರೆ ಕತ್ತಲೆಯ ಗರ್ಭಗೃಹದಂತಹ ಒಂದು ಬೃಹತ್

ನೆಲಮಾಳಿಗೆ.

ಗುಡಿಯಂತಹ ರಚನೆಯ ಹಿಂಭಾಗಕ್ಕೆ ಬರುತ್ತಿದ್ದಂತೆ ಕತ್ತಲೆಯಲ್ಲಿ ಯಾವುದೋ ಒಂದು ಪ್ರಾಣಿ ದುಡುದುಡು ಓಡಿ ಹೋಯಿತು. ನಮ್ಮ ಎದೆ ಹವ್ವೆಂದಿತು. ಒಂದು ಕ್ಷಣ ಏನು ಮಾಡಲು ತೋಚಲಿಲ್ಲ.

ನೆಲಮಾಳಿಗೆಯ ದ್ವಾರದ ಬಳಿಗೆ ಹೋದೆವು. ಸುಮಾರು ಮೂರುವರೆ ಅಡಿ ಎತ್ತರದ ಎರಡುವರೆ ಅಡಿ ಅಗಲದ ದ್ವಾರ. ಒಮ್ಮೆ ಒಬ್ಬ ಮಾತ್ರ ಒಳಗೆ ನುಸುಳಬಹುದು. ''ನೆಲಮಾಳಿಗೆಗೆ ಇಳಿಯೋಣ. ಫೋಟೋ ತೆಗೆದುಕೊಳ್ಳ ಬೇಕು'' ಎಂದೆ.

''ಬೆಳಕಿಗೆ ಏನು ಮಾಡುವುದು?'' ಎಂದ ರಾಧಾಕೃಷ್ಣ.ಒಣಗಿದ ಎತ್ತರದ ಹುಲ್ಲು ದಟ್ಟವಾಗಿ ಬೆಳೆದಿತ್ತು. ಅದನ್ನು ಕಿತ್ತು ದೊಡ್ಡದಾಗಿ ಚೆಂಡಿನಂತೆ ಮಾಡಿಕೊಂಡೆವು. ಇಬ್ಬರನ್ನು ದ್ವಾರದ ಬಳಿ ಕಾವಲು ನಿಲ್ಲಿಸಿ ರಾಧಾಕೃಷ್ಣನೊಂದಿಗೆ ಕೆಳಗಿಳಿದೆ. ಹುಲ್ಲಿನ ಚೆಂಡು ಧಗಧಗ ಉರಿಸಿದೆವು.

ಕೆಳಗೆ ಸುಮಾರು ಇಪ್ಪತ್ತು ಮೀಟರ್ ಉದ್ದಗಲದ ನೆಲಮಾಳಿಗೆ . ಆ ನೆಲಮಾಳಿಗೆ ಯಿಂದ ಎರಡು ಪಾರ್ಶ್ವಕ್ಕೂ ಎಂಟು ಸುರಂಗಗಳು ಹಾದಿವೆ.

ನೆಲಮಾಳಿಗೆಯ ಒಂದು ಪಾರ್ಶ್ವದಲ್ಲಿ ವಾಮಾಚಾರ ನಡೆಸಿದ ಕುರುಹುಗಳಿದ್ದವು. ಬಾಳೆ ಎಲೆ ಮತ್ತು ನೆಲದ ಮೇಲೆ ಅರಿಸಿನ ಕುಂಕುಮ ಚೆಲ್ಲಾಡಿತ್ತು. ತೆಂಗಿನಕಾಯಿ ಹೋಳುಗಳಿದ್ದವು. ಸೆಗಣಿಯ ಉಂಡೆಗಳು ಮೇಲೆ ಉದ್ದುದ್ದ ಕಡ್ಡಿಗಳಿಗೆ ಬತ್ತಿ ಹೊಸೆದು ಉರಿಯುವಂತೆ ಮಾಡಲಾಗಿತ್ತು. ನೆಲದ ಮೇಲೆ ಮನುಷ್ಯರ ಮತ್ತು ಪ್ರಾಣಿಗಳ ಹೆಜ್ಜೆ ಗುರುತುಗಳಿದ್ದವು. ತಾಂತ್ರಿಕ ಚಿಹ್ನೆಗಳಂತೆ ಕೆಲವು ಚಿತ್ರವಿಚಿತ್ರವಾದ ರೇಖಾ ರಚನೆ ಗಳಿದ್ದವು.

ಸುರಂಗದೊಳಗೆ ಬೆಳಕು ಹಾಯುವಷ್ಟು ದೂರ ಹೆಜ್ಜೆ ಹಾಕಿದೆ. ಬಾವಲಿಗಳು ಭರಭರ ಹಾರಿದವು. ಜೇಡನ ಬಲೆ ಮೈಯೆಲ್ಲ ಮೆತ್ತಿಕೊಂಡಿತು. ಸುರಂಗ ಅಲ್ಲಲ್ಲಿ ಜರಿದು ಬಿದ್ದಿತ್ತು.

ಹತ್ತು-ಹನ್ನೆರಡು ನಿಮಿಷ ಕಳೆದಿರ ಬಹುದು, ದ್ವಾರದ ಬುಡದಲ್ಲಿ ಕಾಯುತ್ತಿದ್ದ ವರಿಗೆ ಅಸಹನೀಯ ಅನಿಸಿರಬೇಕು. ''ಬನ್ನಿ, ಇನ್ನೂ ಮುಗಿಯಲಿಲ್ಲವೇ? ಬೇಗ ಬನ್ನಿ'' ಎಂದು ನಾರಾಯಣಪ್ಪ ಅವಸರಿಸುವ ಧ್ವನಿ ಕೇಳಿಸಿತು.

ಇಬ್ಬರೂ ಲಗುಬಗೆಯಿಂದ ಮೇಲೇರಿ ಹೋದೆವು . ಆತಂಕಕ್ಕೆ ಕಾರಣ ಇರಲಿಲ್ಲ. ಯಾವುದೋ ಕಾಡುಪ್ರಾಣಿಯ ಸಪ್ಪಳಕ್ಕೆ ಅವರು ಹೆದರಿ ಹೋಗಿದ್ದರು.

ಪೆನುಗೊಂಡೆ ಸಂಸ್ಥಾನಿಕರ ಕಾಲದಲ್ಲಿ ಶಸ್ತ್ರ ಸಂಗ್ರಹಕ್ಕಾಗಿ ಇಂತಹ ಕೋಣೆಗಳನ್ನು ಕೋಟೆಯೊಳಗೆ ರಚಿಸಲಾಗಿತ್ತು. ಆಯುಧ ಗಳು ಮತ್ತು ಮದ್ದುಗುಂಡುಗಳನ್ನು ಈ ಕೋಣೆಗಳೊಳಗೆ ಸಂಗ್ರಹಿಸಲಾಗುತ್ತಿತ್ತು.

ಪಾವಗಡ ಬೆಟ್ಟ ಬರೀ ಬಂಡೆಗಳಿಂದ ಆವೃತವಾದ ಬೆಟ್ಟ. ಕಣ್ಣು ಹಾಯಿಸಿದಲ್ಲೆಲ್ಲ ಗವಿಗಳು, ಗುಹೆಗಳು, ಕೋಣೆಗಳು. ಹಗಲು ಹೊತ್ತು ಕೂಡ ಬೆಟ್ಟ ಹತ್ತಲು ಹಿಂದೆ-ಮುಂದೆ ನೋಡುವ ವಾತಾವರಣವಿತ್ತು.

ಮಕ್ಕಳ ಅಪಹರಣ ಮತ್ತು ಹತ್ಯೆಯ ಕೃತ್ಯ ಮನುಷ್ಯರದೇ ಅಥವಾ ಪ್ರಾಣಿಗಳದೇ ಎಂಬುದಕ್ಕೆ ಬಲವಾದ ಪುರಾವೆಯೇನೂ ದೊರಕಲಿಲ್ಲ. ವಾಮಾಚಾರದ ಕುರುಹು ನರಬಲಿಯನ್ನು ಸಂಕೇತಿಸುವಂತಿದ್ದರೆ,

ಬಯಲಿನಲ್ಲಿ ದೊರೆಯುತ್ತಿದ್ದ ಶವಗಳ ಅವಶೇಷಗಳು 'ಚೈಲ್ಡ್ ಲಿಫ್ಟಿಂಗ್ ಅನಿಮಲ್' (ಮಕ್ಕಳನ್ನು ಹೊತ್ತೊಯ್ದು ತಿನ್ನುವ ಕಾಡು ಪ್ರಾಣಿ) ವಾದವನ್ನು ಪುಷ್ಟೀಕರಿಸುವಂತಿತ್ತು.

ರಾಜವಂತಿರೊಪ್ಪಂನಲ್ಲಿ ಜರುಗಿದ ಮಗುವಿನ ಅಪಹರಣ ಮತ್ತು ಹತ್ಯೆ ಕಗ್ಗಂಟಾಗಿ ಪರಿಣಮಿಸಿತು. ಕಟ್ಟುಮಸ್ತಾದ ಆಳು ರಂಗಯ್ಯನಿಗೆ ಒಂದು ಗಂಡುಮಗು ಒಂದು ಹೆಣ್ಣುಮಗು. ಅದಕ್ಕೆ ನಾಲ್ಕು ವರ್ಷ ಪ್ರಾಯ. ದುಡಿದು ದಣಿವಾಗಿ ರಾತ್ರಿ ಬೇಗ ಮಲಗಿದ ರಂಗಯ್ಯನಿಗೆ ಎಚ್ಚರವಾದದ್ದು ಕಾಲಿನ ಮೇಲೆ ಬಾಗಿಲಿನ ಅಗಣಿ ಬಿದ್ದಾಗ; ಮಧ್ಯರಾತ್ರಿಯ ಹೊತ್ತು ಕಾಲಿನ ಮೇಲೆ ಚಿಲಕ ಬಿದ್ದೊಡನೆ ಬಾಗಿಲು ತೆರದು ಇಬ್ಬರು 'ಮನುಷ್ಯರಂತಹ ಪ್ರಾಣಿಗಳು' ಕೈಯನ್ನು ನೆಲಕ್ಕೂರಿ ಬಾಗಿಲ ಬಳಿ ನಿಂತಿದ್ದರು. ಕರಡಿ ಅಥವಾ ತೋಳಗಳಂತೆ ಕಾಣುತ್ತಿದ್ದರು. ಸರ್ರನೆ ಕಾಲೆಳೆದು ಕುಳಿತುಕೊಂಡ ರಂಗಯ್ಯ ಬೊಬ್ಬೆ ಹೊಡೆದ. ಹತ್ತಿರ ಇದ್ದ ದೊಣ್ಣೆಯನ್ನು ಅವರತ್ತ ಬೀಸಿ ಒಗೆದ. ಅದು ಗುರಿತಾಗಿತ್ತೋ ಇಲ್ಲವೋ ಎಂಬುದು ಅವನಿಗೆ ತಿಳಿಯದು. ಅಷ್ಟರಲ್ಲಿ ಮುಂದಿದ್ದ 'ನರಪ್ರಾಣಿ' ರಂಗಯ್ಯನ ಮುಖಕ್ಕೆ ಅಕ್ಷತೆ ಒಗೆಯಿತು. ತುಸು ದೂರದವರೆಗೆ ಪ್ರಾಣಿಗಳಂತೆ ಮುಂಗೈಗಳನ್ನು ಊರಿಕೊಂಡು ಅವರು ಓಡಿ ಹೋಗುತ್ತಿದ್ದುದನ್ನು ರಂಗಯ್ಯ ನೋಡಿದ್ದಾನೆ. ಆಮೇಲೆ ಕಣ್ಣಿಗೆ ಮಂಪರು ಬಡಿಯಿತು. ಹೆಂಡತಿ ದೀಪ ಉರಿಸಿದರೂ ಅರ್ಧ ಗಂಟೆ ಅವನಿಗೆ ಏನೂ ಕಾಣಿಸುತ್ತಿರಲಿಲ್ಲ. ಹೆಣ್ಣು ಮಗುವನ್ನು ಮಾತ್ರ ಹೊತ್ತೊಯ್ಯಲಾಗಿತ್ತು!

ರಂಗಯ್ಯನ ಬೊಬ್ಬೆ ಕೇಳಿ ಅಕ್ಕಪಕ್ಕದ ಮನೆಯವರು ಓಡಿಬಂದರು. ಹತ್ತಿರದ ಮನೆಯಾತನಿಗೆ 'ಪ್ರಾಣಿಗಳಂತಹ ಇಬ್ಬರು' ಓಡಿಹೋಗುತ್ತಿರುವುದು ಕಾಣಿಸಿತು. ಮರುದಿನ ಮುಂಜಾನೆ ಪಾವಗಡದಾದ್ಯಂತ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಕೂಡಲೇ ಹೋಗಿ ಪರಿಶೀಲಿಸಿದೆ. ತೆಳ್ಳಗಿನ ಕಬ್ಬಿಣದ ಸರಳು ಉಪಯೋಗಿಸಿ ಚಿಲಕ ಹಾರಿಸುವುದು ಸಾಧ್ಯ.

ಮರುದಿನ ಬೆಟ್ಟಕ್ಕೆ ಹೊಂದಿಕೊಂಡಂತೆ ಇರುವ ಮನೆಯೊಂದರಿಂದ ಮಗುವನ್ನು ಅಪಹರಿಸಲು ವಿಫಲ ಯತ್ನ ನಡೆಸಲಾಯಿತು. ಇನ್ನೊಂದು ಹುಲ್ಲುಹಾಸಿನ ಮನೆಯ ಮಾಡು ಕೆದರಿ ಅಟ್ಟದ ಮೂಲಕ ಮನೆಯೊಳಗೆ ಇಳಿಯುವ ಪ್ರಯತ್ನ ನಡೆಯಿತು. ಅವರು ಎಚ್ಚರವಾಗಿ ಬೊಬ್ಬೆ ಹೊಡೆದರು. ಯಾರೋ ಮೂವರು ಓಡಿ ಹೋಗುತ್ತಿದ್ದುದನ್ನು ನೋಡಿದರು.

ಪಾವಗಡದಾದ್ಯಂತ ಪೊಲೀಸ್ ಇಲಾಖೆ, ಗುಪ್ತಚರ ಇಲಾಖೆ, ಅರಣ್ಯ ಇಲಾಖೆ ಸಿಬ್ಬಂದಿಯನ್ನು ನೇಮಿಸಿತು. ಆದರೂ ಶಿಶು ಹಂತಕರ ಪತ್ತೆಯಾಗಲಿಲ್ಲ. ಕೆಲವರಿಗೆ ಅದು ಪ್ರಾಣಿಯಂತೆ, ಕೆಲವರಿಗೆ ಮನುಷ್ಯರಂತೆ ಕಂಡು ಬರುತ್ತಿತ್ತು.

ನಾನು ಜಿಲ್ಲೆಯ ಪೊಲೀಸ್ ಅಧಿಕಾರಿಗಳೊಂದಿಗೆ, ವರಿಷ್ಠರೊಂದಿಗೆ ರಾತ್ರಿಯಿಡೀ ಬೆಟ್ಟಗುಡ್ಡ ಕಾಡು ಮೇಡು ಅಲೆದೆ. ಜೀಪಿನಲ್ಲಿ ಬಂದೂಕು ಹಿಡಿದು ಆಯಕಟ್ಟಿನ ಜಾಗಗಳಲ್ಲಿ ಕಾದೆವು. ಎರಡು ರೀತಿಯ ವ್ಯೂಹವನ್ನು ಪೊಲೀಸ್ ಇಲಾಖೆ ರಚಿಸಿತು: 'ಮನುಷ್ಯರನ್ನು' ಮತ್ತು 'ಪ್ರಾಣಿಗಳನ್ನು' ಹಿಡಿದು ಹಾಕಲು ವ್ಯಾಪಕ ಬಲೆ ಬೀಸಲಾಯಿತು.

ಸುಮಾರು ಎರಡು ಶತಮಾನ ಹಿಂದೆ ಲೋಗನ್ ಎಂಬವನು ಬರೆದು ಪ್ರಕಟಿಸಿದ ''ಮ್ಯಾನುಯಲ್ ಆಫ್ ಮಲಬಾರ್'' ಎಂಬ

ಕೃತಿಯಲ್ಲಿ ಹೇಳಿರುವಂತೆ, ವಾಮಾಚಾರದ ಹಲವಾರು ಪ್ರಭೇದಗಳಲ್ಲಿ ಮನುಷ್ಯ ಭ್ರೂಣವನ್ನು ವಿವಿಧ ರೀತಿಗಳಲ್ಲಿ ಪಾಕಗೊಳಿಸಿ ತಿನ್ನುವುದು ಒಂದೆಂದೂ ಅಂಥವನು ಪ್ರಾಣಿಗಳನ್ನು ಸಂಪೂರ್ಣವಾಗಿ ಅನುಕರಿಸಬಲ್ಲನೆಂದೂ ತಿಳಿದು ಬರುತ್ತದೆ.

ಅಮಾನುಷ ಶಕ್ತಿಯ ವಶೀಕರಣಕ್ಕಾಗಿ ಮತ್ತು ನಿಧಿಯನ್ನು ಎತ್ತಲು ಮಕ್ಕಳ ಹತ್ಯೆ ನಡೆಸುವುದು ವಾಮಾಚಾರಿಗಳದೇ ಕೆಲಸ ಎಂಬ ವದಂತಿ ಹಬ್ಬಿ ಹರಡಿತು. ಅದಕ್ಕೆ ಪೂರಕವಾಗಿ ಪೆನುಗೊಂಡದ ಘಟನೆ, ಕೊಂಡಮಾಮಾಗಳ ಘಟನೆ ಸೇರಿಕೊಂಡಿತು.

ಸುಮಾರು ಮೂರು ತಿಂಗಳು ಪಾವಗಡವೇ ನನ್ನ ವಾಸ್ತವ್ಯ ಸ್ಥಳವಾಯಿತು. ವಾರಕ್ಕೊಮ್ಮೆ ಬೆಂಗಳೂರಿಗೆ ಭೇಟಿ ನೀಡಿ ತನಿಖಾ ವರದಿಯನ್ನು ಪ್ರಕಟಿಸಿ ಮತ್ತೆ ಪಾವಗಡದಲ್ಲಿ ತನಿಖೆ ಮುಂದುವರಿಸುವುದು ಇದೇ ನನ್ನ ಕಾಯಕವಾಯಿತು. ನನಗೆ ಕೊಲೆ ಬೆದರಿಕೆಯ ಪತ್ರಗಳೂ ದೂರವಾಣಿಗಳೂ ಬರತೊಡಗಿದವು. ಪಾವಗಡದಲ್ಲಿ ನಾನು ರಾತ್ರಿವೇಳೆ ತಂಗಲಾಗದ ವಾತಾವರಣ ನಿರ್ಮಾಣವಾಯಿತು.

ಆದರೆ ಬರಬರುತ್ತ, ನರಮಾಂಸದ ರುಚಿ ಹತ್ತಿದ ತೋಳಗಳು ಕೂಡ ಈ ಕೃತ್ಯದಲ್ಲಿ ಭಾಗಿಯಾಗಿವೆ ಎಂಬುದು ನಿಚ್ಚಳವಾಗತೊಡಗಿತು. ತೋಳಗಳಿಗೆ ಒಮ್ಮೆ ನರಮಾಂಸದ ರುಚಿ ಹತ್ತಿದರೆ ಚಿರತೆ ಅಥವಾ ಹುಲಿಗಳಂತೆ ಅವು ಮತ್ತೆ ಮತ್ತೆ ಮನುಷ್ಯರನ್ನು ಬೇಟೆಯಾಡುತ್ತವೆ. ಅನಂತರ ಅವು ತಮ್ಮ ನಿತ್ಯದ ಆಹಾರವನ್ನು ಕಣ್ಣೆತ್ತಿ ನೋಡುವುದಿಲ್ಲ. ಆಹಾರ ಇಲ್ಲದೆಯೂ ತೋಳಗಳು ತಿಂಗಳುಗಟ್ಟಲೆ ಜೀವ ಉಳಿಸಿಕೊಳ್ಳಬಲ್ಲವು.

ತೋಳಗಳು ಮೂರಕ್ಕಿಂತ ಹೆಚ್ಚು ಹಾಗೂ ಏಳಕ್ಕಿಂತ ಕಡಿಮೆ ಗುಂಪಾಗಿ ವಾಸಿಸುತ್ತವೆ. ಎತ್ತರದ ಬೆಟ್ಟದ ಮೇಲೆ ನಿಂತು ಸುಮಾರು ಹತ್ತು ಕಿ.ಮೀ. ದೂರದವರೆಗೆ ಅವು ನೋಡಬಲ್ಲವು. ಬೇಟೆಯಾಡುವಾಗ ಮೂರು ಅಥವಾ ನಾಲ್ಕರ ಗುಂಪಾಗಿ ಅವು ಎರಗುತ್ತವೆ. ಒಂದು ಗಡವ ತೋಳ ಆಕ್ರಮಣ ನಡೆಸುತ್ತದೆ. ಉಳಿದವು ತುಸುದೂರ ರಕ್ಷಣಾತ್ಮಕ ವ್ಯೂಹ ನಿರತವಾಗಿರುತ್ತವೆ. ಎದುರಾಳಿ ಅನಿರೀಕ್ಷಿತವಾಗಿ ದಾಳಿ ಮಾಡಿದಾಗ ರಕ್ಷಣೆಗೆ ಅಥವಾ ಆಹಾರವನ್ನು ಹೊತ್ತೊಯ್ಯಲು ಅವು ನೆರವಾಗುತ್ತವೆ. ಬೇಟೆ ಕೈಗೆ ಬಂದೊಡನೆ ಅವು ಒಟ್ಟಾಗಿ ತಿನ್ನುತ್ತವೆ ಅಥವಾ ಗವಿಯವರೆಗೂ ಒಯ್ಯುತ್ತವೆ. ಶತ್ರುಗಳು ಸಮೀಪದಲ್ಲಿ ಇಲ್ಲದಿದ್ದರೆ ಬೇಟೆಯನ್ನು ತಿಂದು, ಅಳಿದುಳಿದುದನ್ನು ಮೃದು ನೆಲದಲ್ಲಿ ಹೂತು, ಇನ್ನೊಮ್ಮೆ ಬಂದು ಕೆದಕಿ ತಿನ್ನುತ್ತವೆ.

ತೋಳಗಳು ರಾತ್ರಿ ಹೊತ್ತು ಚುರುಕಾಗಿರುತ್ತವೆ. ರಾತ್ರಿ ಹತ್ತು ಗಂಟೆಯಿಂದ ಮುಂಜಾನೆ ಐದು ಗಂಟೆಯವರೆಗೆ ಅವುಗಳ ಬೇಟೆಯ ಅವಧಿ. ಆಹಾರ ಸಿಗದೇ ಹೋದಾಗ ಅಪೂರ್ವವಾಗಿ ಹಗಲು ಹೊತ್ತು ಸಮಯ ಸಂದರ್ಭ ನೋಡಿ ಆಕ್ರಮಣ ಮಾಡಬಲ್ಲವು.

ಸುಮಾರು ಆರು ತೋಳಗಳಿದ್ದ ಒಂದು ಗುಂಪು ನರಭಕ್ಷಕವಾಗಿದೆ ಎಂದು ನಂಬಲಾಯಿತು. ಅವುಗಳಲ್ಲಿ ಮೂರನ್ನು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದ ನುರಿತ ಈಡುಗಾರರು ಗುಂಡುಹೊಡೆದು ಕೊಂದರು. ಉಳಿದ ಮೂರು ತೋಳಗಳು ಗುಂಪಿನಿಂದ ಬೇರ್ಪಟ್ಟು ಬೇರೆ ಬೇರೆಯಾಗಿ ಓಡಾಡ ತೊಡಗಿದವು. ಆ ಮೂರನ್ನೂ ಅನಂತರ ನಿಖರವಾಗಿ ಗುರಿ ಹಿಡಿದು ಕೊಂದು ಹಾಕಲಾಯಿತು.

ಅನಂತರ ಒಂದು ತಿಂಗಳ ಕಾಲ ಪಾವಗಡದ ಸುತ್ತಮುತ್ತಲ ಪ್ರದೇಶವನ್ನೆಲ್ಲ ಪೊಲೀಸರು, ಅರಣ್ಯ ಇಲಾಖೆಯವರು ಮತ್ತು ಈಡುಗಾರರು

ಜಾಲಾಡಿ ಅಲ್ಲಿದ್ದ ತೋಳಗಳನ್ನೆಲ್ಲ ಕೊಂದು ಹಾಕಿದರು.

ಸುಮಾರು ನಾಲ್ಕು ತಿಂಗಳ ಅವಧಿಯಲ್ಲಿ ಒಟ್ಟು ಹದಿನಾಲ್ಕು ಮಕ್ಕಳು ಪಾವಗಡದ ನಿಗೂಢ ಪ್ರಾಣಿಗಳಿಗೆ ಬಲಿಯಾದರು. ಕೆಲವರಿಗೆ ಮನುಷ್ಯರಂತೆ, ಕೆಲವರಿಗೆ ಕರಡಿಯಂತೆ, ಕೆಲವರಿಗೆ ತೋಳದಂತೆ ಕಂಡುಬಂದ ಮಕ್ಕಳ ಹಂತಕರು ಕೊನೆಗೂ ಕಾಲಗರ್ಭದಲ್ಲಿ ಮರೆಯಾಗಿ ಹೋದರು.

ಮಕ್ಕಳ ಹತ್ಯೆಯ ಅರ್ಧಪಾಲು ಕೀರ್ತಿ ಮನುಷ್ಯರಿಗೂ ಇನ್ನರ್ಧ ಪಾಲು ತೋಳ ಗಳಿಗೂ ಸಲ್ಲಬೇಕಾಗಿದೆ. ಯಾಕೆಂದರೆ ರಾಡಿ ಯಲ್ಲಿ ಮೀನು ಹಿಡಿಯುವವರು ಎಲ್ಲ ಕಾಲದಲ್ಲಿಯೂ ಇರುತ್ತಾರೆ.

ಮನುಷ್ಯರು ಆರಂಭಿಸಿದ ಕುಕೃತ್ಯದಿಂದಾಗಿ ತೋಳಗಳಿಗೆ ನರಮಾಂಸದ ರುಚಿ ಹತ್ತಿತು. ಬಳಿಕ ಮನುಷ್ಯರು ಮತ್ತು ತೋಳಗಳು ಸಮಸಮವಾಗಿ ಆ ಕೆಲಸವನ್ನು ಮುಂದುವರಿಸಿಕೊಂಡು ಹೋದರು. ಜನರಲ್ಲಿ ಉಂಟಾದ ಜಾಗೃತಿ, ಸರಕಾರೀ ಯಂತ್ರದ ಪರಿಣಾಮಕಾರೀ ನಿರ್ವಹಣೆ ಮತ್ತು ತೋಳಗಳ ಹತ್ಯೆಯಿಂದಾಗಿ 'ಮನುಷ್ಯರ' ಚಟುವಟಿಕೆ ಹಿನ್ನಡೆ ಕಂಡಿತು ಹಾಗೂ ಪ್ರಕರಣ ಮುಕ್ತಾಯವಾಯಿತು. ಪಾವಗಡದ ಜನ ಸಮಾಧಾನದ ನಿಟ್ಟುಸಿರು ಬಿಟ್ಟರು.

ಆದರೆ ಇಡೀ ಹಗರಣದಲ್ಲಿ ಮನುಷ್ಯರ ಕೈ ಮೇಲಾಗಲಿಲ್ಲ ಎಂಬುದೊಂದೇ ಸಮಾಧಾನದ ಸಂಗತಿ.



ಎಂಥ ವಿಶ್ವಕತ್ತಲೆಯಾದರೂ, ಒಂದು ಪಣತಿಯ ಪ್ರಕಾಶವನ್ನು ನಾಶಗೊಳಿಸಲಾರದು, ಎಂಥ ದುಷ್ಟ ಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು.

-ಗಾಂಧೀಜಿ

ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ

ಎ.ಪಿ.ಗೌರೀಶಂಕರ
ಶ್ರೀಶೈಲ
ಪಿಂಟೋಲೇನ್ ಕ್ರಾಸ್
ಕರಂಗಲ್ಪಾಡಿ
ಮಂಗಳೂರು - ೫೭೫ ೦೦೩.

ಕಾಯದೆ ಪರಮಾಧಿಕಾರ : ಭಾರತ ದೇಶ ಸ್ವತಂತ್ರವಾಗುವ ಕಾಲಕ್ಕೆ (೧೯೪೭) ಸಾಧಾರಣ ೨೦೦ ವರ್ಷಗಳ ಬ್ರಿಟಿಷರ ಆಳ್ವಿಕೆ ಸಂದಿತ್ತು. ಮೊದಲ ನೂರು ವರ್ಷಗಳು ಈಸ್ಟ್ ಇಂಡಿಯಾ ಕಂಪೆನಿ, ಉಳಿದಂಶ ಬ್ರಿಟಿಷ್ ಪಾರ್ಲಿಮೆಂಟರಿ ಸರಕಾರ ನಿಯೋಜಿಸಿದ ರಾಜಪ್ರತಿನಿಧಿಯವರ (ವೈಸ್‌ರಾಯ್) ಆಳ್ವಿಕೆ. ಈಸ್ಟ್ ಇಂಡಿಯಾ ಕಂಪೆನಿಗಿಂತಲೂ ಹಿಂದೆ, ಚರಿತ್ರೆಯಲ್ಲಿ ಬರೆದಿರುವಂತೆ ಅರಸೊತ್ತಿಗೆ, ಸಾಮಂತರು, ಪಾಳೆಯಗಾರರು, ಸರದಾರರು ಇತ್ಯಾದಿ ಶ್ರೇಣೀಕೃತ ವ್ಯಕ್ತಿನಿಷ್ಠ ಆಳ್ವಿಕೆ ರೂಢಿಯಲ್ಲಿತ್ತು. ಬ್ರಿಟಿಷ್ ಪಾರ್ಲಿಮೆಂಟ್ ರಾಜಪ್ರತಿನಿಧಿ ಮೂಲಕ ಪ್ರಾರಂಭಿಸಿದ ಆಳ್ವಿಕೆ ತತ್ವಶಃ ಕಾಯದೆ ಆಡಳಿತೆಯ ಬುನಾದಿ. ಅದರ ಮೊದಲು ರಾಜನಿಷ್ಠ ಆಳ್ವಿಕೆಯ ನೆಲಗಟ್ಟು.

ಕಾಯದೆಯ ಆಡಳಿತೆಯಲ್ಲಿ-ರಾಜ ಅಥವಾ ಯಾವನೊಬ್ಬ ವ್ಯಕ್ತಿ, ವ್ಯಕ್ತಿಗಳ ಗುಂಪು ಅಥವಾ ಸಂಸ್ಥೆ ಆಳ್ವಿಕೆಯ ಮಟ್ಟಿಗೆ ಪರಮಾಧಿಕಾರಿಯಾಗಲಾರದು. ಆಳ್ವಿಕೆಯ ಪರಮಾಧಿಕಾರ ಕಾಯದೆಯಲ್ಲೇ ನಿಹಿತವಾಗಿರತಕ್ಕದ್ದು. ಕಾಯದೆಯನ್ನು ಮೀರಿದ ಅಧಿಕಾರ ಸ್ಥಾನ ರಾಷ್ಟ್ರದಲ್ಲಿಲ್ಲ. ಸಂವಿಧಾನ ಕಾಯದೆ ಎಲ್ಲ ಕಾಯದೆಗಳಿಗೂ ಆದಿ ಮತ್ತು ಪ್ರಪ್ರಥಮ ಕಾಯದೆ. ರಾಷ್ಟ್ರದ ಪರಮಾಧಿಕಾರ ಸಂವಿಧಾನದಲ್ಲಿ ನಿಹಿತವಾಗಿದೆ ಎಂಬ ತತ್ವವನ್ನು ನಾವು ಸ್ವೀಕರಿಸಿದ್ದೇವೆ. ಪ್ರಜಾಪ್ರಭುತ್ವ ಸಾರ್ಥಕಗೊಳ್ಳಬೇಕಿದ್ದರೆ ಆಳ್ವಿಕೆಯ ಕಾಯದೆ ದೇಶದ ಪ್ರಭುಗಳಾಗಿರುವ ಪ್ರಜೆಗಳಿಗೆ ಅರ್ಥವಾಗಬೇಕು ಮತ್ತು ಅವರು ಆಳ್ವಿಕೆಯಲ್ಲಿ ಭಾಗವಹಿಸಬೇಕು. ಆ ಕಾರಣಕ್ಕಾಗಿಯೇ ಕಾಯದೆಯ ಭಾಷೆ ಕನ್ನಡ ನಾಡಿನಲ್ಲಿ ಕನ್ನಡ, ಅಂತೆಯೇ ಇತರ ರಾಜ್ಯಗಳಲ್ಲಿ ಅಲ್ಲಿಯ ಪ್ರಾದೇಶಿಕ ಭಾಷೆಯಾಗಿರತಕ್ಕದ್ದು. ನಮ್ಮ ಆಳ್ವಿಕೆ ಸುಗಮವಾಗಿ, ಜನಹಿತದಾಯಕವಾಗಿ ಮತ್ತು ಅರ್ಥಪೂರ್ಣವಾಗಿ ಸಾಗಬೇಕೆಂದಿದ್ದರೆ, ನ್ಯಾಯ ತೀರ್ಮಾನ ಮತ್ತು ಇತರ ಆಳ್ವಿಕೆಯ ಕಾರ್ಯಗಳು ಕನ್ನಡದಲ್ಲೇ ಆಗಬೇಕಾಗಿವೆ. ನ್ಯಾಯ ತೀರ್ಮಾನ ಮತ್ತು ಆಳ್ವಿಕೆ ಪರಸ್ಪರ ಅನ್ಯೋನ್ಯ ಮತ್ತು ಅವಿಭಾಜ್ಯ.

ಆಂಗ್ಲರ ಆಳ್ವಿಕೆಯಲ್ಲಿ: ಆಂಗ್ಲರು ಪರದೇಶಿಯರಾಗಿದ್ದರೂ, ದೇಶೀಯರ ಭಾಷೆಯಲ್ಲೇ ಆಡಳಿತೆ ಜರಗಿಸಬೇಕೆಂಬ ಉದ್ದೇಶ ಅವರಿಗಿತ್ತೆಂದು ತಿಳಿದು ಬರುತ್ತದೆ. ಬಹಳ ಮೊದಲಿನಿಂದಲೂ, ಬ್ರಿಟಿಷರು ಆಳುತ್ತಿದ್ದಾಗ ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸುತ್ತಿದ್ದರು. ಹಿಂದಿನ ದಕ್ಷಿಣಕನ್ನಡ ಜಿಲ್ಲೆಯ ಬೇಕಲ ತಾಲೂಕಿನ ಮುನ್ಸೀಫ್ ಕೋರ್ಟಿನ (೧೮೨೬-೨೭ರ) ಕನ್ನಡ ತೀರ್ಪನ್ನು ಡಾ.ಶಿವರಾಮ ಕಾರಂತರು ಅವರ 'ಯಕ್ಷಗಾನ ಬಯಲಾಟ' ಪುಸ್ತಕದಲ್ಲಿ ಪಾರ್ತಿಸುಬ್ಬನ ಕಾಲ ನಿರ್ಣಯದ ಕುರಿತಾದ ಚರ್ಚೆಯಲ್ಲಿ ಉದ್ಧರಿಸುತ್ತಾರೆ. ಆದರೆ, ಅನಂತರದ ವರ್ಷಗಳಲ್ಲಿ ನ್ಯಾಯಾಲಯಗಳ ತೀರ್ಪುಗಳನ್ನು ಕಾಲ ಕ್ರಮೇಣ ಇಂಗ್ಲಿಷ್‌ನಲ್ಲಿ ಬರೆಯುವ ರೀತಿ ಪ್ರಾರಂಭವಾದಂತೆ ಕಂಡು ಬರುತ್ತದೆ. ಈ ಬದಲಾವಣೆ

ಯಾವಾಗ ಪ್ರಾರಂಭವಾಯ್ತು ಎಂಬುದಕ್ಕೆ ಸರಿಯಾದ ಪುರಾವೆ ಸಿಗುವುದಿಲ್ಲ. ಹಾಗಿದ್ದರೂ, ಬಹಳ ಹಿಂದಿನಿಂದಲೂ ಜಿಲ್ಲಾ ನ್ಯಾಯಾಲಯ ಗಳ ಮಟ್ಟದ ವರೆಗಿನ ನ್ಯಾಯಾಲಯಗಳಲ್ಲಿ ದಿನನಿತ್ಯ ಬಳಸುವ ಸಮ್ಮನ್ಸ್ (ಕರೆಯೋಲೆ), ನೋಟೀಸುಗಳು, ವಾದಪತ್ರ, ಹೇಳಿಕೆಗಳು ಮತ್ತು ಏಲಂ ಇಸ್ತಿಹಾರು ಇತ್ಯಾದಿ ಅಮಲ್ದಾರಿ ನಡವಳಿಕೆ, ರೆವಿನ್ಯೂ, ಪೋಲೀಸು, ನೋಂದಣಿ ಇಲಾಖೆಗಳಲ್ಲಿಯ ಹೆಚ್ಚಿನ ಪ್ರಕಟಣೆಗಳು, ವರದಿಗಳು, ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾಖಲಿಸುತ್ತಿದ್ದ ವಾದಪತ್ರ, ಅರ್ಜಿ, ಪ್ರಮಾಣಪತ್ರ, ಫಿರ್ಯಾದಿ, ಪ್ರಥಮ ವರ್ತಮಾನ ವರದಿ ಪಂಚನಾಮೆ, ಆರೋಪ ಪಟ್ಟಿಗಳನ್ನು ಕನ್ನಡದಲ್ಲೇ ಬರೆಯುತ್ತಿದ್ದರು. ಸಾಕ್ಷ್ಯಗಳ ತನಿಖೆಯನ್ನು ಕನ್ನಡ ಅಥವಾ ಸಾಕ್ಷಿಗಳ ಮಾತೃಭಾಷೆಯಲ್ಲಿ ಮಾಡಿ ಇಂಗ್ಲಿಷ್ ಭಾಷೆಯಲ್ಲಿ ಅನುವಾದಿಸಿ ಬರೆದುಕೊಳ್ಳಲಾಗುತ್ತಿತ್ತು. ವಕೀಲರ ವಾದ ಮಂಡನೆ ಮತ್ತು ನ್ಯಾಯಾಲಯದ ತೀರ್ಪುಗಳು ಇಂಗ್ಲಿಷ್ ನಲ್ಲಿರುತ್ತಿದ್ದುವು.

ಕನ್ನಡದ ಪದಚ್ಯುತಿ: ಪರದೇಶೀ ಆಂಗ್ಲರಿಗೆ ಜನರ ಆಡುಮಾತಿನಲ್ಲಿ ಆಡಳಿತ ವ್ಯವಹಾರ ನಡೆಯಬೇಕೆಂಬ ಕಾಳಜಿ ಇದ್ದಂತೆ ಕಂಡು ಬರುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ ಶ್ರೀ ಬಿ. ಪಾರ್ಥಸಾರಥಿಯವರು ''ಕನ್ನಡದಲ್ಲಿ ತೀರ್ಪುಗಳು'' ಎಂಬ ತಮ್ಮ ಪುಸ್ತಕದಲ್ಲಿ ಬರೆದಿರುವಂತೆ ಶ್ರೀ ಟಿ.ಜಿ. ಕ್ಲಾರ್ಕ್ ಎಂಬ ಆಂಗ್ಲ ಅಧಿಕಾರಿ ನೀಡಿದ್ದ ಒಂದು ಆದೇಶದ ಪ್ರಕಾರ ಕನ್ನಡದಲ್ಲಲ್ಲದೆ, ಇತರ ಯಾವುದೇ ಭಾಷೆಯಲ್ಲಿ ಅರ್ಜಿ ಸಲ್ಲಿಸಿದರೆ, ಮುಂದಿನ ತನಿಖೆಯಿಲ್ಲದೆ ಅದನ್ನು ತಿರಸ್ಕರಿಸತಕ್ಕದ್ದು.''

ಅವರು ಅಧಿಕಾರದಲ್ಲಿರುತ್ತಿದ್ದ ಕಾಲದಲ್ಲಿ ಆ ಆದೇಶವನ್ನು ಪಾಲಿಸುತ್ತಿದ್ದರು. ಅಂಥ ಕನ್ನಡ ಆಡಳಿತ ಭಾಷೆಯಾಗಿ ಮೆರೆಯುತ್ತಿದ್ದ ಕಾಲ ಈಗ ಕಳೆದು ಹೋದ ಕಲ್ಪನೆಯ ಗತವೈಭವವೆಂದೆನಿಸುತ್ತದೆ. ಕನ್ನಡವನ್ನು ಉಪಯೋಗಿಸುತ್ತಿದ್ದುದರಿಂದ, ಅಂದಿನ ಆಡಳಿತೆಯಲ್ಲೇನೂ ಶಿಥಿಲತೆ ಕಂಡುಬರಲಿಲ್ಲ. ಅಂದಿನ ಆಡಳಿತೆಯ ಕನ್ನಡದಲ್ಲಿ ಹಿಂದುಸ್ಥಾನಿ, ಪರ್ಶಿಯನ್, ಇಂಗ್ಲಿಷ್, ಸಂಸ್ಕೃತ- ಎಲ್ಲ ಭಾಷೆಗಳ ಪದಗಳನ್ನೂ ಸಂದರ್ಭೋಚಿತವಾಗಿ ಬಳಸುತ್ತಿದ್ದರು. ವಾಕ್ಯ ರಚನೆ ನೇರ, ಸರಳ ಮತ್ತು ನಿಖರವಾಗಿರುತ್ತಿದ್ದು, ಆದೇಶದ ಅರ್ಥ ಪ್ರಜೆಗಳಿಗೆ ತಲಪುತ್ತಿತ್ತು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಇಂಗ್ಲಿಷರನ್ನು ಮುಂಬಾಗಿಲಿನಿಂದ ಹೊರಗಟ್ಟಿ ಅವರ ಭಾಷೆಯನ್ನು ಹಿಂಬಾಗಿಲಿನಿಂದ ಸ್ವಾಗತಿಸಿ ತಂದೆವು. ಕನ್ನಡದ ಸ್ಥಾನವನ್ನು ಪರದೇಶಿ ಭಾಷೆ ಅಲಂಕರಿಸಿಕೊಂಡಿತು, ವರುಷಗಳುರುಳಿದಂತೆಯೇ ಅದರ ಮೇಲಿನ ಮೋಹ ಗಾಢವಾಗುತ್ತ ಬಂದಿರುತ್ತದೆ. ಇಂದು, ಇಂಗ್ಲಿಷ್ ಇಲ್ಲದೆ ನ್ಯಾಯಾಲಯದ ವ್ಯವಹಾರ ಕಷ್ಟವೆಂದು ಬಹಿರಂಗವಾಗಿ ಕನ್ನಡದ ಜನ ಅಂದುಕೊಳ್ಳುವ ಸ್ಥಿತಿಗೆ ಬಂದಿರುತ್ತೇವೆ.

ದಾಸ್ಯದ ಆಭರಣ : ಕನ್ನಡದ ಪದಚ್ಯುತಿಗೆ ಹಲವಾರು ಕಾರಣಗಳಿರಬಹುದು. ಮೊದಲನೆಯದಾಗಿ, ಡಾ. ಹಾ. ಮಾ. ನಾಯಕರು ಮತ್ತು ಶ್ರೀ ಬಿ. ಪಾರ್ಥಸಾರಥಿಯವರು ಹೇಳುವಂತೆ ನಮ್ಮ (ಭಾರತೀಯರೆಲ್ಲರ) ದಾಸ್ಯ ಮನೋಭಾವ. ಇಂಗ್ಲಿಷ್ ಶಿಕ್ಷಣ ಪದ್ಧತಿ ಭಾರತೀಯರಲ್ಲಿ ಕೆಲವೇ ಮಂದಿಯನ್ನು ಜಾಗತಿಕ ಮಟ್ಟದಲ್ಲಿ ಅತ್ಯುನ್ನತ ಸ್ಥಿತಿಗೆ ಕೊಂಡೊಯ್ದಿದೆ. ಅಂಥವರು ಜಾಗತಿಕ ಮನ್ನಣೆ ಸ್ಥಾನಗಳನ್ನು ತಮ್ಮ ಇಂಗ್ಲಿಷ್ ಭಾಷಾ ಪ್ರೌಢಿಮೆಯಿಂದ

ಗಳಿಸಿ ಇಂಗ್ಲಿಷ್ ಬಾರದವರಿಗಿಂತ ಮೇಲಂತಸ್ತಿನಲ್ಲಿ ಮೆರೆಯುತ್ತಾರೆ. ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದವರು ವೈಜ್ಞಾನಿಕ ಕ್ಷೇತ್ರಗಳ ಪ್ರವೇಶವನ್ನು ಸುಲಭದಲ್ಲಿ ಗಳಿಸಿ, ತಮ್ಮ ಸಹಪಾಠಿಗಳಿಗಿಂತ ವ್ಯಾವಹಾರಿಕವಾಗಿ ಬಹಳ ಮುಂದೆ ಸಾಗಿದ್ದಾರೆ. ಈ ತರದ ಇಂಗ್ಲಿಷ್ ಬಲ್ಲವರ ಅಸಹಜ ಮುನ್ನಡೆ ಇತರರಿಗೆ ಅದುವೇ ತಾವು ಕೂಡ ಅನುಸರಿಸಬೇಕಾಗಿರುವ ಮಾರ್ಗವೆಂಬ ಭ್ರಮೆಯುಂಟು ಮಾಡಿದೆ. ಕೇವಲ ಬೆರಳೆಣಿಕೆಯಷ್ಟು ಜನ ಪಡೆದ ಇಂಗ್ಲಿಷ್ ಭಾಷಾ ಪ್ರೌಢಿಮೆ ಇತರರ ಬೌದ್ಧಿಕ ದಾಸ್ಯಕ್ಕೆ ಮತ್ತು ಕುರುಡು ಮೋಹಕ್ಕೆ ಕಾರಣವಾಗಿದೆ. ಇಂಗ್ಲಿಷ್ ವ್ಯಾಮೋಹದ ಕುರಿತು ಡಾ. ಶಿವರಾಮ ಕಾರಂತರು ಒಂದು ಸಂದರ್ಭದಲ್ಲಿ, ''ನಾವು, ಭಾರತೀಯರು, ಗುಲಾಮ ವಂಶದ ಪೀಳಿಗೆಯವರು, ದಾಸ್ಯದ ಶೃಂಖಲೆಯನ್ನು ಆಭರಣವಾಗಿ ಧರಿಸಿ ಮೈಮರೆಯುವವರು'', ಎಂದಿದ್ದಾರೆ.

ಇಂಗ್ಲಿಷನ್ನು ಮೆಚ್ಚಿಕೊಳ್ಳಲು ಇನ್ನೊಂದು ಕಾರಣ ಗಾಢ ಮಾನಸಿಕ ಆಲಸ್ಯ. ಇಂಗ್ಲಿಷ್ ಭಾಷೆಯ ತಾಂತ್ರಿಕ ಪದಗಳಿಗೆ ಯೋಗ್ಯ ಪರಿಭಾಷಿಕ ಪದಗಳು ಕನ್ನಡದಲ್ಲಿಲ್ಲ, ಕಾಯದೆಯ ತಾಂತ್ರಿಕ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಸ್ಪಷ್ಟಪಡಿಸಲು ಕನ್ನಡದ ಪದ ಸಂಪನ್ನತೆ ಸಾಲದು ; ಮೂಲ ಇಂಗ್ಲಿಷ್‌ನಲ್ಲಿ ಬರೆದಷ್ಟು ಸ್ಪಷ್ಟವಾಗಿ ಅಥವಾ ವಾದ ಮಂಡಿಸಿದಷ್ಟು ಅಡಕವಾಗಿ ಕನ್ನಡದಲ್ಲಿ ಸಾಧ್ಯವಾಗುವುದಿಲ್ಲ. ಇವೆಲ್ಲ ರೂಢಿಯಲ್ಲಿರುವ ಆಕ್ಷೇಪಣೆಗಳು. ಈ ಆಕ್ಷೇಪಣೆಗಳಲ್ಲಿ ಸ್ವಲ್ಪಾಂಶ ಸತ್ಯವಾದವುಗಳೆಂದು ಒಪ್ಪಿಕೊಂಡರೂ, ನಮ್ಮ ದೈನಂದಿನ ಕೋರ್ಟು ವ್ಯವಹಾರಗಳಲ್ಲಿ ಅರ್ಥ ಸ್ಪಷ್ಟವಾಗುವಷ್ಟು ಬರವಣಿಗೆ ನಡೆಯಿಸಲು ಮತ್ತು ವಾದ ಮಂಡಿಸಲು ಕನ್ನಡ ಶಕ್ತಿಯುತವಾಗಿದೆ ಎಂಬುದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಶ್ರೀ ಬಿ. ಪಾರ್ಥ ಸಾರಥಿಯವರು ಮತ್ತು ಶ್ರೀ ಜಯತೀರ್ಥ ರಾಜಪುರೋಹಿತರು ಜಿಲ್ಲಾಧಿಕಾರಿಗಳಾಗಿ ನೀಡಿದ್ದ ಕನ್ನಡ ತೀರ್ಪುಗಳ ಸಂಕಲನಗಳು ಪ್ರಕಟವಾಗಿವೆ. ಅವುಗಳ ಮೇಲೆ ಕಣ್ಣು ಹಾಯಿಸಿದರೆ ನ್ಯಾಯಾಲಯಗಳ ತೀರ್ಪುಗಳನ್ನು ಬರೆಯಲು ಸಾಕಷ್ಟು ಶಕ್ತಿಯುತ ಭಾಷೆ ಕನ್ನಡ ಎಂಬುದನ್ನು ಮನಗಾಣಬಹುದು. ಕನ್ನಡವನ್ನು ನ್ಯಾಯಾಲಯಗಳಲ್ಲಿ ಮತ್ತು ಆಡಳಿತೆಯಲ್ಲಿ ಬಳಸುವಾಗ ಸುಂದರ ಸಾಹಿತ್ಯ ಸೃಷ್ಟಿಸುವ ಭ್ರಮೆ ನಮಗಿರಬೇಕಿಲ್ಲ. ಆಡಳಿತೆಯ ಆದೇಶಗಳು ಅಥವಾ ನ್ಯಾಯಾಲಯದ ತೀರ್ಪುಗಳಲ್ಲಿ ಸಾಮಾನ್ಯವಾಗಿ ಸಾಹಿತ್ಯ ಕೃತಿ ಸೃಷ್ಟಿಸಲು ಸಾಧ್ಯವೂ ಇರುವುದಿಲ್ಲ. ಸರಳ ಆಡುಮಾತುಗಳಲ್ಲಿ ನಿಖರವಾಗಿ ಆದೇಶ ಅಥವಾ ತೀರ್ಪನ್ನು ಬರೆಯಲು ವಿಶೇಷ ಭಾಷಾ ಪಾಂಡಿತ್ಯವೂ ಅನಗತ್ಯ.

ಕುರುಡು ಮೋಹ : ಬಾಣಸಿಗ ಶೈಲಿ :

ಮೇಲೆ ಹೇಳಿರುವ ಎಲ್ಲ ಕಾರಣಗಳಿಂದಲೂ ಮಹತ್ವದ್ದೆಂದು ನನಗನಿಸುವ ಇನ್ನೊಂದು ಕಾರಣ ಭಾರತೀಯರಿಗೆ ಪಾಶ್ಚಾತ್ಯ ದೇಶ, ಅವರ ಸಂಸ್ಕೃತಿ, ಮತ್ತು ಭಾಷೆಗಳ ಮೇಲಿನ ಕುರುಡು ಮೋಹ. ಇಂಗ್ಲಿಷ್ ಭಾಷೆಯನ್ನುಪಯೋಗಿಸಿ ಬರೆಯುವ ಅರ್ಜಿ ವಾದಪತ್ರ, ಪ್ರತಿವಾದ ಪತ್ರ ಅಥವಾ ತೀರ್ಪು ಸ್ಫುಟವಾಗದ ಸಂದಿಗ್ಧತೆಗಳು-ಇವೆಲ್ಲವನ್ನೂ ನಮ್ಮ ಕುರುಡು ಮೋಹ ಆವರಿಸಿ ನಮ್ಮನ್ನು ಭ್ರಮೆಯಲ್ಲಿ ಕೆಡಹುತ್ತದೆ. ಪರಿಸ್ಥಿತಿ ಇಂತಿರುವಾಗ ಮರ್ಯಾದೆಯಲ್ಲಿ ಹಾಗೂ ಅಭಿಮಾನದಿಂದ ಕನ್ನಡ ಬಳಸಿದರೆ ನಷ್ಟವೇನು? ಈ ಮೊದಲೇ ಅಂದಂತೆ ಕುರುಡು ಮೋಹ ಮಾಯಾಪರದೆಯನ್ನು ಬೀಸಿ ದಾರಿ ತಪ್ಪಿಸುತ್ತದೆ. ಗ್ರಾಮ ಸಹಕಾರಿ ಸಂಘದ ನೌಕರನ

ಮೇಲೆ ಶಿಸ್ತುಕ್ರಮ ಪ್ರಾರಂಭಿಸುವಾಗ ಜಾರಿ ಮಾಡಬೇಕಾಗಿರುವ ಆಪಾದನಾ ಪತ್ರವನ್ನು ಇಂಗ್ಲಿಷ್ ಭಾಷೆಯಲ್ಲಿ ಯಾಕೆ ಬರೆಯಬೇಕು?

ನಿಷ್ಠೆಯ ಸಿಪಾಯಿ ಪಡೆ: ಕನ್ನಡ ಭಾಷೆಯನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ಮತ್ತು ಆಡಳಿತೆಯಲ್ಲಿ ಬಳಸಲು ಸರಕಾರ, ನ್ಯಾಯಾಲಯಗಳು ಮತ್ತು ವಿಶ್ವವಿದ್ಯಾಲಯಗಳು ಜತೆ ಸೇರಿ ಪ್ರಯತ್ನಿಸ ತಕ್ಕದ್ದು. ತಾವು ಮಾಡಬೇಕಾಗಿರುವ ಕೆಲಸಗಳನ್ನು ಗುರುತಿಸಿ ಕಾರ್ಯಕ್ರಮ ನಿಗದಿಪಡಿಸಿ ಜವಾಬ್ದಾರಿಕೆಯನ್ನರಿತು ಹಂಚಿಕೊಂಡು ಛಲದಲ್ಲಿ ಕೆಲಸ ಮಾಡುವ ಉತ್ಸಾಹೀ ಸಿಪಾಯಿಗಳು ಪಡೆ ರಚಿಸಿ ಆ ಮೂಲಕ ಕೆಲಸ ಮುಂದುವರಿಯಬೇಕು. ಕಾಯದೆಯ ಶಾಸ್ತ್ರ ಗ್ರಂಥಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಹಾಗೂ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಪರಿಶಿಷ್ಟದಲ್ಲಿ ಕೊಡಲಾಗಿರುವ ನಮೂನೆಗಳನ್ನು ಭಾರತದ ಸಾಕ್ಷ್ಯ ಕಾಯದೆ, ಕಾಲ ವಿಳಂಬ ಕಾಯದೆ, ಒಪ್ಪಂದ ಕಾಯದೆ ಮತ್ತು ಇತರ ಕಾಯದೆಗಳ ಗ್ರಂಥಗಳನ್ನು ಮತ್ತು ಕ್ಲಿಷ್ಟ ತಾಂತ್ರಿಕ ಪರಿಕಲ್ಪನೆಗಳನ್ನು ಉದಾಹರಣೆ ಸಹಿತ ಕನ್ನಡದಲ್ಲಿ ವಿವರಿಸುವ ಪುಸ್ತಕಗಳನ್ನು ಸುಲಭ ಕ್ರಯದಲ್ಲಿ ವಿತರಿಸುವ ಏರ್ಪಾಡು ಮಾಡಬಹುದು. ರಾಜ್ಯ ಸರಕಾರದ ಅಧಿಕಾರ ಕ್ಷೇತ್ರದೊಳಗಿರುವ ಎಲ್ಲ ಕಾಯದೆಗಳನ್ನು ಪರಿಶೀಲಿಸಿ ಸರಳೀಕರಿಸಲು ಕಾಯದೆಯ ಸ್ಥಾಯಿ ಸಮಿತಿಗಳನ್ನು ರಚಿಸಬಹುದು. ಪಾರಿಭಾಷಿಕ ಪದಗಳ ಅರ್ಥಕೋಶಗಳನ್ನು ನಿರಂತರವಾಗಿ ತಿದ್ದುತ್ತ ಸೇರಿಸುತ್ತ ಮುಂದುವರಿಯುವಂತೆ ಸಂಪಾದಕರ ಸ್ಥಾಯಿ ಸಮಿತಿಗೆ ಆ ಕೆಲಸಗಳನ್ನೊಪ್ಪಿಸಬೇಕು. ವಾದಪತ್ರ, ಪ್ರತಿವಾದಪತ್ರ, ಪ್ರಮಾಣ ಪತ್ರ, ಫಿರ್ಯಾದಿಗಳ ಮಾದರಿ ಪ್ರತಿಗಳನ್ನು ಮತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಎಲ್ಲ ರಾಜ್ಯಗಳ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಕನ್ನಡಕ್ಕೆ ಅನುವಾದಿಸಿ ನಿರಂತರ ಪ್ರಕಟಿಸುತ್ತಿರಬೇಕು. ಈ ಕುರಿತು ಕೃತಿಸ್ವಾಮ್ಯ ಕಾಯದೆಯ ನಿಯಮಗಳನ್ನೂ ಅಗತ್ಯವಿರುವುದಾದರೆ ತಿದ್ದುಪಡಿ ಮಾಡಬೇಕಾಗಬಹುದು. ಕಾಯದೆ ವ್ಯಾಸಂಗದಲ್ಲಿ ಕನ್ನಡ-ಇಂಗ್ಲಿಷ್ ಭಾಷೆಗಳಲ್ಲಿ ವ್ಯವಹಾರ ನಡೆಯಿಸುವ ಕುರಿತು ಪಾಠಗಳನ್ನು ಸೇರಿಸಿ, ಪರೀಕ್ಷೆ ನಡೆಯಿಸಿ ಮುಂದಿನ ಪೀಳಿಗೆಯ ವಕೀಲರಿಗೆ ಕನ್ನಡ ಬಳಸಲು ತರಬೇತಿ ನೀಡುವುದು ಅತೀ ಅಗತ್ಯ. ನ್ಯಾಯಾಧೀಶರ ನೇಮಕಾತಿ, ಭಡ್ತಿ, ವೇತನ ಏರಿಕೆಗಳಲ್ಲಿ ಕನ್ನಡ ಭಾಷಾ ಜ್ಞಾನವನ್ನು ಒಂದು ಅಳತೆ ಮಾನವಾಗಿ ಸ್ವೀಕರಿಸಿ, ಚೆನ್ನಾಗಿ ಕನ್ನಡ ಬಳಸುವ ಅಧಿಕಾರಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವುದರ ಮೂಲಕ ಪ್ರೋತ್ಸಾಹಿಸಬಹುದು. ಅಲ್ಲದೆ ಕನ್ನಡದಲ್ಲಿ ಪ್ರಯೋಜನಕಾರಿ ಕಾಯದೆ ಗ್ರಂಥಗಳನ್ನು ಬರೆಯುವವರನ್ನು ಗುರುತಿಸಿ ಪುರಸ್ಕರಿಸುವುದರ ಮೂಲಕ ಕನ್ನಡ ಬಳಕೆಯಲ್ಲಿ ಅನುಕ್ರಮಿಕ ಮುನ್ನಡೆ ಸಾಧಿಸಬಹುದು.

ಎಚ್ಚರಿಕೆ: ಮಿತಿಯ ಮೀರದಿರು : ಮೇಲೆ ಹೇಳಿರುವ ಕನ್ನಡ ಬಳಕೆಯ ಕ್ರಮಗಳು ರಾಜ್ಯದ ಉಚ್ಚನ್ಯಾಯಾಲಯದಿಂದ ಕೆಳಗಿನ ಹಂತದ ನಾಯ್ಯಾಲಯಗಳಿಗೆ ಮಾತ್ರ ಅನ್ವಯವಾಗುತ್ತವೆ ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳಲ್ಲಿ ಯಾವುದೊಂದು ಪ್ರಾದೇಶಿಕ ಭಾಷೆಯನ್ನು ಬಳಸಲು ಹಲವಾರು ಕಾರಣಗಳಿಂದ ಅಸಾಧ್ಯವೆಂದೇ ಕಾಣುತ್ತದೆ. ಭಾರತ ಹಲವು ಭಾಷಾ ಪ್ರಾಂತ್ಯಗಳ ಒಕ್ಕೂಟ. ಇಲ್ಲಿ ಸರ್ವ ಸಮ್ಮತ ಸಂಪರ್ಕ ಭಾಷೆಯಾಗಿ ಇಂಗ್ಲಿಷನ್ನು ಮಾತ್ರ ಸ್ವೀಕರಿಸಲಾಗಿದೆ. ಇತರ ಯಾವುದೇ ಭಾರತೀಯ ಭಾಷೆಯನ್ನು ಈಗ

ಇಂಗ್ಲಿಷ್ ಏರಿರುವ ಸ್ಥಾನಕ್ಕೇರಿಸಲು ಘಟಕ ರಾಜ್ಯಗಳು ಒಪ್ಪಲಾರವು. ಆದುದರಿಂದ , ಅಖಿಲ ಭಾರತ ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಅನಿವಾರ್ಯವಾಗಿ ಉಳಿಯುತ್ತದೆ. ಉಚ್ಚ ನ್ಯಾಯಾಲಯಗಳಲ್ಲಿ ಆಯಾ ರಾಜ್ಯದ ಭಾಷೆ ಅರಿತಿರುವವರಲ್ಲದೆ, ಹೊರ ರಾಜ್ಯದವರೂ ನ್ಯಾಯಾಧೀಶರಾಗಿರುತ್ತಾರೆ. ಅಂಥವರು ಇನ್ನೊಂದು ರಾಜ್ಯದ ಭಾಷೆಯನ್ನು ಕಲಿತು ದಾವೆಗಳಲ್ಲಿ ತೀರ್ಪು ನೀಡುವುದು ಸಾಧ್ಯವಲ್ಲದ ಮಾತು. ಇನ್ನೊಂದು ವಿಚಾರ, ಭಾರತದ ಎಲ್ಲ ಉಚ್ಚ ನ್ಯಾಯಾಲಯಗಳ ತೀರ್ಪುಗಳು ಎಲ್ಲಾ ನ್ಯಾಯಾಲಯಗಳು ಮಾನ್ಯ ಮಾಡಬೇಕಾಗಿರುವ ಕಾಯದೆಯ ಪೂರ್ವ ನಿದರ್ಶನಗಳು. ಅಂಥಾ ಸಂದರ್ಭಗಳಲ್ಲಿ ಪ್ರಾದೇಶಿಕ ಭಾಷೆಯ ತೊಡಕುಂಟಾಗುತ್ತದೆ. ಪ್ರತಿಯೊಂದು ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಭಾರತದ ಎಲ್ಲಾ ಭಾಷೆಗಳಲ್ಲಿ ಅಧಿಕೃತವಾಗಿ ಅನುವಾದಿಸಿ ಸಂಗ್ರಹಿಸಿಡುವುದು ಬಹಳ ದುಸ್ಸಾಹಸದ ಕೆಲಸ. ಎಲ್ಲ ರಾಜ್ಯಗಳು ಈ ತನಕ ಸದ್ದಿಲ್ಲದೆ (ಹೆಮ್ಮೆಯಿಂದ) ಅಂಗೀಕರಿಸಿರುವ ಏಕಮಾತ್ರ ಸಂಪರ್ಕ ಭಾಷೆ, ಇಂಗ್ಲಿಷ್ ಮಾತ್ರ ಈ ಸಮಸ್ಯೆಗೆ ಪರಿಹಾರ ತೋರಬಲ್ಲುದು. ಇಂಗ್ಲಿಷ್ ವಿನಹ ಬೇರೆ ಯಾವುದೇ ಭಾಷೆಯನ್ನು ಭಾರತದ ಸಂಪರ್ಕ ಭಾಷೆಯಾಗಿ ಸ್ವೀಕರಿಸಿ ಬೆಳೆಯಿಸಲು ಈಗ ಕಂಡು ಬರುವಂತೆ ಒಂದು ಶತಮಾನ ಕಾಲ ಪರ್ಯಂತ ಸಾಧ್ಯ ವಿರುವುದಿಲ್ಲ. ಇದೊಂದು ಭಾವೈಕ್ಯದ ಸಮಸ್ಯೆ. ಇದನ್ನು ಮರೆತರೆ ಎಷ್ಟು ರಾಜ್ಯಗಳಿವೆಯೋ ಅಷ್ಟು ಕಾಶ್ಮೀರಗಳುಂಟಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಇಂಗ್ಲಿಷನ್ನು ಕನ್ನಡಿಗರು ಕಡ್ಡಾಯವಾಗಿ ಉಳಿಸಿ, ಬೆಳೆಸಿಕೊಳ್ಳತಕ್ಕದ್ದು. ಇಂಗ್ಲಿಷ್ ಭಾಷೆಯನ್ನು ನಾವೆಲ್ಲರೂ ಶ್ರದ್ಧಾ ಭಕ್ತಿಪೂರ್ವಕವಾಗಿ, ಭಾರತ ದೇಶವನ್ನು ಭಾವೈಕ್ಯವಾಗಿ ಒಂದುಗೂಡಿಸಿ ಶತಮಾನಗಳ ಭವಿಷ್ಯತ್ತಿನಲ್ಲಿ ಬೆಳೆಯಿಸುವ ಏಕಮಾತ್ರ ಸಂಜೀವಿನಿಯಾಗಿ, ರಕ್ಷಿಸತಕ್ಕದ್ದು. ಇಂಗ್ಲಿಷನ್ನು ಕಲಿತು ಅದನ್ನು ನಮ್ಮದಾಗಿ ಬಳಸುವುದರಲ್ಲಿ ಅಭಿಮಾನಕ್ಕೆ ಕುಂದು ಎಂದು ಭಾವಿಸಬೇಕಾಗಿಲ್ಲ.



ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

-ಮಹಾಭಾರತ

ಆಮಿಯ ಆಯ್ಕೆ

ಟಿ.ವಿ. ಅನ್ನಪೂರ್ಣಮ್ಮ
೧೨೧೩/೫೮, ಎರಡನೇ ಅಡ್ಡರಸ್ತೆ
ನಾಗಪ್ಪಬ್ಲಾಕ್, ಶ್ರೀರಾಮಪುರ
ಬೆಂಗಳೂರು-೫೬೦ ೦೨೧

ನಾವ್ವರು ಒಡಹುಟ್ಟಿದ ಚಿಕ್ಕಮಕ್ಕಳು. ಮನೆಯಲ್ಲಿ ಹೆತ್ತವರಿಲ್ಲ ಮತ್ತು ಒಬ್ಬ ಅಂತರ್ದ್ವಂದ್ವಕ್ಕೆ ಸಿಕ್ಕಿದ ಕಿಶೋರಿ

೧೯ ವರ್ಷದ ಆಮಿ ವಾಲ್‌ಡ್ರೂಪ್, ಕ್ಯಾಲಿಫೋರ್ನಿಯಾದ ತನ್ನ ಚಿಕ್ಕ ಕೊಠಡಿಗೆ ಮರಳಿದಾಗ ಮಧ್ಯರಾತ್ರಿಯಾಗಿತ್ತು. ಆಕೆ ಬಹಳ ದಣಿದಿದ್ದಳು. ಹೂವಿನ ಅಂಗಡಿಯೊಂದರಲ್ಲಿ ದಿನಪೂರ್ತಿ ಕೆಲಸ ಮಾಡಿದ ಬಳಿಕ, ಮನೆಗೆ ಬರುವ ಮುಂಚೆ ಇನ್ನೂ ಆರುಘಂಟೆಗಳ ಪರಿಚಾರಿಕೆಯ ಕೆಲಸ ಮಾಡಿದ್ದಳು.

ಬೀಗದಕೈಯನ್ನು ಬೀಗದೊಳಗೆ ತಳ್ಳುತ್ತ ತನ್ನ ಚಿಕ್ಕ ಒಡಹುಟ್ಟಿದವರನ್ನು ಎಚ್ಚರಗೊಳಿಸದಂತೆ, ಸದ್ದಿಲ್ಲದೆ ಬಾಗಿಲು ತೆರೆದಳು. ಮುಂಭಾಗದ ಕೊಠಡಿಯೊಳಗೆ ಹೆಜ್ಜೆ ಇಟ್ಟ ಒಡನೆ ಆಕೆಗೆ ಶರೀರ ಮರಗಟ್ಟಿದಂತಾಯಿತು. ಕೊಠಡಿ ಅಸ್ತವ್ಯಸ್ತವಾಗಿತ್ತು. ಅರ್ಧಂಬರ್ಧ ತಿಂಡಿ ತಿಂದ ತಟ್ಟೆಗಳು ಟಿ.ವಿ. ಯ ಮುಂದೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಆಟದ ಸಾಮಾನುಗಳು ನೆಲದ ಮೇಲೆ ಚೆಲ್ಲಾಡಿದ್ದುವು. ಬಟ್ಟೆಗಳು, ಪಾದರಕ್ಷೆಗಳು ಮತ್ತು ಮನೆಕೆಲಸ ಎಲ್ಲೆಡೆ ಹರಡಿದ್ದುವು ಆಮಿಯ ಕಣ್ಣಾಲಿಗಳು ತುಂಬಿ ಬಂದುವು.

ಇದು ನನಗೆ ಅತಿಯಾಯಿತು ಎಂದು ಆಕೆ ಯೋಚಿಸಿದಳು. ಆಕೆಯ ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳು ಬರಲಾರಂಭಿಸಿದುವು. ಆಕೆಗೆ ಬಹಳ ದುಃಖವಾಯಿತು. ತನ್ನ ಕುಟುಂಬವನ್ನು ಆಕೆ ನೋಡಿಕೊಳ್ಳಲಾರಳೆಂದು ನ್ಯಾಯಾಲಯ ಹೇಳುವುದೇ? ಬೇರ್ಪಡಿಸಿ ದೂರ ಕಳುಹಿಸಲ್ಪಡುವ ಹಿಂಸೆಯನ್ನು ಮಕ್ಕಳು ಮತ್ತೊಮ್ಮೆ ಸಹಿಸಬೇಕೇ? ಆಕೆ ಇನ್ನೂ ಚಿಕ್ಕವಳು. ಹೆಚ್ಚೂ ಕಡಿಮೆ ಆಕೆಯೇ ಒಂದು ಮಗು. ಆದರೂ ಆಮಿಗೆ ತನ್ನನ್ನು ಅವಲಂಬಿಸಿರುವ ಪ್ರತಿಯೊಂದು ಸಂಗತಿಯ ಅರಿವಿತ್ತು. ಇವೆಲ್ಲವನ್ನೂ ಸಂಭಾಳಿಸುವ ಸಾಮರ್ಥ್ಯ ತನಗಿರುವುದೇ ಎಂದು ಆ ಕ್ಷಣದಲ್ಲಿ ಆಕೆ ಆತಂಕಪಟ್ಟಳು.

ಆಮಿ ವಾಲ್‌ಡ್ರೂಪ್ ಒಂದು ರೀತಿಯಲ್ಲಿ ಸತ್ತು ಹುಟ್ಟಿದ್ದಳು. ಮಾದಕ ವ್ಯಸನಿಯಾದ ತಾಯಿಯ ಈ ಚಿಕ್ಕ ಅವಳಿಮಗುವನ್ನುಳಿಸಲು ವೈದ್ಯರು ಹೋರಾಟವನ್ನೇ ನಡೆಸಿದ್ದರು. ಅಂದಿನಿಂದ ಆಕೆ ಸದಾಕಾಲ ತನ್ನ ಜೀವನದಲ್ಲಿ ಪ್ರತಿಯೊಂದಕ್ಕೂ ಹೆಣಗಾಡಬೇಕಾಯಿತು.

ತನ್ನ ಬಾಲ್ಯದ ಪ್ರಾರಂಭದ ದಿನಗಳಿಂದಲೇ ಆಮಿ ತನ್ನ ಒಡಹುಟ್ಟಿದವರನ್ನು ನೋಡಿಕೊಳ್ಳುತ್ತಿದ್ದಳು. ಮೊದಲನೆಯವಳು ಆಕೆಗಿಂತ ನಾಲ್ಕುವರ್ಷ ಕಿರಿಯವಳಾದ ಅಮಂಡ. ಆಮಿಗೆ ಹತ್ತು ವರ್ಷವಾಗಿದ್ದಾಗ, ಆಡಮ್‌ನ ಆಗಮನ. ಅನಂತರ ಜೋಸೆಫ್, ಕೊನೆಗೆ ಅಂತೋಣಿ. ಜೀವನವನ್ನು ಬಲುಮಟ್ಟಿಗೆ ವ್ಯರ್ಥವಾಗಿ ಕಳೆದ ತಾಯಿಯೊಡನೆ, ಮಕ್ಕಳಿಗೆ ಉಣಬಡಿಸುವ, ಬಟ್ಟೆ ಬದಲಾಯಿಸುವ, ಅತ್ತಾಗ ತಟ್ಟಿ ಮಲಗಿಸುವ ಹಾಗೂ ಅವರು ಅನಾರೋಗ್ಯದಿಂದಿದ್ದಾಗ ಅವರನ್ನು ನೋಡಿ

ಜನವರಿ ೨೦೦೧ರ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ರೇನ ಡಿಕ್ಸರ್ ಲೆಬ್ಲಾಂಕ್‌ರವರ ''ಆಮೀಸ್ ಛಾಯ್ಸ್'' ಎಂಬ ಲೇಖನದ ಕನ್ನಡಾನುವಾದ

ಕೊಳ್ಳುವ ಕೆಲಸ ಒಮ್ಮೆಗೇ ಅಲ್ಲವಾದರೂ ಪದೇ ಪದೇ ಆಮಿಗೆ ಬೀಳುತ್ತಿತ್ತು.

ಒಮ್ಮೆ ಮಕ್ಕಳೆಲ್ಲರಿಗೂ ಸಿಡುಬು ಎದ್ದಾಗ ಔಷಧಿ ವ್ಯಾಪಾರಿಯಿಂದ ಬೇಸತ್ತು ಆಕೆ ಏನು ಮಾಡಬೇಕೆಂದು ಪಾದರಿಯನ್ನು ಕೇಳಿದ್ದಳು. ಕೈಯಿಂದ ಹಚ್ಚಬಹುದಾದ ಲೋಶನ್ ಶೀಷೆಯ ಮೇಲಿದ್ದ ಸೂಚನೆಗಳನ್ನು ಹತ್ತು ವರ್ಷದ ಆ ಹುಡುಗಿ ಗಮನವಿಟ್ಟು ಓದಿದಳಾದರೂ ಅದು ಆಕೆಗೆ ಅರ್ಥವಾಗಲಿಲ್ಲ. ಮನೆಗೆ ಬಂದು ಆಕೆ ತನ್ನ ಒಡಹುಟ್ಟಿದವರನ್ನು ಒಟ್ಟಿಗೆ ನಿಲ್ಲಿಸಿ ಅವರ ಮೇಲೆ ನೀರು ಸುರಿದಳು. ಬಳಿಕ ಶೌಚಕ್ಕುಪಯೋಗಿಸುವ ಕಾಗದವನ್ನು ಪದರ ಮಾಡಿ ಅದರಿಂದ ಶರೀರಕ್ಕೆ ಲೋಶನ್ ಹಚ್ಚಿದಳು. ಅವರಿಗೆ ಗುಣವಾಯಿತು.

ಅವರ ತಾಯಿ ಜಾನ್, ತನ್ನ ಮಕ್ಕಳ ಜೀವನದ ಒಳ ಹೊರಗೆ ತನ್ನ ಸ್ವಾರ್ಥದಿಂದ ಕುಟುಂಬದ ಅವ್ಯವಸ್ಥೆಯನ್ನು ಹೆಚ್ಚಿಸಿದಳು. ಕೆಲ ಸಮಯ ಅವರು ಕೊಠಡಿಗಳಲ್ಲಿ, ಕೆಲವೊಮ್ಮೆ ಶಿಬಿರಗಳಲ್ಲಿ , ಕೆಲವೊಮ್ಮೆ ಮಾದಕವಸ್ತು ಸೇವನೆಯಿಂದ ಪೀಡಿತರಿರುವ ಮೋಟೆಲ್‌ಗಳಲ್ಲಿ ಇರುತ್ತಿದ್ದರು.

ಶಾಲೆಗೆ ಹೋಗುತ್ತಿದ್ದಾಗ ತಮ್ಮ ಜೀವನದ ಬಗ್ಗೆ ಸಹಪಾಠಿಗಳಿಗೆ ತಿಳಿಯದಿರಲಿ ಎಂದು ಮಕ್ಕಳು ತಮ್ಮಷ್ಟಕ್ಕೆ ತಾವು ಇರುತ್ತಿದ್ದರು. ಆದರೆ ಅನಿವಾರ್ಯವಾಗಿ ಆ ವಿಷಯ ಎಲ್ಲರಿಗೂ ತಿಳಿಯಿತು. ಉದಾಹರಣೆಗೆ, ಜಾನ್ ಊಟದ ಕಾರ್ಯಕ್ರಮಕ್ಕೆ ಕೆಲವೊಮ್ಮೆ ಹಸ್ತಾಕ್ಷರ ಮಾಡುತ್ತಿರಲಿಲ್ಲವಾದ್ದರಿಂದ , ಆಮಿ ಮತ್ತು ಅವಳ ಅವಳಿಜವಳಿ ಸಹೋದರಿ ಜೆಸಿಕಾ ಊಟವಿಲ್ಲದೆ ಇರಬೇಕಾಗುತ್ತಿತ್ತು. ಇತರ ಮಕ್ಕಳು ತಾವು ತಂದ ಸ್ಯಾಂಡ್‌ವಿಚ್ ತಿನ್ನುತ್ತಿರುವಾಗ ಇವರು ಹಸಿದುಕೊಂಡು ಶಾಲೆಯ ಆವರಣದಲ್ಲಿ ಒಂಟಿಯಾಗಿ ಕುಳಿತಿರುತ್ತಿದ್ದರು.

ಮನೆ ಊಟವಂತೂ ಅವರಿಗೆ ಒಂದು ಸವಾಲೇ ಆಗಿತ್ತು. ಜಾನ್ ಹೊರಗಿದ್ದಾಗ ಈ ಅವಳಿ ಜವಳಿ ಮಕ್ಕಳು ಅಡುಗೆ ಮಾಡಬೇಕಾಗುತ್ತಿತ್ತು. ಮೇಜಿನ ಮೇಲೆ ಆಮಿ ಸರಿಯಾಗಿ ಊಟ ಮಾಡಲಿಲ್ಲವೆಂದು ಜಾನ್‌ಳ ಒಬ್ಬ ಗೆಳೆಯ ಆಕ್ರೋಶಗೊಂಡ. ಅವನು ಆ ಮಗುವಿನ ಕೂದಲನ್ನು ಹಿಡಿದು ಎಳೆತಂದು ಆಕೆಯನ್ನು ರೆಫ್ರಿಜರೇಟರ್ ಕಡೆಗೆ ತಳ್ಳಿದ.

ಆ ಹುಡುಗಿ ಇನ್ನೂ ಅನೇಕ ಹಿಂಸೆಗಳನ್ನನುಭವಿಸಿ ಕೊನೆಗೆ ತನ್ನ ಸಮಾಜ ಸೇವಕಿಗೆ ಹೇಳಿದಳು. ಕೇಳಿ ಆ ಹೆಂಗಸಿಗೆ ಮಾತೇ ಹೊರಡಲಿಲ್ಲ. ಆಕೆ ಹೇಳಿದಳು, ''ಅಯ್ಯೋ ದೇವರೆ, ನೀನು ನನಗೆ ಮೊದಲೇ ಏಕೆ ಹೇಳಲಿಲ್ಲ ?'' ಆಮಿ ಉತ್ತರಿಸಿದಳು ''ನಮ್ಮನ್ನು ಇಲ್ಲಿಂದ ಬೇರೆಡೆಗೆ ಒಯ್ಯುತ್ತೀರೋ ಎಂಬ ಭಯ''

ಎರಡು ವಾರಗಳ ತರುವಾಯ ಆ ಸಮಾಜ ಸೇವಕಿ ಬಂದು ಬಾಗಿಲು ತಟ್ಟಿದಳು. ಆ ಕಿಶೋರಿಯ ದುಃಸ್ವಪ್ನ ನಿಜವಾಯಿತು. ಆಮಿ ಮತ್ತು ಜೆಸಿಕಾಳನ್ನು, ಮಕ್ಕಳನ್ನು ಇಟ್ಟುಕೊಳ್ಳುವ ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕಾಗಿತ್ತು. ತನ್ನ ಇತರ ಒಡಹುಟ್ಟಿದವರು ಬೇರೆ ಬೇರೆ ಸಾಕುಗೃಹಗಳಿಗೆ ಹೋಗಲೇ ಬೇಕಾಗಿದ್ದರಿಂದ, ಅವರಿಗಾಗಿ ವಾಹನ ಬರುವವರೆಗೂ ಅವರು ಪರಿತಪಿಸಬೇಕಾಗುವುದೆಂದು ಯೋಚಿಸಿ ಆಮಿ ಚಿಂತಾಕ್ರಾಂತಳಾದಳು. ಅವರ ದುಃಖಗೊಂಡ ಮುಖಗಳನ್ನು ನೋಡಿ, ಆಮಿ ಕಷ್ಟದಿಂದ ಇಷ್ಟು ಮಾತ್ರ ಹೇಳಿದಳು'', ದಯವಿಟ್ಟು ಕ್ಷಮಿಸಿ, ದಯವಿಟ್ಟು ಕ್ಷಮಿಸಿ''.

ತಮ್ಮ ಅಜ್ಜಿಯ ಮನೆಗೆ ವಾಸಿಸಲು ಕಳುಹಿಸಲ್ಪಡುವವರೆಗೆ ಮಕ್ಕಳು, ಒಬ್ಬಂಟಿಗರಾಗಿ, ಚಿಂತಿತರಾಗಿ, ಒಬ್ಬರಿಂದೊಬ್ಬರು

ದೂರವಾಗಿ ಆರು ತಿಂಗಳು ಕಳೆದರು. ತನ್ನ ಮಕ್ಕಳ ಜೊತೆ ಇರಲು ಜಾನ್‌ಳನ್ನು ನಿಷೇಧಿಸಲಾಗಿದ್ದರೂ, ಆಮಿಯ ಅಜ್ಜ ತನ್ನ ಮಗಳ ಮೇಲೆ ದಯೆ ತೋರಿಸಿ ಮಕ್ಕಳ ಜೀವನದಲ್ಲಿ ಅವಳು ಪುನಃ ಪ್ರವೇಶಿಸುವಂತೆ ಮಾಡಿ ಅವರನ್ನು ಅವ್ಯವಸ್ಥೆಗೆ ಹೋಗುವಂತೆ ತಳ್ಳಿದಳು. ತನ್ನ ಹದಿನಾಲ್ಕನೆ ವಯಸ್ಸಿನಲ್ಲಿ ಜೆಸಿಕಾ ಮನೆಬಿಟ್ಟದ್ದು ಒಳ್ಳೆಯದೇ ಆಯಿತು.

ಇತ್ತೀಚೆಗೆ ಎಲ್ಲ ಮಕ್ಕಳೂ ಶಾಲೆಯಲ್ಲಿ ಹಿಂದೆ ಹಿಂದೆ ಬೀಳುತ್ತಿದ್ದರು. ೯ನೇ ತರಗತಿಯಲ್ಲಿ ಓದುತ್ತಿದ್ದ ಆಮಿ ಕೇವಲ ೪ನೆಯ ತರಗತಿಯ ಮಟ್ಟದಲ್ಲಿ ಓದಬಲ್ಲವಳಾಗಿದ್ದಳು. ಉತ್ತಮವಾದ ಉಡುಪುಗಳನ್ನು ಹಾಕಿಕೊಂಡು, ಶಾಲೆಯಲ್ಲೂ ಉತ್ತಮವಾಗಿ ಓದುತ್ತಿದ್ದ ಮಕ್ಕಳನ್ನು ಹೊಟ್ಟೆಕಿಚ್ಚಿನಿಂದ ನೋಡಿ, ಆಮಿ ಹೇಗಾದರೂ ಮಾಡಿ ತನ್ನ ಈಗಿನ ಸ್ಥಿತಿಯನ್ನು ಬಿಟ್ಟು, ಅವರ ಪ್ರಪಂಚಕ್ಕೆ ಕಾಲಿಡಬೇಕೆಂದು ಅಪೇಕ್ಷಿಸಿದಳು.

ಒಂದು ದಿನ ಶಾಲೆಯ ಆವರಣದಲ್ಲಿ ಹೋಗುತ್ತಿದ್ದಾಗ, ಒಂದು ಮೇಜಿನ ಮೇಲೆ ಕಾಲೇಜಿನ ವಿವರಣಾ ಪುಸ್ತಕಗಳು ಹರಡಿರುವುದನ್ನು ನೋಡಿದಳು. ವಿಶಾಲವಾದ ಆವರಣದಲ್ಲಿನ ಚಿತ್ರಗಳನ್ನು ಸ್ವೇಚ್ಛೆಯಾಗಿ ನೋಡಿದಳು ಸಂತೋಷಗೊಂಡ, ತೃಪ್ತಿಯಿಂದಿರುವ ಮಕ್ಕಳನ್ನು ನೋಡಿದಳು ಆ ವೈಭವ ಅಸಾಧ್ಯವಾದುವಾಗಿಯೂ, ಪಡೆಯಲು ಬಹಳ ಕಷ್ಟಕರವಾಗಿದ್ದುದಾಗಿಯೂ ಕಂಡವು.

ಆದರೆ ಒಬ್ಬ ಮಾರ್ಗದರ್ಶಿ ಸಲಹೆಗಾರ ಆಕೆಗೆ ಊಹಿಸಲಾರದಂಥ ಭರವಸೆ ಕೊಟ್ಟು ''ಆಕೆ ಕಾಲೇಜಿಗೆ ಹೋಗಬಹುದೆಂದೂ, ಅದೂ ಉಚಿತವಾಗಿ ಹೋಗಬಹುದೆಂದೂ ಹೇಳಿದ'' ಆಕೆ ಒಳ್ಳೆಯ ಶ್ರೇಣಿಗಳನ್ನು ಪಡೆದರೆ ವಿದ್ಯಾರ್ಥಿವೇತನವೂ ಸಿಗಬಹುದು. ಬೇಸಿಗೆಯ ಶಾಲೆಗಾಗಿ ಆಮಿ ಆ ಕೂಡಲೇ ಹಸ್ತಾಕ್ಷರ ಮಾಡಿದಳು.

ಜೂನಿಯರ್ ಮತ್ತು ಸೀನಿಯರ್ ತರಗತಿಗಳಿಗೆ ಆಕೆ ಬಹಳ ಪರಿಶ್ರಮದಿಂದ ಹಾಜರಾದಳು ೩.೩೦ಯಿಂದ ೧೧.೩೦ವರೆಗೆ ಶಾಲೆ ಮುಗಿಸಿ ಅಜ್ಜಿಯ ಮನೆಗೆ ಹಿಂತಿರುಗಿ ಬೆಳಗಿನ ಝಾವದವರೆಗೂ ಗಾಣದೆತ್ತಿನಂತೆ ದುಡಿಯುತ್ತಿದ್ದಳು.

ಈ ಕಠಿಣ ಜೀವನ ನಡೆಸುತ್ತಿರುವ ತಿಂಗಳುಗಳಲ್ಲಿ, ಶಾಲೆಯಲ್ಲಿ ಆಮಿ ಭೇಟಿ ಮಾಡಿದ ಜೆರ್ರಿ ರಾಬಿನ್‌ಸನ್ ಎಂಬ ಹುಡುಗನಿಂದ ಅವಳ ಸಂಕಲ್ಪಕ್ಕೆ ಇಂಬು ಸಿಕ್ಕಿತು. ತನ್ನ ಜೀವನದಲ್ಲಿ ಮೊದಲ ಬಾರಿಗೆ, ತಾನು ಹೇಳಿದ್ದನ್ನು ಗಮನವಿಟ್ಟು ಕೇಳುವ, ಹಾಗೂ ತನಗಾಗಿ ಚಿಂತಿಸುವ ಒಬ್ಬರಿದ್ದಾರೆಂದು ಆಮಿ ಗನಿಸಿತು. ಅವರ ಸ್ನೇಹ ಪ್ರೇಮಕ್ಕೆ ತಿರುಗಿತು. ಇಬ್ಬರೂ ಮದುವೆಯಾಗಿ ಮಕ್ಕಳನ್ನು ಪಡೆಯಬೇಕೆಂಬ ಆಮಿಯ ನಿರ್ಣಯದಲ್ಲಿ ಸಂದೇಹವಿರಲಿಲ್ಲ.

ಆದರೆ ಆ ಸಮಯದಲ್ಲಿ ಸಮಾಜ ಸೇವಕರಿಗೆ ತಿಳಿಯದಂತೆ ಜಾನ್ ತಾಯಿಯ ಮನೆಯಲ್ಲಿ ವಾಸಿಸಲು ಬಂದು ಕುಟುಂಬಕ್ಕೆ ಹೊಸ ಉಪದ್ರವ ತಂದಿಟ್ಟಳು. ಜಾನ್ ಅತ್ಯಂತ ಅಧಿಕ ಮಾದಕವಸ್ತುವಿನ ಸೇವನೆ ಮಾಡುತ್ತಿದ್ದರೂ ಆಮಿಯ ಅಜ್ಜ, ತನ್ನ ಮಗಳನ್ನು ಮನೆಯಿಂದ ಹೊರಗೆ ಅಟ್ಟಲಾರದಾದಳು. ಒಂದು ಮಧ್ಯಾಹ್ನ ಆಮಿಗೆ ವಿಲ್ಲಾ ಪಾರ್ಕ್ ಹೈಸ್ಕೂಲಿನಿಂದ ಕರೆ ಬಂತು. ಒಬ್ಬ ಸಮಾಜ ಸೇವಕ ಆಕೆಗಾಗಿ ಕಾಯುತ್ತಿದ್ದ. ಆ ಸಮಾಜ ಸೇವಕ ಹೇಳಿದ. ''ನಿನ್ನ ತಾಯಿ ನಿನ್ನೊಡಳಿದ್ದಾಳೆಂಬುದು ನನಗೆ ಗೊತ್ತು. ಜೋಯಿ ತನ್ನ ಬೆರಳನ್ನು ಮಾದಕ ಸೂಚಿಯಿಂದ ಚುಚ್ಚಿಕೊಂಡ'' ಮುಂದೇನಾಗಬಹುದೆಂದು ತಿಳಿದು

ಆಮಿ ಧೈರ್ಯಗೊಂಡಳು. ''ಮಕ್ಕಳಾದ ನಿಮ್ಮನ್ನು ಪಾಲಕರ ರಕ್ಷಣೆಯಲ್ಲಿಡ ಬೇಕಾಗಿದೆ''.

''ಇಲ್ಲ, ನಮ್ಮನ್ನು ಬೇರ್ಪಡಿಸಬೇಡಿ'' ಆ ಹುಡುಗಿ ತತ್‌ಕ್ಷಣ ಹೇಳಿದಳು . ''ಈಗಿರುವ ರೀತಿಯಲ್ಲೇ ನಮ್ಮನ್ನು ನೀವು ಬಿಡಲಾರಿರಾ?''

ಸಮಾಜ ಸೇವಕ ತಲೆಯಲ್ಲಾಡಿಸಿದ. ತನ್ನ ಮರಿಗಳನ್ನು ರಕ್ಷಿಸುವ ಸಿಂಹಿಣಿಯಂತೆ ಆಮಿ ಗರ್ಜಿಸಿದಳು. ''ನಾನೇಕೆ ಅವರನ್ನು ಕರೆದು ಕೊಂಡು ಹೋಗಬಾರದು? ಹೇಗಾದರೂ ಮಾಡಿ ಸದಾಕಾಲ ನಾನು ಅವರನ್ನು ನೋಡಿಕೊಳ್ಳುತ್ತೇನೆ''

ಸಮಾಜ ಸೇವಕ ಸಂಕೋಚಪಡುತ್ತಾ ಹೇಳಿದ. ''ಇರಬಹುದು, ಒಮ್ಮೆ ನಿನಗೆ ೧೮ ವರ್ಷವಾದರೆ ಅವರ ಸಂಬಂಧಪಟ್ಟ ಪಾಲಕಳಾಗಿ ನೀನು ಪ್ರಾರ್ಥನಾ ಪತ್ರ ಸಲ್ಲಿಸಬಹುದು. ನಿಮ್ಮೆಲ್ಲರನ್ನೂ ಒಟ್ಟಿಗೆ ಇಡುವಂತಹ ಮನೆ ಸಿಗುವವರೆಗೆ ನೀನು ಅವರ ಸಾಕು ತಾಯಿಯಾಗಿರಬಹುದು.''

ಆಮಿ ಹೇಳಿದಳು, ''ಖಂಡಿತ ನಾನು ಹಾಗೆ ಮಾಡುವೆ,'' ಅದಕ್ಕಾಗಿ ಏನು ಮಾಡಬೇಕಾಗಬಹುದೆಂಬ ತಿಳುವಳಿಕೆ ಇಲ್ಲದಿದ್ದರೂ ಆಕೆ ಚಿಂತಿಸಲಿಲ್ಲ. ತನ್ನ ಇಡೀ ಜೀವನದಲ್ಲಿ ಒಂದು ದಿನ, ಒಮ್ಮೆ ತಾನು ಮುಂದುವರಿಯುವುದಾಗಿಯೂ, ಹೇಗಾದರೂ ಪರಿಸ್ಥಿತಿಯನ್ನು ಸಂಭಾಳಿಸುವುದಾಗಿಯೂ ಆಕೆ ನಿರ್ಧರಿಸಿದಳು. ತನ್ನ ಜವಾಬ್ದಾರಿಗೆ ತೆರಬೇಕಾದ ಪೂರ್ಣಬೆಲೆ ಏನೆಂಬುದನ್ನು ಆಕೆ ಬೇಗ ಅರಿತುಕೊಂಡಳು. ಒಂದು ದಿನ ಮಧ್ಯಾಹ್ನ ಆಕೆ ಒಂದು ಕಾಗದವನ್ನು ಕೈಯಲ್ಲಿ ಹಿಡಿದುಕೊಂಡು ಮನೆಗೆ ಬಂದಳು. ಅದು ''ಯು.ಸಿ.ಎಲ್.ಎ'' ನಿಂದ ಬಂದ ಪತ್ರವಾಗಿತ್ತು. ಅವರ ವಿಶಾಲ ಹಾಗೂ ಹಸುರಾದ ಆವರಣವನ್ನು ಬಂದು ನೋಡಬೇಕೆಂದು ಆಕೆಗೆ ಆಮಂತ್ರಣವಿತ್ತು. ಆಕೆ ಬಹಳ ದಿನಗಳಿಂದ ಅಪೇಕ್ಷೆ ಪಟ್ಟಿದ್ದ, ತನ್ನ ಹಿನ್ನೆಲೆಯ ಬಗ್ಗೆ ಯಾರಿಗೂ ತಿಳಿಯದಂಥ ಹಾಗೂ ತಾನು ಒಬ್ಬ ದಾದಿಯಾಗಲೀ, ಬಹುಶಃ ವಕೀಲಳಾಗಲೀ ಆಗಲು ಅಧ್ಯಯನ ಮಾಡಬಹುದಾದ ಜಾಗ ಅದಾಗಿತ್ತು.

ಆದರೂ ಆ ಪತ್ರ ಆಕೆಯನ್ನು ಒಳಗೊಳಗೇ ಅಧೀರಳನ್ನಾಗಿಸಿತ್ತು. ಮನೆಗೆ ಹೋಗುವಾಗ ಆ ಸುಪ್ರಸಿದ್ಧ ವಿಶ್ವವಿದ್ಯಾಲಯದ ಬಗ್ಗೆ ಕಲ್ಪಿಸಿಕೊಳ್ಳುತ್ತ ಸದಾಕಾಲದಿಂದಿದ್ದ ಕಷ್ಟ, ಕರ್ತವ್ಯಗಳಿಂದ ಮುಕ್ತಗೊಂಡ ಜೀವನವನ್ನು ಚಿತ್ರಿಸಿಕೊಳ್ಳಲಾರಂಭಿಸಿದಳು.

ರಸ್ತೆಯ ತಿರುವಿನೆಡೆಗೆ ತಿರುಗಿ ನೋಡಿದಾಗ ತನ್ನ ಸಹೋದರರು ಅಜ್ಜಿಯ ಮನೆಯ ಹೊರಗೆ ಆಡುತ್ತಾ, ಓಡುತ್ತಾ ನಗುತ್ತಾ ಇರುವುದನ್ನು ಆಕೆ ನೋಡಿದಳು. ಆಡಮ್, ಜೋಯಿ, ಟೋನಿ, ಆಕೆ ಅವರ ಬಟ್ಟೆ ಬದಲಾಯಿಸಿ ಉಣಬಡಿಸಿದಳು, ಹೆದರಿದಾಗ ಆಸರೆ ಕೊಟ್ಟಳು. ಅವರಿಗಾಗಿ ಕಥೆಗಳನ್ನು ಓದಿದಳು, ಹಾಡುಗಳನ್ನು ಹಾಡಿದಳು. ತಾನು ಅಂದುಕೊಂಡ ಆಕೆಯ ಕನಸುಗಳು ಆಕೆಯ ಆತ್ಮಕ್ಕೆ ಸಿಗುವ ಪ್ರೀತಿಗೆ ಯಾವರೀತಿಯಲ್ಲೂ ಸರಿಸಾಟಿಯಾಗಿರಲಿಲ್ಲ. ಆಕೆ ಪತ್ರವನ್ನು ಮುದುರಿ ಎಸೆದಳು.

ಒಂದು ತಿಂಗಳನಂತರ ಬಹಳ ಕಷ್ಟಪಟ್ಟು ಸ್ಥೂಲವಾಗಿ ಕಾಗದ ಪತ್ರಗಳ ಕೆಲಸ ಮುಗಿಸಿ, ಆಮಿ, ಒಂದು ಕುಟುಂಬ ನ್ಯಾಯಾಲಯದಲ್ಲಿ ಒಬ್ಬ ನ್ಯಾಯಾಧೀಶನ ಮುಂದೆ ಕುಳಿತಳು. ನ್ಯಾಯಾಧೀಶ ಹೇಳಿದ ''ನೀನು ಬಹಳ ಚಿಕ್ಕವಳು. ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಖಂಡಿತ ನಿಶ್ಚಯಿಸಿರುವೆಯಾ?'' ಆಮಿ ಸರಳವಾಗಿ ಉತ್ತರಿಸಿದಳು, ''ನನ್ನ ಕುಟುಂಬವನ್ನು ಒಟ್ಟಿಗೆ ಇಟ್ಟುಕೊಳ್ಳುವುದಲ್ಲದೆ ಬೇರೆ ಗುರಿ ಇಲ್ಲ''. ನ್ಯಾಯಾಧೀಶನ ಅಂತಿಮ

ನಿರ್ಧಾರ ೧೮ ವರ್ಷದ ಹುಡುಗಿ ಅದ್ಭುತ ಜಯ ತಂದುದಾಗಿತ್ತು. ತನ್ನ ಒಡಹುಟ್ಟಿದ ವರಿಗೆ ಆರು ತಿಂಗಳಕಾಲ ಆಮಿ ಪೋಷಕಳಾಗಿ ನೇಮಿಸಲ್ಪಟ್ಟಳು.

ಹೈಸ್ಕೂಲಿಗೆ ಹೋಗುವ ಬದಲು ಆಮಿ ತಾನು ವಾಸಿಸಲು ಯೋಗ್ಯವಾಗಿರುವ ಒಂದು ಜಾಗಕ್ಕಾಗಿ ಹುಡುಕಿದಳು. ತೀವ್ರ ಹುಡುಕಾಟದ ನಂತರ ಕೊನೆಗೆ ಒಂಟಿ ಮಲಗುವ ಕೊಠಡಿಯಿರುವ ಮನೆಯನ್ನು ಕಂಡು ಹಿಡಿದಳು. ಹೂವಿನಂಗಡಿಯ ಹಾಗೂ ಪರಿಚಾರಿಕೆಯ ಕೆಲಸ ಮಾಡುವಾಗ ಬಂದ ಸಂಬಳದ ಉಳಿತಾಯ ಹಾಗೂ ಸಾಕು ತಾಯಿಯಾಗಿ ಮಾಡಿದ ಕೆಲಸಕ್ಕೆ ಕ್ಯಾಲಿಫೋರ್ನಿಯಾದಿಂದ ಸಿಕ್ಕಿದ ಹಣ, ಮೊದಲ ಮತ್ತು ಕೊನೆಯ ತಿಂಗಳ ಬಾಡಿಗೆಯನ್ನು ಕೊಡಲು ಆಕೆಯನ್ನು ಸಶಕ್ತಳನ್ನಾಗಿಸಿತು.

ಬರುವ ತಿಂಗಳುಗಳಲ್ಲಿ ಆಕೆಯ ಒಡಹುಟ್ಟಿದವರು ಆಕೆಗೆ ಕಷ್ಟವನ್ನೇ ಕೊಟ್ಟರು. ಆ ಹುಡುಗರು ಕೆಲವು ವೇಳೆ ಶಾಲೆಗೆ ತಪ್ಪಿಸಿಕೊಳ್ಳುತ್ತಿದ್ದರು. ಕೋಪ ಬಂದಾಗ ಆಮಿಗೆ ಶಾಪ ಹಾಕುತ್ತಿದ್ದರು. ಆಮಂಡಳ ಜೊತೆ ಹಲವು ಸಾರಿ ಮುಖ ಕಟ್ಟಿಟ್ಟುಕೊಳ್ಳುವಂತಾಯಿತು.

ಪರಿಸ್ಥಿತಿ ಪ್ರಕೋಪಕ್ಕೆ ಹೋದಾಗ ಆಮಂಡ, ''ನೀನೇನು ನನ್ನ ತಾಯಿಯಲ್ಲ'' ಎಂದು ಕಿರುಚಾಡುತ್ತಿದ್ದಳು.

ಒಂದು ದಿನ ಶಾಲೆಗಾಗಿ ತನ್ನ ಓದಿನ ನಿಯತ ಕಾರ್ಯ ಮಾಡುವಾಗ ಆಡಮ್ ವಿರೋಧಿಸುತ್ತ ಪುಸ್ತಕಗಳನ್ನು ಕೊಠಡಿಯಲ್ಲೆಲ್ಲಾ ಚೆಲ್ಲಾಡಿದ. ಸ್ವಲ್ಪ ಪುಸಲಾಯಿಸಿದ ನಂತರ ನಿಜವಾಗಿಯೂ ಏನಾಗುತ್ತಿದೆಯೆಂಬುದನ್ನು ಅವನು ಆಮಿಗೆ ಹೇಳಿದ.

ಆಡಮ್, ಕಣ್ಣಿನಲ್ಲಿ ನೀರು ತುಂಬಿಕೊಂಡು ಹೇಳಿದ ''ನನ್ನ ತರಗತಿಯ ಪ್ರತಿಯೊಬ್ಬ ಹುಡುಗನೂ ಓದಬಲ್ಲ. ಆದರೆ ನಾನು ಓದಲಾರೆ''.

ಓದುವ ವಿಷಯದಲ್ಲಿ ತನಗಾಗುತ್ತಿದ್ದ ನಾಚಿಕೆಯನ್ನು ಜ್ಞಾಪಿಸಿಕೊಂಡು, ಆಮಿ ಎಲ್ಲ ಮಕ್ಕಳನ್ನೂ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಲು ಪ್ರಾರಂಭಿಸಿದಳು. ಬಳಿಕ ಹಲವು ವಾರಗಳವರೆಗೆ ಪ್ರತಿಯೊಬ್ಬರಿಗೂ, ಕಲಿಸಲು ಅಧ್ಯಾಪಕರಿಗಾಗಿ ವಿಶೇಷ ಸಮಯವನ್ನು ಗೊತ್ತುಪಡಿಸಿದಳು. ತನ್ನ ಓದುವ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡ ರೀತಿ ಆಡಮ್‌ಗೆ ಅಭಿಮಾನವುಂಟಾಯಿತು.

ಎಂದಿನಂತೆ ಒಂದು ಹೊಸ ಅಡಚಣೆ ಎದುರಿಗೆ ಬಂದರೂ, ಈ ಬಾರಿ ಇದರಿಂದ ಆಮಿಗೆ ದೊಡ್ಡ ದಿಗ್ಭ್ರಮೆಯೇ ಆಯಿತು. ಕುಟುಂಬ ನಿಯಂತ್ರಣ ಮಾತ್ರೆಗಳನ್ನು ತೆಗೆದುಕೊಂಡಾಗ್ಯೂ ಆಕೆ ಜೆರ್ರಿಯ ಮಗುವಿಗೆ ತಾಯಿಯಾಗುವವಳಿದ್ದಳು. ಆ ಸಮಯ ಬಹಳ ಕಷ್ಟದಾಯಕವಾದುದಾಗಿತ್ತು. ಆದರೆ ಆಕೆ ಗರ್ಭಪಾತ ಮಾಡಿಸಿಕೊಳ್ಳುವ ಅಥವಾ ಮಗುವನ್ನು ಬಿಟ್ಟುಬಿಡುವ ನಿರ್ಣಯಕ್ಕೆ ಬರುವ ಯಾವ ಮಾರ್ಗವೂ ಇರಲಿಲ್ಲ. ಇತರ ಮಕ್ಕಳಿಗೆ ಸಿಕ್ಕುವಂತೆ ಅವಳ ಪ್ರೀತಿ ಈ ಮಗುವಿಗೂ ಸಿಕ್ಕುವುದು. ಈರೀತಿ ಇನ್ನೊಬ್ಬ ಕಿಶೋರ ಡಾನ್ ಏನ್ ಆಮಿಯ ೧೯ನೇ ವರ್ಷದಲ್ಲಿ ಆ ಕುಟುಂಬಕ್ಕೆ ಕಾಲಿಟ್ಟ.

ಪರಿಸ್ಥಿತಿಯ ಒತ್ತಡ ನಿರ್ದಾಕ್ಷಿಣ್ಯವಾಗಿ ಹೆಚ್ಚುತ್ತಲೇ ಇತ್ತು ಅಂತಿಮವಾಗಿ ಅದು ವಿಸ್ಫೋಟಗೊಳ್ಳುವ ಮಟ್ಟಕ್ಕೆ ಬಂದಿತು. ಆ ರಾತ್ರಿ ವಿಳಂಬವಾಗಿ ಆಮಿ ಕೆಲಸದಿಂದ ಮನೆಗೆ ಹಿಂತಿರುಗಿದಾಗ ಮನೆ ಅಸ್ತವ್ಯಸ್ತವಾಗಿತ್ತು. ಆಕೆ ಆ ಹುಡುಗರನ್ನು ಆಮಂಡಳ ರಕ್ಷಣೆಯಲ್ಲಿ ಬಿಟ್ಟು ಹೋಗಿದ್ದಳು. ಆಮಂಡ ಆಮಿಯ

ಹಾಸಿಗೆಯ ಮೇಲೆ ಮಲಗಿ ನಿದ್ರಿಸಿದ್ದಳು.

ತಾನು ತೆಗೆದುಕೊಂಡ ಜವಾಬ್ದಾರಿ ಅತ್ಯಧಿಕವಾಯಿತೆಂದು, ಇದರಿಂದ ಆಮಿ ವಿಚಲಿತಳಾದಳು. ಆದರೆ ಬೇರೆ ದಾರಿ ಇಲ್ಲವೆಂದು ಆಕೆಗೆ ಗೊತ್ತಿತ್ತು. ತನ್ನ ಒಡಹುಟ್ಟಿದವರು ಒಬ್ಬರಿಂದೊಬ್ಬರು ಬೇರೆಯಾಗುವುದಕ್ಕೆ ಆಕೆ ಬಿಡಲಾರಳು. ಅವರದು ಒಂದು ಕುಟುಂಬ ಎನ್ನುವಂತೆ ಮಾಡಲು ಅವರುಗಳನ್ನು ಒಟ್ಟಿಗೆ ಕೆಲಸಮಾಡುವಂತೆ ಆಕೆ ಮಾಡಬೇಕಾಗಿತ್ತು. ಹತಾಶೆಯಿಂದ ಕಂಪಿಸುತ್ತಾ ಆಕೆ ಕಿರುಚಿದಳು 'ಈ ಕ್ಷಣ ಎಲ್ಲರೂ ಇಲ್ಲಿ ಸೇರಿ''.

ಮೂವರು ಹುಡುಗರೂ ಒಬ್ಬರ ಮೇಲೊಬ್ಬರು ಬೀಳುತ್ತಾ ಕೊಠಡಿಯೊಳಗೆ ಬಂದರು. ಆಕೆ ಕೇಳಿದಳು ''ನೀವು ಏಕೆ ಹೀಗೆ ಮಾಡಿದಿರಿ?'' ಅವಳ ಮಾತುಗಳು ತೀಕ್ಷ್ಣವಾಗಿದ್ದುವು. ಅವರು ನಮ್ಮ ಮೇಲೆ ಒಂದು ಕಣ್ಣಿಟ್ಟಿದ್ದಾರೆಂಬುದು ನಿಮಗೆ ತಿಳಿದಿದೆಯಲ್ಲವೇ ?''

ಕೆಲವೇ ನಿಮಿಷಗಳಲ್ಲಿ ಕೋಪದ ಅಲೆ ಇಳಿಯಿತು. ಆಕೆ ಬಹಳ ಪ್ರೀತಿಯಿಂದ ಹೇಳಿದಳು ''ಮಕ್ಕಳೇ ನಮ್ಮ ಆಸ್ತಿ ಎಂದರೆ ನಾವು ಒಬ್ಬರಿಗೊಬ್ಬರು. ನೀವು ಆರು ತಿಂಗಳು ಒಟ್ಟಿಗೆ ಇರಬೇಕಾದರೆ ನಾವು ಜವಾಬ್ದಾರಿಯಿಂದಿದ್ದೇವೆಂಬುದನ್ನು ತೋರಿಸಬೇಕು. ಈ ಸ್ಥಳವನ್ನು ನಾವು ಅಚ್ಚುಕಟ್ಟಾಗಿಡಬೇಕು.''

''ನಿಮ್ಮ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ನಾನು ಕೊಡು ತಂದ ಕ್ಷಣವೇ ಆಹಾರವನ್ನು ತಿಂದು ಮುಗಿಸಬಾರದು. ಇಲ್ಲವಾದರೆ ನಮಗೆ ಮುಂದಿನ ವಾರ ಎನ್ನುವುದೇ ಬರುವುದಿಲ್ಲ. ನೀವು ಶಾಲೆಗೆ ತಪ್ಪಿಸಿಕೊಳ್ಳುವ ಮೊದಲು ಯೋಚಿಸಬೇಕು.'' ಬೆಚ್ಚಿಬಿದ್ದ ಮಕ್ಕಳು ಯಥಾಶಕ್ತಿ ಕೆಲಸ ಮಾಡಲು ಒಪ್ಪಿಕೊಂಡರು.

ಜೆರ್ರಿ , ಆಮಿಗೆ ಅವನ ಮತ್ತು ತನ್ನ ಮಗುವಿನೊಡನೆ ನಡೆಸುವ ಜೀವನ ಅಥವಾ ತನ್ನ ಒಡಹುಟ್ಟಿದವರೊಡನೆ ನಡೆಸುವ ಜೀವನ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಲು ಹೇಳಿದ. ಆಕೆ ಆಯ್ಕೆ ಮಾಡಿದಳು. ಅವರ ಸಂಬಂಧ ಅಲ್ಲಿಗೆ ಕೊನೆಗೊಂಡಿತು.

ಒಂದೊಂದು ತೊಂದರೆ ಬಂದಾಗಲೂ ಆಮಿಯ ಮನಸ್ಸು ದೃಢವಾಗುತ್ತಾ ಹೋಯಿತು. ನ್ಯಾಯಾಲಯ ಆಕೆಗೆ ಪೋಷಕಳಾಗಿ ಮುಂದುವರಿಯುವ ಅವಕಾಶ ಕೊಟ್ಟಾಗ, ಆಕೆಯ ಪ್ರಯತ್ನಕ್ಕೆ ಬಹುಮಾನ ಸಿಕ್ಕಂತಾಯಿತು.

ಹುಡುಗರಿಗೆ ಇದು ಆನಂದದಾಯಕವಾಗಿತ್ತು. ಆದರೆ ತನ್ನ ತಂಗಿಯೊಡನೆ ಆಮಿಯ ಸಂಬಂಧ ಹಳಸುತ್ತಾ ಹೋಯಿತು. ತನ್ನ ೧೫ನೇ ವಯಸ್ಸಿನಲ್ಲಿ ಆಮಂಡ, ತನ್ನ ಅತ್ತೆಯೊಡನೆ ವಾಸಿಸಲು ಅಂತಿಮವಾಗಿ ಹೊರಟು ಹೋದಳು.

ಈಗ ಆಮಿಯೊಡನೆ, ಡೊನಾವಿನ್ ಹಾಗೂ ಮೂವರು ಹುಡುಗರು ಉಳಿದುಕೊಂಡರು. ಆಮಿ ಒಂದು ಬಹುಮಾನ ಘೋಷಿಸುವುದರ ಮೂಲಕ ಅವರನ್ನು ಆಕರ್ಷಿಸಿದಳು. ಸಾಕಷ್ಟು ಹಣ ಉಳಿಸಿ ಜಮಾ ಮಾಡಿದರೆ, ನಾವು ನಮ್ಮ ಸ್ವಂತಮನೆಯನ್ನು ಪಡೆದುಕೊಳ್ಳಬಹುದು. ನಾವು ಒಂದು ನಾಯಿಯನ್ನೂ ಇಟ್ಟುಕೊಳ್ಳಬಹುದು. ಈಗ ಅವರು ಯಾವುದಕ್ಕೂ ಪರಿತಪಿಸಿಬೇಕಾಗಿರಲಿಲ್ಲ.

ಮಕ್ಕಳ ಪೋಷಕಳಾಗಿ ಉಳಿಯುವ ತೃಪ್ತಿಯಿಂದ, ತನ್ನ ಸಾಮರ್ಥ್ಯವನ್ನು ಸಾಬೀತು ಪಡಿಸಬೇಕಾಗಿದ್ದ ಆಕೆಯ ಮಾನಸಿಕ ಒತ್ತಡ ಕಡಿಮೆಯಾಯಿತು. ಹುಡುಗರು ಇನ್ನೂ ನ್ಯಾಯಾಲಯದ ನಿಯಂತ್ರಣದಲ್ಲೇ ಇದ್ದರು.

ಸಮಾಜ ಸೇವಕರು ಆಕೆಯ ಜವಾಬ್ದಾರಿಯ ಬಗ್ಗೆ ವಿಚಾರಿಸುತ್ತಿದ್ದರು. ಆ ಹುಡುಗರಿಗೆ ಅಪಮಾನವಾಗುವಂಥ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ''ಆಕೆ ನಿಮಗೆ ಉಣಿಸುತ್ತಾಳೆಯೇ? ನಿಮಗೆ ತೊಂದರೆ ಮಾಡಲು ಎಂದಾದರೂ ಪ್ರಯತ್ನಿಸಿದ್ದಾಳೆಯೇ?'' ತನ್ನ ಒಡಹುಟ್ಟಿದವರನ್ನು ತನ್ನಿಂದ ಬೇರ್ಪಡಿಸುವುದಿಲ್ಲ ಎಂಬ ನಂಬಿಕೆಯೇ ಆಕೆಗಿರಲಿಲ್ಲ.

ಭೇಟಿಕೊಡುತ್ತಿದ್ದ ಒಬ್ಬ ಸಮಾಜ ಸೇವಕಿ ಆಶ್ಚರ್ಯಕರ ಸುದ್ದಿಯನ್ನು ತರುವವರೆಗೂ ಆಕೆ ಹಾಗೇ ಭಾವಿಸಿದ್ದಳು.

''ಹುಡುಗರನ್ನು ಪೋಷಕರ ರಕ್ಷಣೆಯಿಂದ ಹೊರತಂದು ಯಾರ ಮನೆಗಾದರೂ ದತ್ತು ಕೊಡಬೇಕೆಂದು ಅಪೇಕ್ಷಿಸುತ್ತೇವೆ'' ಎಂದು ಆಕೆ ಹೇಳಿದಳು. ಪುನಃ ಆ ಕುಟುಂಬ ಒಡೆಯಲಿದೆ ಎಂಬ ಮುನ್ಸೂಚನೆ ಪಡೆದ ಆಮಿ ಉತ್ತರ ಕೊಟ್ಟಳು. ''ಒಳ್ಳೆಯದು, ನೀವು ಬೇಕಾದರೆ ದತ್ತು ಎಂದೇ ಕರೆಯಿರಿ. ಆದರೆ ಅವರು ಎಲ್ಲೂ ಹೋಗುವುದಿಲ್ಲ.'' ಆಕೆ ಆಶ್ಚರ್ಯಪಡುವಂತೆ, ಆ ಸಮಾಜ ಸೇವಕಿ ಆಕೆಯ ಸಂಕ್ಷಿಪ್ತ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಂಡಳು. ಆಕೆ ವಿವರಿಸಿದಳು. ''ಆಮಿ ಆ ಹುಡುಗರನ್ನು ದತ್ತು ತೆಗೆದುಕೊಳ್ಳುವುದಾದರೆ ಅವರೂ ಇತರೆ ಕುಟುಂಬಗಳಂತೆಯೇ ಇರಬಹುದು. ಮೇಲ್ವಿಚಾರಣೆಯಿಂದ ಮುಕ್ತವಾಗಿ ತಮ್ಮ ಜೀವನ ನಡೆಸಬಹುದು.'

ಆ ರಾತ್ರಿ, ಊಟದ ಸಮಯದಲ್ಲಿ ಆಮಿ ಈ ವಿಚಾರವನ್ನು ಹುಡುಗರಿಗೆ ಹೇಳಿದಳು. ಜಾಯ್ ಹೇಳಿದ ''ಬಹಳ ಒಳ್ಳೆಯದು. ವಿನೋದಶೀಲನಾಗಿ ಉಲ್ಲಾಸದಿಂದ ಬ್ರೆಡ್ಡಿನ ಒಂದು ಚೂರನ್ನ ಆಡಮ್‌ನ ಕಡೆಗೆ ಎಸೆದ. ಆತನ ಸಹೋದರ ಅಷ್ಟೇ ರಭಸದಿಂದ ಹಿಂದಕ್ಕೆ ಎಸೆದ. ಆ ಸುಂದರ ಕ್ಷಣದಲ್ಲಿ ಬ್ರೆಡ್ಡಿನ ಚೂರು ಹಾರಾಡುತ್ತಿತ್ತು.

ಆಮಿ ಶಾಂತವಾಗಿ ತನ್ನ ಕಣ್ಣುಗಳನ್ನು ಹೊರಳಿಸಿದಳು. ಇತರೆ ಕುಟುಂಬಗಳಂತೆ ಇರಲು ಅವರು ಈಗ ಹೆಚ್ಚು ಪ್ರಯಾಸಪಡಬೇಕಾಗಿರಲಿಲ್ಲ.

ದತ್ತು ತೆಗೆದುಕೊಳ್ಳಲು ಆವಶ್ಯಕವಾದ ನಿಯಮಗಳು ಹಾಗೂ ಕಾಗದ ಪತ್ರಗಳ ಕಾರ್ಯ ಪ್ರಾರಂಭಿಸಿದಾಗ ಆಮಿ ಭಯಭೀತಳೂ, ಭ್ರಾಂತಳೂ ಆದಳು. ಕೊನೆಗೆ ೧೯೯೯ನೇ ಮಾರ್ಚಿಯ ಹಿಯರಿಂಗ್‌ನಲ್ಲಿ ನ್ಯಾಯಾಧೀಶೆ ಗೈಲ್ ಆಂಡ್ಲರ್‌ಳ ಮುಂದೆ ಕುಟುಂಬದವರು ಹಾಜರಾದರು. ಆಕೆ ಆಡಮ್ ಹಾಗೂ ಜೋಸಫನ ಮತ್ತು ಅಂತೋಣಿಯ ತಂದೆ ಹಾಗೂ ಜಾನ್‌ಳ ಪೈತೃಕ ಅಧಿಕಾರಗಳನ್ನು ಅಂತ್ಯಗೊಳಿಸಿದಳು. ಪೂರ್ಣರೂಪವಾಗಿ ದತ್ತು ತೆಗೆದುಕೊಳ್ಳುವುದಕ್ಕೆ ಇದೊಂದು ಮಹತ್ವಪೂರ್ಣ ಹೆಜ್ಜೆಯಾಗಿತ್ತು. ಆಮಿಯನ್ನು ಕುರಿತು ಹೇಳುವಾಗ ನ್ಯಾಯಾಧೀಶೆಯ ಕಣ್ಣುಗಳು ತುಂಬಿ ಬಂದುವು. ಆಕೆ ಹೇಳಿದಳು, ''ನಿನ್ನ ಬಗ್ಗೆ ನನಗೆ ಬಹಳ ಅಭಿಮಾನವಿದೆ ವಿಶೇಷವಾಗಿ ಈ ಮಕ್ಕಳಿಗಾಗಿ ನೀನು ಮಾಡುತ್ತಿರುವುದನ್ನು ಹೆಚ್ಚು ಕುಟುಂಬದವರು ಮಾಡಲಾರರು.''

ನ್ಯಾಯಾಧೀಶೆ ಆಂಡ್ಲರ್ ಈ ಮೂವರು ಹುಡುಗರೆಡೆಗೆ ತಿರುಗಿ ಕೇಳಿದಳು. ''ಮುಂದಿನ ಸಲ ನಿಮ್ಮನ್ನು ನೋಡುವಾಗ ನೀವು ದತ್ತಕ್ಕೆ ಸಿದ್ಧರಾಗಿರುತ್ತೀರಿ ಈ ಬಗ್ಗೆ ನಿಮಗೇನೆನಿಸುತ್ತದೆ?''

ಜಾಯ್ ಕೇಳಿದ, ''ನಾವು ನಮ್ಮ ಕುಟುಂಬದಿಂದ ಎಂದಿಗೂ ದೂರವಾಗದೆ ಇರಬಹುದೇ?''

ನ್ಯಾಯಾಧೀಶಳು ತಲೆಯಾಡಿಸಿದಳು. ''ಎಂದೆಂದೂ ಒಂದು ಕುಟುಂಬದವರಾಗಿರಬೇಕೆಂಬ ಯೋಜನೆ ನಿಮ್ಮದು.''

ಅಂತಿಮ ನಿರ್ಧಾರ ೧೯೯೯ನೇ ನವಂಬರ್ ತಿಂಗಳಿಗೆ ಬಂತು. ಆ ಚಿಕ್ಕ ಹೆಂಗಸು, ಒಬ್ಬೊಬ್ಬ ಮಗುವಿಗಾಗಿ ಒಂದೊಂದು ಕಾಗದದ ಮೇಲೆ ಹಸ್ತಾಕ್ಷರ ಮಾಡುವಾಗ, ನ್ಯಾಯಾಧೀಶೆ ಆಂಡ್ಲರ್‌ನ ಕೋರ್ಟಿನಲ್ಲಿ ಆಮಿಯ ಒಡ ಹುಟ್ಟಿದವರು ಆಕೆಯ ಅಕ್ಕಪಕ್ಕಗಳಲ್ಲಿ ಕುಳಿತಿದ್ದರು. ಕಾರ್ಯಚರಣೆ ಕೊನೆಗೊಂಡಾಗ, ಆಮಿ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನರ್ಪಿಸಿದಳು.

ನ್ಯಾಯಾಧೀಶೆ ಆಂಡ್ಲರ್ ಪ್ರತಿಕ್ರಿಯಿಸಿದಳು. ''ಇಲ್ಲ ಇಲ್ಲ, ನೀನು ಈ ಮೂರು ಮಕ್ಕಳನ್ನು ರಕ್ಷಿಸಿದ್ದಕ್ಕೆ ನಿನಗೆ ಧನ್ಯವಾದಗಳು''.

ವಸಂತಋತುವಿನ ಒಂದು ವಿರಾಮದ ದಿನ ಮರ್ಯಾದಸ್ಥರಿರುವ ಅನಾಹೈಮ್ ನೆರೆಹೊರೆಯಲ್ಲಿ, ಆಮಿ ಅಚ್ಚುಕಟ್ಟಾಗಿರಿಸಿದ್ದ ಒಂದು ಅಂತಸ್ತಿನ ಮನೆಯ ಮುಂದೆ ನಿಂತಿದ್ದಳು . ತನ್ನ ಸಹೋದರರು ಬಾಸ್ಕೆಟ್ ಬಾಲ್ ಆಡುತ್ತಿರುವುದನ್ನು ನೋಡಿದಳು. ತನ್ನ ನಾಯಿ ಟಹೋಯಿ ಉಲ್ಲಾಸದಿಂದ ಬೊಗಳುವುದನ್ನು ಕೇಳಿದಳು. ಆ ಚಿಕ್ಕ ಹೆಂಗಸು ತನ್ನ ಪ್ರತಿಜ್ಞೆಯನ್ನು ಉಳಿಸಿಕೊಂಡಳು. ಅವರು ಒಂದು ಮನೆಯನ್ನು, ನಿಜವಾದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡರು ಹುಡುಗರಿಗೆ ನಾಯಿಯೂ ಸಿಕ್ಕಿತು ಒಂದು ಕಾಲದಲ್ಲಿ ಇಕ್ಕಟ್ಟಾದ ಓಣಿಗಳಲ್ಲಿ ತನ್ನ ಕುಟುಂಬ ಅದರಿಂದ ದೂರ ಹೊಸ ಪ್ರಪಂಚದಲ್ಲಿದೆ ಎನ್ನುವುದನ್ನು ಅನುಭವಿಸುತ್ತಾ ಆಮಿ ಆನಂದಗೊಂಡಳು. ಬರುತ್ತಿರುವ ಐಸ್‌ಕ್ರೀಮ್ ಗಾಡಿಯ ಟನ್ ಟನ್ ಶಬ್ದವನ್ನು ಕೇಳಿದಳು. ಇತರ ತಾಯಂದಿರಂತೆ ಆಕೆ ಮಕ್ಕಳನ್ನು ಒಂದೆಡೆ ಸೇರಿಸಲು ಹೋದಳು.

ಆಮಿ ತನ್ನ ಕುಟುಂಬದ ಪರಿಸ್ಥಿತಿಯನ್ನು ಉತ್ತಮಗೊಳಿಸತೊಡಗಿದಳು. ಒಂದು ಕಮ್ಯುನಿಟಿ ಕಾಲೇಜಿನಲ್ಲಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ತೆಗೆದುಕೊಳ್ಳಲಾರಂಭಿಸಿದಳು. ಅಂತಿಮವಾಗಿ ಆಕೆ ಒಬ್ಬ ಮಕ್ಕಳ ಮನೋವೈಜ್ಞಾನಿಕಳಾಗುವ ಭರವಸೆ ಇಟ್ಟುಕೊಂಡಿದ್ದಾಳೆ.

ಆಸೆಯಿಂದ , ಬೇಕು ಎನಲು ಬಾರದು, ಬೇಡ ಎನಲು ಬಿಡದು, ದೇವರು ಕೊಟ್ಟರೆ ತೆಗೆದುಕೊ, ಕೊಡದಿದ್ದರೆ ಅಳಬೇಡ. ಆಸೆಯೆಂಬ ಪಾಶದಿಂದ ಯಾವಾಗಲೂ ದೂರವಿರು.

-ಕವಿ ವೇಮನ

ಪ್ರಪಂಚದಲ್ಲಿ ಸಂಪತ್ತಿನಿಂದ, ವಿಜ್ಞಾನದಿಂದ ಶಾಂತಿ ಇಲ್ಲ. ನಿಜವಾದ ಶಾಂತಿ ಅನುಭವದಿಂದಲೇ ದೊರೆಯುತ್ತದೆ. ಆದ್ದರಿಂದ ಅನುಭವಕ್ಕಾಗಿ ಹೋರಾಡಿರು.

-ವಿನೋಬಾ

ಮಕ್ಕಳು ಸಾಧಿಸಿದ ಸುಧಾರಣೆ

ಡಾ. ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ.ಸಂಘ, ಬಾಗಲಕೋಟೆ-೫೮೭ ೧೦೧

ಮುಂಬಯಿಯಲ್ಲಿ ಒಂದು ಸಂಸ್ಥೆಇದೆ. ಅದು ೧೯೯೧ರಲ್ಲಿ ತನ್ನ ಕಾರ್ಯ ಪ್ರಾರಂಭಿಸಿತು. ಸಂಸ್ಥೆಯ ಉದ್ದೇಶ ಮಕ್ಕಳನ್ನು ಪ್ರೋತ್ಸಾಹಿಸುವುದು. ಮಕ್ಕಳು ಎಂದರೆ ಒಂಭತ್ತರಿಂದ ಹದಿನೈದು ವಯಸ್ಸಿನವರು ಮಾತ್ರ. ಸಂಸ್ಥೆಯವರು ಸಮಾರಂಭಗಳನ್ನು ಏರ್ಪಡಿಸಿದರು. ಹಲವಾರು ಶಾಲೆಗಳ ಮಕ್ಕಳನ್ನು ಒಂದೇ ಕಡೆಗೆ ಕೂಡಿಸಿದರು. ಮಕ್ಕಳು ಯಾವುದಾದರೂ ಕಾರ್ಯಕ್ರಮ ಯೋಜಿಸಿ ಅದನ್ನು ಆಚರಣೆಯಲ್ಲಿ ತರಬೇಕೆಂದು ಸೂಚಿಸಿದರು. ಶಾಲಾ ಮಕ್ಕಳು ತಮಗೆ ಸರಿ ಎನಿಸಿದ ವಿಚಾರಗಳನ್ನು ಸೂಚಿಸಿದರು. ಅವುಗಳಲ್ಲಿ ಯುಕ್ತವಾದ ಒಂದು ವಿಷಯವನ್ನು ಆರಿಸಿಕೊಂಡು ಆಚರಣೆಯಲ್ಲಿ ತರಲು ಪ್ರಯತ್ನಿಸುತ್ತಿದ್ದರು.

ಒಂದು ಸಲ ಮಕ್ಕಳು ಗುಟ್ಕಾ ತಿನ್ನುವುದರ ವಿರುದ್ಧ ಪ್ರಚಾರ ಮಾಡಬೇಕೆಂದು ನಿಶ್ಚಯಿಸಿದರು. ಅದನ್ನು ಕಾರ್ಯರೂಪದಲ್ಲಿ ತರಲು ೧೯೯೭ರಿಂದ ಪ್ರಾರಂಭಿಸಿದರು. ಮೊದಲ ವರ್ಷ ಚಿತ್ರ ಬರೆಯುವ ಮೂಲಕ ಪ್ರಚಾರ ಪ್ರಾರಂಭಿಸಿದರು. ಮಕ್ಕಳು ತಾವು ನೋಡಿದ ಕೇಳಿದ ವಿಷಯಗಳನ್ನು ಮನನ ಮಾಡಿ ನೂರಾರು ವಿಧದ ಚಿತ್ರಗಳನ್ನು ಬಿಡಿಸಿದರು. ಚಿತ್ರಗಳಿಗೆ ಬಣ್ಣ ತುಂಬಿದರು. ಈ ಚಿತ್ರಗಳನ್ನೆಲ್ಲ ಒಟ್ಟುಗೂಡಿಸಿ ಅವುಗಳ ಪ್ರದರ್ಶನ ಪ್ರಾರಂಭಿಸಿದರು. ಈ ಪ್ರದರ್ಶನಗಳು ಮುಂಬಯಿಯ ಹಲವಾರು ಪ್ರದೇಶಗಳಲ್ಲಿ ನಡೆದವು. ಎಲ್ಲಿ ಜನರು ಗುಂಪುಗೂಡುವರೋ, ಎಲ್ಲಿ ಜನರು ಜಾಸ್ತಿ ಸುಳಿಯುವರೋ ಅಂಥಲ್ಲಿ ಈ ಚಿತ್ರಗಳನ್ನು ಪ್ರದರ್ಶಿಸಿದರು. ಅವುಗಳಲ್ಲಿ ಗುಟ್ಕಾ ತಿನ್ನುವುದರಿಂದ ಏನೇನು ಹಾನಿಯಾಗುತ್ತದೆ ಎಂಬುದನ್ನು ಈ ಚಿತ್ರಗಳು ಹೇಳುತ್ತಿದ್ದುವು. ಮಕ್ಕಳು ಮಾಡಿದ ಈ ಪ್ರಯತ್ನ ಎಲ್ಲರ ಮನ ಸೆಳೆಯಿತು. ಮಕ್ಕಳ ವಿಚಾರಗಳನ್ನು ತಿಳಿದು ಹಿರಿಯರು ದಂಗಾಗಿ ಹೋದರು. ಸಾವಿರಾರು ಜನರು ಈ ಪ್ರದರ್ಶನಗಳನ್ನು ನೋಡಲು ಬಂದರು. ಅನೇಕರಿಗೆ ಗುಟ್ಕಾದಿಂದ ಆದ ಆಗುವ ಕೆಟ್ಟ ಪರಿಣಾಮಗಳ ಬಗ್ಗೆ ತಿಳಿಯಿತು. ಮಕ್ಕಳನ್ನು ಹಾಡಿ ಹರಿಸಿದ ತಾಯಂದಿರು ಸಾವಿರ ಗಟ್ಟಲೆ.

ಹತ್ತು ವರ್ಷ ಹುಡುಗನೊಬ್ಬ ಈ ಪ್ರದರ್ಶನ ನೋಡಿ ಪ್ರಭಾವಿತನಾದ. ಮನೆಗೆ ಹೋಗಿ ತನ್ನ ಅಜ್ಜನನ್ನು ಕರೆದುಕೊಂಡು ಬಂದ. ಅವನಿಗೂ ಎಲ್ಲ ಚಿತ್ರಗಳನು ತೋರಿಸಿದ. ಮುದುಕ ಹಲವಾರು ಪ್ರಶ್ನೆ ಕೇಳಿದ. ಮಕ್ಕಳು ಉತ್ತರಿಸಿದರು. ಅವನಿಗೆ ಎಲ್ಲವೂ ತಿಳಿಯಿತು. ತನ್ನ ಮೊಮ್ಮಗನಿಗೆ ಕೃತಜ್ಞತೆ ತಿಳಿಸಿದ. ತಾನು ಗುಟ್ಕಾ ತಿನ್ನುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ. ಇಂಥ ಘಟನೆಗಳು ಹತ್ತಾರು. ಮಕ್ಕಳು ತಮ್ಮ ಸಾಧನೆಗೆ ಸಂತೋಷ ಪಟ್ಟವು.

ಮರುವರ್ಷ ಮಕ್ಕಳಿಗೆ ಒಂದು ಹೊಸ ವಿಚಾರ ಬಂದಿತು. ಈ ಸಲ ಅವರು ಚಿತ್ರಗಳನ್ನು ಬಿಡಿಸುವ ಬದಲು ಪತಂಗಗಳನ್ನು ಹಾರಿಸಲು ನಿಶ್ಚಯಿಸಿದರು. ಪ್ರತಿ ಒಂದು ಪತಂಗದ ಮೇಲೆ ಒಂದೊಂದು ಒಳ್ಳೆಯ ಸೂಕ್ತಿ ಬರೆದು ಹಚ್ಚಿದರು. ಇದೂ ಒಳ್ಳೆಯ ಫಲವನ್ನು ಕೊಟ್ಟಿತು. ಜನರು ಹಾರಾಡುತ್ತಿರುವ ಪತಂಗಗಳನ್ನು ನೋಡಿ ಖುಷಿಪಟ್ಟರು. ಅವುಗಳ ಮೇಲಿರುವ

ಹೇಳಿಕೆಗಳನ್ನು ಓದಿದರು. ಮಕ್ಕಳನ್ನು ಹರಸಿದರು. ಒಟ್ಟಿನಲ್ಲಿ ಗುಟ್ಕಾದ ಬಗ್ಗೆ ಅದರ ಕೆಡಕುಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಹೆಚ್ಚಿತು.

ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ಮಕ್ಕಳು ಇನ್ನೊಂದು ಸಾಹಸಕ್ಕೆ ಕೈ ಹಾಕಿದರು. ಅದೆಂದರೆ ಗುಂಪು ಗುಂಪಾಗಿ ಗುಟ್ಕಾ ಮಾರುವ ಅಂಗಡಿಗಳ ಮುಂದೆ ಹೋಗಿ ಅಂಗಡಿಗಳ ಮಾಲೀಕರನ್ನು ಪ್ರಾರ್ಥಿಸಿದರು. ನೀವು ಗುಟ್ಕಾ ಪಾಕೀಟು ಮಾರಬಾರದೆಂದು ವಿನಂತಿಸಿದರು. ಅದನ್ನು ಸೇವಿಸಿದರೆ ಏನೇನು ಹಾನಿಗಳಾಗುತ್ತ ವೆಂದು ಹೇಳಿದರು. ಅಂಡಿಗಳ ಮಾಲೀಕರಿಗೆ ಮಕ್ಕಳ ಚಟುವಟಿಕೆ ಗಳು ಮನಸ್ಸಿಗೆ ಬಂದುವು. ಶಾಲೆಯ ಸಮೀಪ ದಲ್ಲಿರುವ ಎಲ್ಲ ಅಂಗಡಿಗಳ ಮಾಲೀಕರು ಗುಟ್ಕಾ ಮಾರುವುದನ್ನು ನಿಲ್ಲಿಸಿರುವರು. ಮಕ್ಕಳ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಗುಟ್ಕಾ ಮಾಲೀಕರ ಹಾಗೂ ಗುಟ್ಕಾ ಮಾರುವವರ ನಡುವಿನ ಸಂಬಂಧ ಬಹಳ ಆಳವಾಗಿದೆ. ಮಕ್ಕಳ ಮಾತುಗಳಿಗೆ ಅವರು ಕರಗುವಂಥವರಲ್ಲ. ಅವರಿಗೆ ರಾಜಕಾರಣಿ ಗಳು ಬೆಂಬಲಇರುತ್ತದೆ. ಅಂತೆಯೇ ಅದರ ವ್ಯಾಪಾರ ಅಷ್ಟು ಜೋರಾಗಿಯೂ ಚೆನ್ನಾಗಿಯೂ ನಡೆದಿದೆ. ಮಕ್ಕಳು ಇದನ್ನೂ ಯೋಚಿಸಿವೆ. ಆದರೆ ತಮ್ಮ ಪ್ರಯತ್ನವನ್ನು ಇಲ್ಲಿಗೆ ನಿಲ್ಲಿಸಲು ತಯಾರಿಲ್ಲ. ಮುಂದಿನ ಹೆಜ್ಜೆ ಎನ್ನುವಂತೆ ಈ ವರ್ಷ ಬೇರೆ ಯೋಜನೆಯನ್ನು ಹಾಕುತ್ತಿರು ವರು. ಈ ಸಲ ಮತ್ತೆ ಮಕ್ಕಳು ಚಿತ್ರ ಬರೆಯುವ ಕಾರ್ಯಕ್ರಮ ಇಟ್ಟುಕೊಂಡಿವೆ. ಚಿತ್ರಗಳು ಸಾರ್ವಜನಿಕರ ಲಕ್ಷ್ಯ ಎಳೆಯಲು ಅಲ್ಲ. ಅವು ರಾಜಕಾರಣಿಗಳ ಲಕ್ಷ್ಯವನ್ನು ಈ ಕಡೆಗೆ ಸೆಳೆ ಯಲು, ರಾಜಕಾರಣಿಗಳ ದುರಾಸೆಯಿಂದ ಸಮಾಜ ಹಾಗೂ ಮಕ್ಕಳು ಹೇಗೆ ಹಾಳಾಗುತ್ತವೆ ಎಂಬುದನ್ನು ತಿಳಿಸುವ ಸಲುವಾಗಿ.

ಕಾಯ್ದು ನೋಡಬೇಕು. ಮಕ್ಕಳು ಸೋಲು ತ್ತವೆಯೋ? ಅಥವಾ ಗೆಲ್ಲುತ್ತವೆಯೋ?



ಮುಸುಕಿದೀ ಕತ್ತಲಲಿ ಕೈ ಹಿಡಿದುನಡೆಸೆನ್ನ

ಸತ್ಯವತಿ
w/o ಡಾ|| ಹರಿಕೃಷ್ಣ
ಸರ್ಜನ್ ಡೆಂಟಿಸ್ಟ್
ಸುರತ್ಕಲ್-೫೭೪೧೫೪

ಅತ್ಯಂತ ದುಃಖ ಹಾಗೂ ಸಮಾಧಾನ ಎರಡೂ ಉಂಟಾದದ್ದು ಡೇವಿಡ್ ಮೆಕ್ ಅಲ್ಲಿಸ್ಟರ್ ಸತ್ತ ದಿನ. ೧೯೯೬ನೇ ಇಸವಿಯ ಸೆಪ್ಟೆಂಬರ್‌ನ ಆ ದಿನ ಹಗಲಲ್ಲಿ ಮಳೆ ಇತ್ತು. ಅಂದು ಸತ್ತ ಆ ಮುದುಕನಿಗೆ ಅಂತ್ಯ ಮೆರವಣಿಗೆಯಾಗಲೀ, ಪುಷ್ಪಾಂಜಲಿಗಳ ಸಮರ್ಪಣೆಯಾಗಲೀ, ಅಶ್ರುತರ್ಪಣ ಗಳಾಗಲೀ ಇರಲಿಲ್ಲ. ಆದರೆ ಆತನಿಗೆ ಅಂತಿಮ ಗೌರವಗಳನ್ನು ಸಲ್ಲಿಸಲು ಯಾರೂ ಬಾರದೆ ಇದ್ದದ್ದಕ್ಕೆ ಹವೆ ಕಾರಣವಾಗಿರಲಿಲ್ಲ. ಮೆಕ್ ಅಲ್ಲಿಸ್ಟರ್ ತನ್ನ ಜೀವಿತ ಕಾಲದಲ್ಲಿ ಬಿತ್ತಿದ್ದ ಕೆಟ್ಟ ಬೀಜಗಳು, ಅವನು ಸಾಯುವ ಕಾಲಕ್ಕೆ ಕಹಿಫಲವನ್ನು ನೀಡಿದ್ದುವು; ಅಷ್ಟೆ! ಆತನೊಬ್ಬ ಕಳ್ಳನಾಗಿದ್ದ, ನಯವಂಚಕನಾಗಿದ್ದ ಅಥವಾ ಅದಕ್ಕಿಂತಲೂ ಕಡೆ. ಕೋಪ-ದ್ವೇಷಗಳೆಂಬ ಇಂಧನದಿಂದ ಪ್ರಚೋದಿತನಾಗಿ ಯಾರಿಂದಲೂ ತಡೆಯಲಾಗದಂಥ ಭೀಕರ ಶಕ್ತಿಯನ್ನು ಹೊಂದಿದ್ದನಾತ. ಆದರೂ ಆತನ ಸಾವಿನಂತೆಯೇ, ಇನ್ನೂ ಕೆಲವು ವಿಷಯಗಳು ನನ್ನನ್ನು ಅತ್ಯಂತ ಪ್ರಭಾವಶಾಲಿಯಾಗಿ ತಟ್ಟಿವೆ ಎಂಬ ಅಂಶ ಇಂದು ನನ್ನ ಅರಿವಿಗೆ ಬಂದಿದೆ.

ಈ ಕಥೆಯ ನಿಜವಾದ ಆರಂಭವೆಂದರೆ, ಅದು ೧೯೭೪ರ ಡಿಸೆಂಬರ್ ತಿಂಗಳ ಒಂದು ಕಡುಬಿಸಿಲಿನ ಮಧ್ಯಾಹ್ನ; ಅಂದರೆ ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ ಮರಗಳಿಂದ ತುಂಬಿದ ಮಿಯಾಮಿಯ ಮನೆಗಳಿರುವ ಊರಾಚೆಯ ಸ್ಥಳದಲ್ಲಿ, ಅಂದರೆ ತನ್ನ ಮನೆಯ ಸಮೀಪದಲ್ಲಿ ಒಬ್ಬ ಹತ್ತು ವರ್ಷದ ಹುಡುಗ ಆಗ ತಾನೇ ಶಾಲೆಯ ಬಸ್ಸಿನಿಂದ ಇಳಿದಿದ್ದ. ಹಗ್ ಎನ್ನುವುದು ಅವನ ಮಧ್ಯದ ನಾಮಧೇಯವಾಗಿದ್ದರೂ, ಸಪೂರ- ಉದ್ದ ಇದ್ದನಾದ ಕಾರಣ, ಕಂಪೆನಿ ವಕೀಲನಾಗಿದ್ದ ತಂದೆಯಿಂದ ಯಾವಾಗಲೂ 'ಲ್ಯಾಂಕಿ' ಎಂದೇ ಕರೆಸಿಕೊಳ್ಳುತ್ತಿದ್ದ ಆತ ಕಂದು ಬಣ್ಣದ ಕೂದಲು, ಭರವಸೆಯ ನೇತ್ರಗಳು ಮತ್ತು ಸದಾ ಮುಗುಳ್ನಗೆಗಳಿಂದ ಕೂಡಿದ್ದ ಬಾಲಕನಾಗಿದ್ದ.

ಇನ್ನು ಐದೇ ದಿನಗಳಲ್ಲಿ ಬರುವ ಕ್ರಿಸ್‌ಮಸ್ ಹಬ್ಬದ ವಿಷಯವನ್ನೇ ಮನಸ್ಸಿನ ತುಂಬಾ ತುಂಬಿಕೊಂಡಿದ್ದ ಹಗ್‌ಗೆ, ತನ್ನ ಬಳಿ ಬಂದು, ನಿಂತು, ಮಾತನಾಡುವವರೆಗೆ ಆ ಮನುಷ್ಯನ ಬಗ್ಗೆ ಗಮನವೇ ಇರಲಿಲ್ಲ.

''ನಾನು ನಿನ್ನ ತಂದೆಯ ಗೆಳೆಯ'' ಎಂದು ಮುಗುಳು ನಗುತ್ತಾ ಆ ಆಗಂತುಕ ನುಡಿದಾಗ ಹಗ್ ಕೂಡಾ ಕಿರುನಗೆ ಬೀರಿದ. ಆ ದಿನಗಳಲ್ಲಿ ಆಗಂತುಕರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅದರಲ್ಲೂ ಒಳ್ಳೆಯ ಪೋಷಾಕು ಧರಿಸಿ, ವಿನಯದಿಂದ ಮಾತನಾಡುತ್ತಾ ಹಗ್‌ನ ಬಳಿ ನಿಂತಿದ್ದ ಆ ಮಧ್ಯವಯಸ್ಸಿನ ವ್ಯಕ್ತಿಯನ್ನು ಸಂಶಯಿಸುವಂತೆಯೇ ಇರಲಿಲ್ಲ.

''ನಿನ್ನ ತಂದೆಗಾಗಿ ಸಂತೋಷಕೂಟವೊಂದನ್ನು ಇಟ್ಟುಕೊಂಡಿದ್ದೇವೆ. ಆದರೆ ನಿನ್ನ ತಂದೆಗಾಗಿ ಕೊಳ್ಳಲಿರುವ ಉಡುಗೊರೆ ಯಾವ ರೀತಿಯದಾದರೆ ಒಳ್ಳೆಯದೆಂದು ಆರಿಸುವ

೨೦೦೦ದ ಆಗಸ್ಟ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಕ್ರಿಸ್ಟೋಫರ್ ಕ್ಯಾರಿಯರ್ ರವರ 'ಫ್ರಮ್ ಡಾರ್ಕ್‌ನೆಸ್ ಟು ಲೈಟ್' ಎಂಬ ಲೇಖನದ ಅನುವಾದ

ವಿಷಯದಲ್ಲಿ ನೀನು ಸಹಾಯ ಮಾಡುವೆಯಾ? ನಾವು ಬೇಗನೆ ಹಿಂದಿರುಗಬಹುದು'' ಎಂದು ಆತ ವಿವರಿಸಿದ.

ತಂದೆಗಾಗಿ ಏನನ್ನಾದರೂ ಮಾಡುವ ಆತುರದಲ್ಲಿ ಹುಡುಗ ಒಪ್ಪಿದ. ಅಲ್ಲೇ ಹತ್ತಿರದಲ್ಲಿ ಇದ್ದ 'ಚಲಿಸುವ ಗೃಹಬಂಡಿ'ಯ ಬಳಿಗೆ ನಡೆದು, ಈರ್ವರೂ ಅದರಲ್ಲಿ ಕುಳಿತರು. ವಮೌನವಾಗಿ ವಾಹನವನ್ನು ಉತ್ತರದಿಕ್ಕಿಗೆ ಚಲಾಯಿಸುತ್ತಾ, ನಗರದಾಚೆಯ ಬಯಲು ಗದ್ದೆಗಳ ಬಳಿಗೆ ಬಂದ ಎಷ್ಟೋ ಹೊತ್ತಿನ ಮೇಲೆ ಆತ ''ಬಹುಶಃ ನಾನು ತಪ್ಪುದಾರಿಯಲ್ಲಿ ಬಂದಿರಬೇಕು'' ಎನ್ನುತ್ತಾ ಹಗ್‌ನ ಕೈಗೆ ಒಂದು ನಕ್ಷೆಯನ್ನಿತ್ತು, ''ನಿನಗೆ ಹೆದ್ದಾರಿ ಎಲ್ಲಿದೆ ಎಂದು ಕಂಡು ಹಿಡಿಯಲು ಆಗುತ್ತದಾ ನೋಡು'' ಎಂದನು. ಹಗ್ ನಕ್ಷೆಯನ್ನು ಗಮನಿಸುತ್ತಿದ್ದಾಗ ಆ ವ್ಯಕ್ತಿ ಎದ್ದು ಗೃಹಬಂಡಿಯ ಒಳಗಿನಿಂದ ಹಿಂದಕ್ಕೆ ನಡೆದ.

ಒಂದು ಗಳಿಗೆಯ ಬಳಿಕ ಜೇನುನೊಣ ಚುಚ್ಚಿದಂತೆ, ತೀಕ್ಷ್ಣವಾದ ನೋವು ಹಗ್‌ನ ಬೆನ್ನಲ್ಲಿ ಉಂಟಾಯ್ತು. ಪುನಃ ಅಂಥದ್ದೇ ಇನ್ನೊಂದು ತೀಕ್ಷ್ಣವಾದ ಚುಚ್ಚುವಿಕೆಯ ಅನುಭವವಾಗಲು, ಬಾಲಕ ಹೊರಳಿ ಹೆದರಿಕೆಯಿಂದ ಹಿಮ್ಮೆಟ್ಟಿದ. ಮಂಜುಗೆಡ್ಡೆಯನ್ನು ತೆಗೆಯಲು ಉಪಯೋಗಿಸುವ ಚಿಮಟ (ಇಕ್ಕಳ)ವನ್ನು ತನ್ನ ಎತ್ತಿದ ಕೈಗಳಲ್ಲಿ ಹಿಡಿದುಕೊಂಡು, ತೀಕ್ಷ್ಣವೂ ಶೀತಲವೂ ಆದ ದೃಷ್ಟಿಯನ್ನು ಬೀರುತ್ತಾ ಆ ವ್ಯಕ್ತಿ ಅಡ್ಡವಾಗಿ ನಿಂತಿದ್ದ.

ಹಗ್ ತನ್ನನ್ನು ತಾನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದಂತೆಯೇ, ಆ ಮನುಷ್ಯ ಹಗ್‌ನನ್ನು ನೆಲಕ್ಕೆ ತಳ್ಳಿದ. ಇಕ್ಕಳ ಪುನಃ ಪುನಃ ತನ್ನನ್ನು ಘಾಸಿಗೊಳಿಸುತ್ತಿರಲು, ಹಗ್ ಹೆದರಿದ್ದರೂ ಆ ಚುಚ್ಚುವಿಕೆ ಅಷ್ಟೊಂದು ಗಾಢವಾಗಿಲ್ಲವೆಂದರಿತ. ನಡುಗುತ್ತಿದ್ದ ಕರಗಳಿಂದ ಆ ಇಕ್ಕಳವನ್ನು ಹಗ್‌ನ ಎದೆಗೆ ಒಂದು ಗಳಿಗೆ ಹಿಡಿದ ಆತ, ಅದನ್ನು ಕೆಳಗೆ ಹಾಕಿಬಿಟ್ಟ. ಮತ್ತೆ ಒಂದಕ್ಷರವನ್ನೂ ಆಡದೆ, ಹೆದರಿದ ಹುಡುಗನನ್ನು ತನ್ನ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಲು ಬಿಟ್ಟು, ಬಂಡಿಯನ್ನು ಮತ್ತೂ ಊರಾಚೆಗೆ ಚಲಾಯಿಸತೊಡಗಿದ.

''ನಿನ್ನ ತಂದೆಯಿಂದಾಗಿ ನಾನು ತುಂಬಾ ಹಣವನ್ನು ಕಳೆದುಕೊಂಡು, ಬಹಳ ಕಷ್ಟ ಪಡಬೇಕಾಯಿತು'', ನಿರ್ಭಾವನಾಗಿ ನುಡಿದ ಆ ಮನುಷ್ಯ. ಅತಿಯಾದ ಹೆದರಿಕೆಯಿಂದಾಗಿ ಮಾತಾಡದೆ ತನ್ನ ಜಾಗದಲ್ಲಿ ಹಿಂದಕ್ಕೆ ಒರಗಿ, ಹಿಡಿಯಾಗಿ ಕುಳಿತ ಹಗ್. ಅವನ ಗಾಯಗಳು ಗಂಭೀರ ರೀತಿಯದಲ್ಲದಿದ್ದರೂ, ಹೆದರಿಕೆಯಿಂದಾಗಿ ಹೆಚ್ಚಿನ ನೋವನ್ನು ಹುಡುಗ ಅನುಭವಿಸಿದ. ನೂರಾರು, ಸಾವಿರಾರು ಮೊಸಳೆಗಳ ನೆಲೆವೀಡಾದ ಎವರ್‌ಗ್ಲೇಡ್ಸ್ ಅನ್ನು ದಾಟಿ, ತಿರುಗಿಸಿ ಕೊಂಡು ಒಂದು ಹೆದ್ದಾರಿಗೆ ಬಂಡಿಯನ್ನೊಯ್ದ ಆ ಅಪರಿಚಿತ.

ಒಂದು ನಿಮಿಷದ ನಂತರ ''ನಿನ್ನನ್ನು ಇಲ್ಲಿಂದ ಕೆಲವು ಕಿಲೋಮೀಟರ್‌ಗಳ ಆಚೆ ಇಳಿಸಿಬಿಡುತ್ತೇನೆ. ನಿನ್ನ ತಂದೆಗೆ, ಇಲ್ಲಿಗೆ ಬಂದು ನಿನ್ನನ್ನು ಕರೆದೊಯ್ಯುವಂತೆ ತಿಳಿಸುತ್ತೇನೆ'' ಎಂದು ನುಡಿದ. ಸ್ವಲ್ಪ ಸಮಯ ನೇರ ಹೋಗಿ, ಮತ್ತೆ ಒಂದು ಮಣ್ಣುರಸ್ತೆಗೆ ತಿರುಗಿ ನಿರ್ಮಾನುಷ ಸ್ಥಳಕ್ಕೆ ಬಂದರು.

ಹಗ್‌ನನ್ನು ಕುರಿತು ''ಇಲ್ಲಿ ಕೆಳಗಿಲಿಯುವ '' ಎಂದನಾತ.

ಗೃಹಬಂಡಿಯಿಂದ ಬಿಡುಗಡೆ ಹೊಂದಿದ ಹಗ್ ಸ್ವಲ್ಪ ದೂರ ನಡೆದು, ಪೊದರುಗಳನ್ನು ದಿಟ್ಟಿಸುತ್ತಾ ಒಂದೆಡೆ ಕುಳಿತ. ಆ ಆಕ್ರಮಣಕಾರಿ, ಸಣ್ಣ ಕ್ಯಾಲಿಬರ್ ಪಿಸ್ತೂಲನ್ನು ಹಿಡಿದು

ತನ್ನೆಡೆಗೆ ಬರುತ್ತಿದ್ದುದನ್ನು ಹುಡುಗ ಗಮನಿಸಲೇ ಇಲ್ಲ. ಅಷ್ಟು ಮಾತ್ರವಲ್ಲ; ಗುಂಡು ತನ್ನ ಎಡಕೆನ್ನೆಯನ್ನು ಸೀಳಿ ಒಳಹೊಕ್ಕರೂ, ಅದರ ಅನುಭವ ಆತನಿಗೆ ಆಗಲೇ ಇಲ್ಲ!

ಹಗ್‌ನ ತಂದೆತಾಯಿಯರಿಗೆ ಆರು ದಿನಗಳ ತನಕ ತಮ್ಮ ಮಗನ ಅಳಿವು - ಉಳಿವಿನ ಬಗ್ಗೆ ಏನೂ ತಿಳಿಯಲಿಲ್ಲ. ದಿನ ಕಳೆದಂತೆ ಆತ ಬದುಕಿರಬಹುದೆಂಬ ಆಸೆಯೇ ಕಮರುತ್ತಾ ಬಂತು. ಈ ಅಪಹರಣವನ್ನು ಯಾರೂ ನೋಡಿರಲಿಲ್ಲವಾಗಿ, ಪೊಲೀಸರಿಗೆ ಏನೂ ಸುಳಿವು ಸಿಗಲಿಲ್ಲ. ಈ ಲೋಕದಿಂದ ಒಮ್ಮಿಂದೊಮ್ಮೆಗೇ ಅವರ ಕಡೆಯ ಪುತ್ರ ಮಾಯವಾದಂತೆ ಆಗಿತ್ತು.

ಕ್ರಿಸ್‌ಮಸ್‌ನ ಮರುದಿನ ಹಗ್‌ನ ತಂದೆ-ತಾಯಿಗಳಿಗೆ ಪೊಲೀಸರಿಂದ ಕರೆ ಬಂದಿತು. ಎವರ್‌ಗ್ಲೇಡ್‌ನ ಪಕ್ಕದ ರಸ್ತೆಯಲ್ಲಿ, ಒಂದು ಬಂಡೆಕಲ್ಲಿನ ಮೇಲೆ ಕುಳಿತ ಹಗ್ ಕಾಣಸಿಕ್ಕಿದ್ದ.

ಹಗ್‌ನ ಅಪಹರಣದ ಕಥೆ ಹಾಗೂ ಅವನ ಉಳಿವು ಮಿಯಾಮಿಯ ಪ್ರಮುಖ ವಿಷಯವಾಯ್ತು. ಒಂದು ವಾರದವರೆಗೆ ಜ್ಞಾನವಿಲ್ಲದೆ ಬಿದ್ದಿದ್ದ ಹುಡುಗನಿಗೆ ಹೇಗೋ ಎಚ್ಚರ ಆಗಿ, ಆತ ತೂರಾಡುತ್ತಾ ರಸ್ತೆಯ ಬಳಿಗೆ ಬಂದಿದ್ದ. ಆತನನ್ನು ಕಂಡ ಯಾರೋ, ತಮ್ಮ ವಾಹನದಲ್ಲಿ ಅವನನ್ನು ಎತ್ತಿ ತಂದಿದ್ದರು. ಹಗ್‌ನ ಎಡಕೆನ್ನೆಯನ್ನು ಹೊಕ್ಕ ಗುಂಡು, ಆತನ ಎಡಗಣ್ಣಿನ ಆಪ್ಟಿಕ್ ನರಕ್ಕೆ ಪೆಟ್ಟು ಮಾಡಿದ್ದರಿಂದ, ಆತನ ಎಡಗಣ್ಣು ಎಂದೆಂದಿಗೂ ನೋಡುವ ಶಕ್ತಿಯನ್ನು ಕಳೆದುಕೊಂಡು ಕುರುಡೇ ಆಗಿತ್ತು. ಆದರೆ ಅತ ಜೀವಂತ ಉಳಿದು ಬಂದದ್ದೊಂದು ದೊಡ್ಡ ಪವಾಡವೇ ಸರಿ ಎಂಬುದು ಎಲ್ಲರ ಅಭಿಮತವಾಗಿತ್ತು.

ಮುಂದಿನ ದಿನಗಳಲ್ಲಿ, ವಾರಗಳಲ್ಲಿ ಪತ್ತೇದಾರರು ಹಗ್‌ನೊಂದಿಗೆ ಸೇರಿ ಆಕ್ರಮಣಕಾರನನ್ನು ಕಂಡು ಹಿಡಿಯುವಲ್ಲಿ ತುಂಬಾ ಪ್ರಯತ್ನಿಸಿದರು. ಹಗ್ ತನ್ನ ತಂದೆಯ ಬಗ್ಗೆ ಆಕ್ರಮಣಕಾರನಿಗಿದ್ದ ಕೋಪವನ್ನು ವಿವರಿಸಿ, ಆತನ ಬಗ್ಗೆ ಎಲ್ಲಾ ತರಹದ ವಿವರಣೆಯನ್ನು, ಆತನ ತೋಳಿನ ಮೇಲಿದ್ದ ಬಣ್ಣಗೆಟ್ಟ ಹಚ್ಚೆಯ ವಿಷಯವನ್ನೂ ಪೊಲೀಸರ ಕಲಾಕಾರನಿಗೆ ವರ್ಣಿಸಿ ಹೇಳಿದನು. ಈ ಕೃತ್ಯವನ್ನು ಎಸಗಿರಬಹುದಾದ ಸಾಧ್ಯತೆಯುಳ್ಳ ಅನುಮಾನಾಸ್ಪದ ವ್ಯಕ್ತಿಗಳ ಪಟ್ಟಿಯನ್ನು ಪೊಲೀಸರು ತಯಾರಿಸಿದರು. ಅದರಲ್ಲಿ ಹಗ್‌ನ ತಂದೆ ತನ್ನ ಮುದಿಪ್ರಾಯದ ದೊಡ್ಡಪ್ಪನಿಗಾಗಿ ನಿಯಮಿಸಿದ್ದ ಗಂಡಾಳೂ ಒಬ್ಬ, ಇತ್ತೀಚೆಗೆ ಕೆಲಸದ ಸಮಯದಲ್ಲಿ ಮದ್ಯವನ್ನು ಸೇವಿಸಿದ್ದಕ್ಕಾಗಿ ಆತನಿಗೆ ಹಗ್‌ನ ತಂದೆ ಚೆನ್ನಾಗಿ ಮಂಗಳಾರತಿ ಮಾಡಿದ್ದನು. ತನ್ನ ಮೇಲೆ ಕೆಂಡಕಾರಿದ ಹಗ್‌ನ ತಂದೆಯ ಮೇಲೆ ಆತ ಈ ರೀತಿ ಸೇಡು ತೀರಿಸಿಕೊಂಡಿರಬೇಕೆಂದು ಪತ್ತೇದಾರರು ಊಹಿಸಿದರು.

ಪೊಲೀಸರು ಅನುಮಾನಿಸುವ ವ್ಯಕ್ತಿಯ ಬಳಿಯೂ ಹಗ್ ವರ್ಣಿಸಿದಂಥಾ ಚಲಿಸುವ ಗೃಹಬಂಡಿ ಇತ್ತು. ಪೊಲೀಸರ ಬಳಿ ಇದ್ದ ಆತನ ಆರೋಪದ ಪಟ್ಟಿಯಲ್ಲಿ ಸಶಸ್ತ್ರ ದರೋಡೆ, ಕಾರು ಕಳವು, ಫೋರ್ಜರಿ ಮತ್ತು ಜೈಲಿನಿಂದ ತಪ್ಪಿಸಿಕೊಂಡ ಆಪಾದನೆಗಳಿದ್ದುವು. ಅವನ ಹೆಸರು ಡೇವಿಡ್ ಮೆಕ್ ಅಲ್ಲಿಸ್ಟರ್.

ನೂರಾರು ಚಿತ್ರಗಳನ್ನು ಹಲವಾರು ವಾರಗಳವರೆಗೆ ಪರಿಶೀಲಿಸಿದರೂ, ಬಹುಶಃ ಅಪಹರಣದ ಆಘಾತದಿಂದ ಚೇತರಿಸಿಕೊಂಡಿರದಿದ್ದ ಹಗ್, ಮೆಕ್ ಅಲ್ಲಿಸ್ಟರ್‌ನನ್ನು ತನ್ನನ್ನು ಅಪಹರಿಸಿದಾತನೆಂದು ಕಂಡು ಹಿಡಿಯುವುದರಲ್ಲಿ ವಿಫಲಗೊಂಡ. ನಿಶ್ಚಯವಾಗಿ ಗುರುತಿಸಲಾಗದ ಕಾರಣದಿಂದ,

ಸರಿಯಾದ ಸಾಕ್ಷ್ಯಾಧಾರಗಳಿಲ್ಲದೆ ಪೊಲೀಸರು ಆತನನ್ನು ಬಂಧಿಸಲಿಲ್ಲ.

ತಿಂಗಳುಗಳು ಕಳೆದು, ವರುಷಗಳುರುಳಿದಂತೆ, ಮೆಕ್ ಅಲ್ಲಿಸ್ಟರ್ ರಸ್ತೆಗಳಲ್ಲಿ ನಿರ್ಭಿಡೆಯಿಂದ ತಿರುಗಾಡತೊಡಗಿದ.

ಈ ಪ್ರಕರಣ ಎಲ್ಲರಿಗಿಂತ ಆಳವಾಗಿ ತಟ್ಟಿದ್ದು ಚಕ್ ಶೀರರ್ ಎನ್ನುವ ಪೊಲೀಸ್ ಅಧಿಕಾರಿಗೆ. ಈ ಪ್ರಕರಣದ ತನಿಖೆಯಲ್ಲಿ ಸಹಕರಿಸಿದ್ದ ಆತನಿಗೆ ಹಗ್‌ನ ಪ್ರಾಯದ ಇಬ್ಬರು ಮಕ್ಕಳಿದ್ದರು. ಈ ರೀತಿಯ ಅಪರಾಧದಿಂದ ಕಂಗಾಲಾಗಿದ್ದ ಆತ, ಬೇರೆಯ ತನಿಖಾಧಿಕಾರಿಗಳಂತೆ ಮೆಕ್ ಅಲ್ಲಿಸ್ಟರ್‌ನೇ ಇದಕ್ಕೆ ಜವಾಬ್ದಾರನೆಂದು ಬಲವಾಗಿ ನಂಬಿದ್ದ.

ಪೊಲೀಸರು ಪ್ರಶ್ನಿಸಲು ಹೋದಾಗ, ಮೆಕ್ ಅಲ್ಲಿಸ್ಟರ್ ಬಾಗಿಲನ್ನು ತೆರೆದು, ವ್ಯಂಗ್ಯ ನಗೆಯನ್ನು ಬೀರುತ್ತಾ, ''ಸರಿ, ಇಷ್ಟು ತಡವೇಕೆ? ಎರಡು ವಾರಗಳಿಂದ ನಾನು ನಿಮ್ಮನ್ನು ಎದುರು ನೋಡುತ್ತಿದ್ದೆ'' ಎಂದಿದ್ದ ಮತ್ತು ಈ ಹಲ್ಲೆಯಲ್ಲಿ ತನ್ನ ಪಾತ್ರವೇನೂ ಇಲ್ಲವೆನ್ನುತ್ತಾ ದೋಷಾರೋಪಣವನ್ನು ನಿರಾಕರಿಸಿದ್ದ.

ಮೆಕ್ ಅಲ್ಲಿಸ್ಟರ್‌ನ ಧಾರ್ಷ್ಟ್ಯದ ಮೊಂಡು ಧೋರಣೆ ಶೀರರ್‌ಗೆ ಕಿರಿಕಿರಿಯನ್ನುಂಟು ಮಾಡಿತು. ಏನಾದರೂ ತಪ್ಪು ಮಾಡಿ ಸಿಕ್ಕಿಬೀಳಬಹುದೆಂಬ ನಂಬಿಕೆಯಿಂದ, ಅಲ್ಲಿಂದ ಮುಂದೆ ಹಲವಾರು ವರುಷಗಳ ಕಾಲ ಶೀರರ್ ಆತನ ಮೇಲೆ ಕಣ್ಣಿಟ್ಟಿದ್ದ. ಆ ಮನುಷ್ಯನ ಬಗ್ಗೆ ತಿಳಿದು ಬಂದ ಅಲ್ಪ ಸ್ವಲ್ಪ ವಿಷಯಗಳಿಂದ, ಆತನೊಬ್ಬ ಅಲ್ಪ, ಇತರರಿಗೆ ತೊಂದರೆ ಕೊಡುವ ಕುಡುಕ ಎಂಬ ಚಿತ್ರಣ ದೊರಕಿತು. ಮೆಕ್ ಅಲ್ಲಿಸ್ಟರ್‌ನಿಗೆ ಗೆಳೆಯರೂ ಇರಲಿಲ್ಲ; ಕುಟುಂಬದೊಂದಿಗೆ ಸಂಬಂಧವೂ ಇರಲಿಲ್ಲ.

ಶೀರರ್‌ಗೆ ಸ್ವಲ್ಪ ಸಮಾಧಾನವನ್ನು ನೀಡಿದ ವಿಷಯವೆಂದರೆ, ಹಗ್‌ನನ್ನು ಅಪಹರಿಸಿದಾತನಿಗೆ ಜೀವಿತವೇ ಏಕಾಕಿತ್ವ ಮತ್ತು ಅಸುಖ ಎಂಬ ಶಿಕ್ಷೆ ನೀಡಿತ್ತೆಂಬುದು. ಆದರೂ ಆತ ಯಾವತ್ತಾದರೂ ಒಂದು ದಿನ ತನ್ನ ಈ ತಪ್ಪಿಗಾಗಿ ಸಿಕ್ಕಿಬೀಳುವಂತೆ ಮಾಡುತ್ತೇನೆಂದು ಶೀರರ್ ನಿಶ್ಚಯಿಸಿಕೊಂಡಿದ್ದ.

ಹಗ್‌ನ ಜೀವನ ಮಾತ್ರ ಅಧೋಮುಖವಾಗಿ ಸಾಗಿತ್ತು. ಅಭದ್ರತಾ ಭಾವದಿಂದ ಆತ ಒಬ್ಬನೇ ಹೊರಹೋಗಲು ಹಿಂಜರಿಯುತ್ತಿದ್ದ. ಈ ಘಟನೆಯ ಬಳಿಕ ಸಾಧಾರಣ ಮೂರು ವರ್ಷಗಳ ಕಾಲ ಪ್ರತಿರಾತ್ರಿಯೂ ಆತ ತನ್ನ ಮಾತಾ-ಪಿತೃಗಳ ಕಾಲಬುಡದಲ್ಲಿ, ನೆಲದಲ್ಲಿ ಮಲಗಿರುತ್ತಾ, ಸಣ್ಣ ಸಣ್ಣ ಶಬ್ದಗಳಿಗೂ ಹೆದರಿಕೊಳ್ಳುತ್ತಿದ್ದ.

ದೊಡ್ಡವನಾಗುತ್ತಾ ಹೋದಂತೆ, ಅರ್ಧ ಮುಚ್ಚಿದಂತಿರುತ್ತಿದ್ದ, ಪೆಟ್ಟಾದ ಕಣ್ಣಿನಿಂದಾಗಿ ಆತ ಮತ್ತಷ್ಟು ಸಂಕೋಚಪಟ್ಟುಕೊಳ್ಳುತ್ತಾ, ಎಲ್ಲರೂ ತನ್ನ ಕಣ್ಣನ್ನೇ ಗಮನಿಸುವರೇನೋ ಎಂಬ ಭಾವನೆಯಿಂದ ನಗುವನ್ನೂ ಮರೆತಂತೆ ಇದ್ದ. ಜನರು ತನ್ನನ್ನು ದಿಟ್ಟಿಸಿ ನೋಡುವರೆಂಬ ಸಂವೇದನೆಯಿಂದಲೇ ಆತ ತಾನಿನ್ನು ಎಲ್ಲರಂತೆ ಜೀವನ ನಡೆಸಲಾರೆನೆಂದು ನಿಶ್ಚಯಿಸಿಕೊಂಡಿದ್ದ. ಬರಬರುತ್ತಾ ತನ್ನ ಅಮಾಯಕತನದ ದುರುಪಯೋಗವಾಗಿದೆ ಎಂಬ ಭಾವನೆಯಿಂದ ಆತನ ಭಯ ಕೋಪವಾಗಿ ಪರಿವರ್ತಿತವಾಯಿತು. ತಂದೆ ತಾಯಿಯರ ಮತ್ತು ಗೆಳೆಯರ ಉತ್ತೇಜನ, ಆಸರೆ ಎಲ್ಲಾ ಇದ್ದರೂ ಕೂಡಾ, ಅಭದ್ರತಾ ಭಾವದಲ್ಲೇ ಆತ ದಿನ ಕಳೆಯುತ್ತಿದ್ದ.

ತನ್ನ ಮನೆಯಿಂದ ಹೊರಗೆ ತನಗೆ ಭದ್ರತೆಯನ್ನೂ, ಸುರಕ್ಷತೆಯನ್ನೂ ನೀಡಬಲ್ಲ 'ಚರ್ಚ್' ಎಂಬ ತಾಣವೊಂದು ತಮ್ಮ ನೆರೆಕರೆಯಲ್ಲಿಯೇ ಇದೆ ಎನ್ನುವ ವಿಷಯ ಆತನ

ಅರಿವಿಗೆ ಬರುವಾಗ ಆತನ ಪ್ರಾಯ ಹದಿಮೂರು. ಆಶಾವಾದ, ಕ್ಷಮಾಗುಣಗಳ ಬಗೆಗಿನ ಅಲ್ಲಿಯ ಸಂದೇಶಗಳು, ಆತನೊಡನೆ ನೇರವಾಗಿ ಮಾತನಾಡಿದಂತೆ ಭಾಸವಾಗಿ, ಅದರಿಂದ ಆತ ಬಹಳವಾಗಿ ಪ್ರಭಾವಿತನಾದ. ತನ್ನ ಭಯ ಮತ್ತು ಕೋಪಗಳನ್ನು ದಮನಗೊಳಿಸುವ ಶಕ್ತಿಯೊಂದನ್ನು ಆತ ಹುಡುಕುತ್ತಿದ್ದ. ಅದನ್ನೀಗ ಆತ ಕಂಡುಕೊಂಡಿದ್ದ.

ಒಂದು ಸಂಜೆ ಚರ್ಚಿನಲ್ಲಿ ಭೆಟ್ಟಿಯಾದ ಗೆಳೆಯರ ಒತ್ತಾಯಕ್ಕೆ ಮಣಿದು, ಆತ ಅವರಿಗೆ ತನ್ನ ಕತೆಯನ್ನು ಬಿತ್ತರಿಸಿದ. ಇದಕ್ಕೆ ಅವರು ಹೇಗೆ ಸ್ಪಂದಿಸುವರೆಂದು ತಿಳಿಯದೆ, ತಡೆತಡೆದು ತನ್ನ ಕತೆಯನ್ನು ಹೇಳಿದ.

ಅವನ ಆಶ್ಚರ್ಯಕ್ಕೆ, ಆತನ ಕತೆ ಮುಗಿಯುತ್ತಿದ್ದಂತೆಯೇ ಅವರೆಲ್ಲರಿಂದ ಬಂದ ಪ್ರತಿಕ್ರಿಯೆ ಅದ್ಭುತವಾಗಿತ್ತು. ಅವರೆಲ್ಲರೂ ಉತ್ತೇಜನ ನೀಡಿ ಹುರಿದುಂಬಿಸುವವರೇ ಆಗಿದ್ದರು. ಪವಾಡ ಸದೃಶವಾಗಿ ಸಾವಿನ ದವಡೆಯಿಂದ ತಪ್ಪಿಸಿ ಕೊಂಡು ಬಂದದ್ದು, ಮೌಲ್ಯಾಧಾರಿತ ವಿಷಯಗಳಿಗೆ ಪ್ರೇರಕಶಕ್ತಿಯಾಗಬಹುದು ; ಕೋಪ-ಭಯಗಳ ಮೂಲಪ್ರವರ್ತಕಗಳಾಗಬೇಕೆಂದೇನೂ ಇಲ್ಲವೆಂಬ ಸತ್ಯದ ಅರಿವು ಪ್ರಥಮ ಬಾರಿಗೆ ಅವನಲ್ಲಿ ಉಂಟಾಗಿ, ಆತನ ಕಣ್ಣುಗಳಲ್ಲಿ ಆನಂದಾಶ್ರುಗಳು ಮೂಡಿದುವು.

ಆತನ ನಂಬಿಕೆ-ಆತ್ಮವಿಶ್ವಾಸಗಳು ದೃಢವಾಗುತ್ತಾ ಬಂದಂತೆ ಭಯವು ಮಾಯವಾಗಿ, ಆತ ಪುನಃ ಹಸನ್ಮುಖಿಯಾದನು. ಜೀವನದಲ್ಲಿ ತನ್ನ ನಂಬಿಕೆಗಳನ್ನು ಹಂಚಿಕೊಳ್ಳಬೇಕಾದ್ದು ಅತಿಮುಖ್ಯವೆಂದು ಇತ್ತೀಚೆಗೆ ಆತನಿಗೆ ತೋರತೊಡಗಿತು.

ತತ್ತ್ವವಿದ್ಯೆಯಲ್ಲಿ ಮಾಸ್ಟರ್ ಡಿಗ್ರಿ ಪಡೆದ ನಂತರ ೧೯೯೧ನೇ ಇಸವಿಯಲ್ಲಿ, ಲೆಸ್ಲಿ ರಿಚಿ ಎಂಬ ಹೆಸರಿನ ಆಕರ್ಷಕ ಯುವತಿಯನ್ನು ಹಗ್ ಭೇಟಿಯಾದ. ಈತನ ಇಷ್ಟ ಮತ್ತು ನಂಬಿಕೆಗಳಲ್ಲಿ ಪಾಲುದಾರಳಾಗಿ, ಯುವಜನರೊಂದಿಗೆ ದುಡಿಯಲು ತಯಾರಿದ್ದ ಆಕೆಯನ್ನು ಒಂದು ವರ್ಷದ ಬಳಿಕ ಮದುವೆಯಾದ. ೧೯೯೨ರಲ್ಲಿ ಲೆಸ್ಲಿ, ತನ್ನ ಮೂವರು ಮಕ್ಕಳಲ್ಲಿ ಮೊದಲನೆಯ ಮಗುವಾದ ಅಮ್ಯಾಂಡಾಗೆ ಜನ್ಮವಿತ್ತಳು.

ತನ್ನ ಪುಟ್ಟ ಕಂದನನ್ನು ಕೈಯಲ್ಲಿಹಿಡಿದಿದ್ದ ಹಗ್, ''ನನ್ನನ್ನು ಈ ಎವರ್‌ಗ್ಲೇಡ್ಸ್‌ನಲ್ಲಿ ದೇವರು ಜೀವಂತವಿಡುವುದರಲ್ಲಿ ಏನೋ ಕಾರಣವಿರಬೇಕು ಎಂದು ಎಣಿಸಿದ್ದೆ. ಅದೇನೆಂದು ಈಗ ತಿಳಿಯಿತು'' ಎಂದು ಉದ್ಗರಿಸಿದ.

೧೯೯೫ರಲ್ಲಿ ಹಗ್ ಸ್ಥಳೀಯ ಚರ್ಚ್‌ನಲ್ಲಿ ಯುವಜನರೊಂದಿಗೆ ನಡೆಸುವ ಕೆಲಸವನ್ನು ವಹಿಸಿಕೊಂಡ. ಅವನ ವಿದ್ಯಾರ್ಥಿಗಳು ಆಗಾಗ್ಗೆ ಆತನ ಕಣ್ಣಿನ ಬಗ್ಗೆ ವಿಚಾರಿಸುತ್ತಿದ್ದರು. ಆಗ ಈತ ಹೇಳುತ್ತಿದ್ದ ಕತೆ ಅವರೀರ್ವರ ನಡುವಿನ ತಡೆಗೋಡೆಯನ್ನು ಸರಿಸುವಲ್ಲಿ ಸಹಕರಿಸುತ್ತಿತ್ತು. ಇವನ ವಿಷಯವನ್ನು ಅರಿತಾಗ ಆ ತರುಣರು ತಮ್ಮ ತೊಂದರೆಗಳನ್ನು ಸಂಕೋಚವಿಲ್ಲದೆ ಆತನ ಮುಂದೆ ತೆರೆದಿಡುತ್ತಿದ್ದರು.

೧೯೯೭ರಲ್ಲಿ ಮೂವತ್ತೆರಡು ವರ್ಷದವನಾಗಿದ್ದ ಹಗ್ ತನ್ನ ಬಾಳಿನಲ್ಲಿ ಸಂಪೂರ್ಣ ತೃಪ್ತಿಯನ್ನು ಪಡೆದಿದ್ದ. ತನ್ನ ಹಳೆಯ ಭಯದ ಹಿಡಿತದಲ್ಲಿ ನರಳಿದ ಕತೆಯೊಂದಿಗೆ ಒಂದು ಪ್ರಶ್ನೆ ಆತನನ್ನು ಯಾವಾಗಲೂ ಕಾಡುತ್ತಿತ್ತು : 'ತನ್ನನ್ನು ಕೊಲ್ಲಲು ಪ್ರಯತ್ನಿಸಿದ ವ್ಯಕ್ತಿ ಮುಖಾಮುಖಿಯಾದರೆ, ತಾನಾಗ ಏನು ಮಾಡುತ್ತೇನೆ ?' ತನ್ನ ಕತೆಯನ್ನು ಹೇಳುವಾಗಲೆಲ್ಲಾ ಈ ಪ್ರಶ್ನೆ ಮೇಲೇಳಲು , ''ಆತನನ್ನು ಕ್ಷಮಿಸುವ ಶಕ್ತಿ ನನಗಿದೆ ಎಂದು ಆಶಿಸುತ್ತೇನೆ. ಇಲ್ಲದಿದ್ದರೆ ರೋಷ, ಸೇಡುಗಳ ಪ್ರಪಂಚದಲ್ಲೇ ಬದುಕುವ ಅವನಂತೆಯೇ ನಾನೂ

ಆಗಿಬಿಡುತ್ತೇನಲ್ಲಾ'' ಎಂಬುದೇ ಆತನ ಉತ್ತರವಾಗಿತ್ತು. ಆದರೆ ಹೃದಯಾಂತರಾಳ ದಿಂದ ಏನುತ್ತರ ಬರಬಹುದೆಂಬುದು ಆತನಿಗೇ ಸರಿಯಾಗಿ ತಿಳಿದಿರಲಿಲ್ಲ.

೧೯೯೬ರ ಶುರುವಿನಲ್ಲಿ ಪೊಲೀಸ್ ಅಧಿಕಾರಿ ಚಕ್ ಶೀರರ್‌ನಿಂದ ಬಂದ ಫೋನ್ ಕರೆಯಿಂದ ಹಗ್ ಸೋಜಿಗಗೊಂಡನು.

ಹಗ್‌ನ ಅಪಹರಣ ಪ್ರಕರಣದಲ್ಲಿ ಶೀರರ್ ಆಸಕ್ತಿಯನ್ನು ತಿಳಿದಿದ್ದ ಆತನ ಸಹೋದ್ಯೋಗಿಯೊಬ್ಬ, ಇತ್ತೀಚೆಗೆ ಉತ್ತರ ಮಿಯಾಮಿಯ ನರ್ಸಿಂಗ್ ಹೋಂ ಒಂದಕ್ಕೆ ಹೋಗಿದ್ದವನು, ಡೇವಿಡ್ ಮೆಕ್ ಅಲ್ಲಿಸ್ಟರ್ ಅಲ್ಲಿಯ ರೋಗಿಗಳ ಪೈಕಿ ಒಬ್ಬನಾಗಿದ್ದನ್ನು ಕಂಡಿದ್ದ. ವಿಷಯ ತಿಳಿದ ಶೀರರ್ ಕೂಡಲೇ ಆ ನರ್ಸಿಂಗ್ ಹೋಂಗೆ ಪಯಣಿಸಿ ಮೆಕ್ ಅಲ್ಲಿಸ್ಟರ್‌ನೊಂದಿಗೆ ಮಾತನಾಡಿದ. 'ಮೊದಲು ಇಲ್ಲವೆಂದು ಜಗಳವಾಡಿದರೂ, ಕಡೆಗೆ ನಿನ್ನನ್ನು ಆ ದಿನ ಅಪಹರಿಸಿದವನು ತಾನೇ ಎಂದು ಮೆಕ್ ಅಲ್ಲಿಸ್ಟರ್ ಒಪ್ಪಿಕೊಂಡ' ಎಂದು ಶೀರರ್ ಹಗ್‌ಗೆ ತಿಳಿಸಿದ.

ಹಗ್ ಮೌನವಾಗಿದ್ದ. ''ನಿನ್ನನ್ನು ಕೊಲ್ಲಲು ಯತ್ನಿಸಿದವನನ್ನು ಸಂಧಿಸಲು ಬಯಸುವೆಯಾ?'' ಎಂದು ಶೀರರ್ ಪ್ರಶ್ನಿಸಿದ.

ವಿಷಯಗಳ ತಾಕಲಾಟ ಮತ್ತು ಭಾವೋದ್ವೇಗಗಳಿಂದ ಹಗ್‌ನ ಮನಸ್ಸು ಕದಡಿ ಹೋಯಿತು. ಆದರೂ ''ಹೌದು... ನಾನು ಆತನನ್ನು ನೋಡಬೇಕು'' ಎಂದು ತಾನು ಉತ್ತರಿಸಿದ್ದನ್ನು ತನ್ನ ಕಿವಿಯಾರೆ ಕೇಳಿಸಿಕೊಂಡ.

ಮರುದಿನ ಹಗ್ ಆ ನರ್ಸಿಂಗ್ ಹೋಂಗೆ ಬಂದ. ಮೆಕ್ ಅಲ್ಲಿಸ್ಟರ್‌ನ ಕೋಣೆಯ ಕಡೆಗೆ ಹೋಗುವ ಆ ಉದ್ದದ ಪಡಸಾಲೆಯಲ್ಲಿ ನಡೆಯುವಾಗ, ಆತನ ಹೊಟ್ಟೆಯೆಲ್ಲಾ ಬಿಗಿದಂಥಾ ಅನುಭವ!

ಈ ರೀತಿಯ ಒಂದು ಅಶಕ್ತತೆ ಎಂದೂ ಅವನಲ್ಲಿ ಉಂಟಾಗಿರಲಿಲ್ಲ. 'ತನಗೆ ಗುಂಡಿಕ್ಕಿ ಸಾಯಲು ಬಿಟ್ಟು ಹೋದಂಥ ಆ ವ್ಯಕ್ತಿಯೊಂದಿಗೆ ತಾನು ಕೈಕುಲಕಬಲ್ಲೆನೆ ? ಇಷ್ಟೂ ಮಾಡಲಾಗದಿದ್ದರೆ, ತಾನು ತನ್ನ ವಿದ್ಯಾರ್ಥಿಗಳಿಗೆ ಕ್ಷಮೆಯ ಬಗ್ಗೆ ಹೇಳಿಕೊಟ್ಟ ಪಾಠವೆಲ್ಲಾ ಸುಳ್ಳಾದಂತಾಗಲಿಲ್ಲವೆ ?''

ಕೋಣೆಯನ್ನು ಸಮೀಪಿಸುತ್ತಿದ್ದಂತೆ , ಮೆಕ್ ಅಲ್ಲಿಸ್ಟರ್‌ನನ್ನು ಕಂಡಕೂಡಲೇ ಎಲ್ಲಿ ಭಾವೋದ್ವೇಗಗಳ ಕಟ್ಟೆ ಒಡೆದು ಬಿಡುತ್ತದೋ ಎಂದು ಹಗ್ ಹೆದರಿದ. ಬಾಗಿಲಿನ ಹೊರಗೆ ನಿಂತು ಒಂದು ದೀರ್ಘವಾದ ಉಸಿರನ್ನು ತೆಗೆದುಕೊಂಡ. ಇದರಿಂದ ಕೋಣೆಯೊಳಗೆ ಹೋಗಲು ಶಕ್ತಿಧೈರ್ಯಗಳು ತುಂಬಿ ಬಂದಂತಾಯ್ತು.

ತಾನು ಕಂಡ ದೃಶ್ಯಕ್ಕೆ, ಆತ ಅಣಿಯಾಗಿ ಬಂದಿರಲಿಲ್ಲ. ಹಾಸಿಗೆಯಲ್ಲಿ ಮಲಗಿದವನು ತನ್ನ ದುಃಸ್ವಪ್ನಗಳ ದೈತ್ಯನಾಗಿರದೆ, ಕಮರಿ ಹೋದ ಎಪ್ಪತ್ತೇಳು ವರ್ಷದ, ಕೇವಲ ಮೂವತ್ತು ಕಿಲೋ ತೂಕದ ಮುದುಕನಾಗಿದ್ದ. ಮುಖದ ಚರ್ಮ ಮೂಳೆಗೆ ಅಂಟಿಹೋಗಿತ್ತು. ಗ್ಲಾಕೋಮದಿಂದ ಕುರುಡನಾಗಿ, ಕಾಣದ ಸೂರಿನೆಡೆ ಶೂನ್ಯದೃಷ್ಟಿ ಬೀರುತ್ತಾ ಮಲಗಿದ್ದ.

ಹಗ್ ತನ್ನನ್ನು ತಾನು ಪರಿಚಯಿಸಿಕೊಂಡ. ಶೀರರ್ ಹತ್ತಿರ ಮೆಕ್ ಒಪ್ಪಿಕೊಂಡ ವಿಷಯವನ್ನು ನೆನಪಿಸುತ್ತಿದ್ದಂತೆಯೇ, ಆತನ ಅದೇ ಹಳೆಯ ಮೊಂಡುತನ ಮಿಂಚಿ ಮಾಯವಾಯ್ತು. ''ನೀನು ಯಾವ ವಿಷಯ ಹೇಳುತ್ತೀಯೋ ನನಗೆ ಗೊತ್ತಿಲ್ಲ'' ಎಂದು ಹಟ ಹಿಡಿದ ಮುದುಕ.

ಕೆಲವು ನಿಮಿಷಗಳಲ್ಲೇ ಆ ಮುದುಕನ ಒಳಗೇನೋ ಒಂದು ಸಂವೇದನೆ ಕಂಡು ಬಂದಿತು. ಒಂದಷ್ಟು ಹೊತ್ತು ಮೌನದಿಂದಿದ್ದ ಆತನ ಮುಖ ಮೃದುವಾಗತೊಡಗಿತು. ಅವನು ನಡುಗುತ್ತಾ ಅಳತೊಡಗಿದ. ಆತ ತನ್ನ

ಶಕ್ತಿಹೀನ ಕೈಯನ್ನು ಹಗ್‌ನೆಡೆಗೆ ಚಾಚಿದಾಗ, ಅದನ್ನು ಹಗ್ ತನ್ನ ಕೈಗಳಲ್ಲಿ ತೆಗೆದುಕೊಂಡ. ''ತಪ್ಪಾಯ್ತು, ತುಂಬಾ ತಪ್ಪು ಮಾಡಿಬಿಟ್ಟೆ'' ಎಂದು ಕಡೆಗೆ ಮೆಕ್ ಅಲ್ಲಿಸ್ಟರ್ ಪಶ್ಚಾತ್ತಾಪ ಪಟ್ಟ.

ಕರುಣೆ ಮತ್ತು ಅನುಕಂಪಗಳಿಂದ ಹಗ್ ಆತನನ್ನು ದಿಟ್ಟಿಸಿದ. ''ನೀನೇನು ಮಾಡಿದೆಯೋ ಅದರಿಂದ ನನ್ನ ಅಂತ್ಯವಾಗಲಿಲ್ಲ. ಬದಲಿಗೆ ಅದೇ ನನ್ನ ಬಾಳಿನ ನವೋದಯವಾಗಿತ್ತು. ಇದೊಂದು ವರವಾಗಿ ಪರಿಣಮಿಸಿತೆಂದು ತಿಳಿ'' ಎಂದು ನುಡಿದ ಹಗ್‌ನ ಕೈಗಳನ್ನು ಒತ್ತುತ್ತಾ ''ನನಗೆ ತುಂಬಾ ಸಂತೋಷವಾಯ್ತು'' ಎಂದು ಪಿಸುಗುಟ್ಟಿದ ಮೆಕ್ ಅಲ್ಲಿಸ್ಟರ್.

ಮುಂದಿನ ಮೂರು ವಾರಗಳಲ್ಲಿ ಹಗ್ ಪ್ರತಿದಿನವೂ ಮೆಕ್ ಅಲ್ಲಿಸ್ಟರ್‌ನನ್ನು ಭೇಟಿಯಾಗುತ್ತಿದ್ದ. ಹಗ್‌ನ ಸ್ವರ ಕೇಳುತ್ತಿದ್ದಂತೆಯೇ ಆ ಮುದುಕನ ಮೊಗದಲ್ಲಿ ಬೆಳಕು ಮೂಡುತ್ತಿತ್ತು. ಮಾತಾಡಲಾರದಷ್ಟು ನಿಶ್ಶಕ್ತನಾಗಿದ್ದರೂ, ಮೆಕ್ ಅಲ್ಲಿಸ್ಟರ್ ತನ್ನ ಗತ ಜೀವನದ ತುಣುಕುಗಳನ್ನು ಹಗ್‌ಗೆ ತಿಳಿಸಿದ. ಸಣ್ಣ ಪ್ರಾಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ ಆತ, ಹೆಚ್ಚಿನ ಬಾಲ್ಯಾವಸ್ಥೆಯನ್ನು ಶಿಶುಧಾಮಗಳಲ್ಲೇ ಕಳೆದಿದ್ದ. ಹದಿಮೂರು-ಹದಿನಾಲ್ಕರ ಹರೆಯದಲ್ಲಿಯೇ ಮದ್ಯದ ದಾಸನಾಗಿಬಿಟ್ಟಿದ್ದ. ಕುಟುಂಬದವರಿಂದ ತಿರಸ್ಕೃತನಾಗಿದ್ದ ಆತನಿಗೆ ಗೆಳೆಯರೂ ಇರಲಿಲ್ಲ. ತನ್ನ ಕೋಪಾಟೋಪಗಳಿಂದ ನಾಚಿಕೆಗೇಡಿನ ಜೀವನ ನಡೆಸಿದ್ದ ಆತ ಅದಕ್ಕಾಗಿ ಈಗ ಪಶ್ಚಾತ್ತಾಪ ಪಡುತ್ತಿದ್ದ.

ದೇವರಲ್ಲಿ ನಂಬಿಕೆ ಇರುವವರು ಮೂರ್ಖರೆಂದು ಭಾವಿಸಿದ್ದ ಆತ, ಹಗ್‌ನ ಸಹವಾಸದಿಂದ ದೇವರನ್ನು ಪ್ರಾರ್ಥಿಸ ತೊಡಗಿದ.

ಒಂದು ಶರತ್ಕಾಲದ ಮಧ್ಯಾಹ್ನ, ನರ್ಸಿಂಗ್ ಹೋಂನಲ್ಲಿ ಮಾತನಾಡುತ್ತಾ ಕುಳಿತಿದ್ದ ಹಗ್, ಮೆಕ್ ಅಲ್ಲಿಸ್ಟರ್‌ನಲ್ಲಿ ಮೊಳಕೆಯೊಡೆಯುತ್ತಿರುವ ನಂಬಿಕೆಗಳು ಖಂಡಿತಾ ಹೆಮ್ಮರವಾಗಿ ಬೆಳೆಯುತ್ತದೆಂಬ ವಿಷಯದಲ್ಲಿ ತನಗೆ ಒಳ್ಳೆಯ ಭರವಸೆ ವಿಶ್ವಾಸಗಳಿದೆಯೆಂದು ಸಾರುತ್ತಾ, ''ನಾನು ಸ್ವರ್ಗಕ್ಕೆ ಹೋಗುವ ಬಗ್ಗೆ ಆಲೋಚಿಸುತ್ತಿದ್ದೇನೆ. ನೀನೂ ಅಲ್ಲಿಗೆ ಬರಬೇಕು. ಅಲ್ಲಿ ಈ ನಮ್ಮ ಸ್ನೇಹ ಹೀಗೆಯೇ ಮುಂದುವರಿಯಬೇಕು'' ಎಂದು ನುಡಿದನು. ಅದೇ ದಿನ ರಾತ್ರಿ ನಿದ್ರೆಯಲ್ಲಿಯೇ ಮೆಕ್ ಅಲ್ಲಿಸ್ಟರ್ ಕೊನೆಯುಸಿರನ್ನೆಳೆದಿದ್ದ.

ಇಂದಿಗೂ ಬಹಳ ಹಿಂದೆ ಡೇವಿಡ್ ಮೆಕ್ ಅಲ್ಲಿಸ್ಟರ್ ನೆರಳಿನಿಂದ ಹೊರಬಂದ ಆ ಮಧ್ಯಾಹ್ನದ ಬಗ್ಗೆ ಚಿಂತಿಸುತ್ತೇವೆ. ಆತನ ಸಾವಿನಿಂದ ನನಗೆ ಎರಡು ರೀತಿಯ ಸಮಾಧಾನವಾಗಿದೆ. ಒಂದು ಆತ ಕಡೆಗೂ ಸುತ್ತಹೋದ ಎಂಬುದು. ಇನ್ನೊಂದು ಆ ಕ್ರೂರ ದೈತ್ಯ ಸತ್ತೇಹೋದ್ದರಿಂದ ಇನ್ನು ಎಂದೆಂದಿಗೂ ಆತ ಹಿಂದಿರುಗಲಾರ ಎಂಬ ಧೈರ್ಯ - ಭರವಸೆ.

ಆದರೆ ಮೆಕ್ ಅಲ್ಲಿಸ್ಟರ್‌ನ ಕಡೇ ದಿನಗಳಲ್ಲಿ, ಆತನಿಗಿಂತ ಭಿನ್ನವಾದ ಬೇರೊಬ್ಬ ಮನುಷ್ಯ ಆ ನೆರಳಿನಿಂದ ಹೊರ ಬಂದಿದ್ದ. ಆತ ನಾವ್ಯಾರಾದರೂ ಎಣಿಸುವುದಕ್ಕಿಂತಲೂ ಹೆಚ್ಚಿನ ನೋವನ್ನು ಅನುಭವಿಸಿದ್ದ. ಬಹುಶಃ ಒಂದು ರೀತಿಯಲ್ಲಿ ತಾನು ಮಾಡಿದ್ದಕ್ಕೆ ತಕ್ಕುದಾದುದನ್ನೇ ಆತ ಅನುಭವಿಸಿದ್ದ.

ವಿಚಿತ್ರವೆಂದರೆ, ತನಗೆ ತಿಳಿಯದಂತೆಯೇ ಆತ ನನಗೆ ಎಷ್ಟೋ ಮಾಡಿದ್ದ. ಆತನ ಕತ್ತಲಿನಲ್ಲಿ ನನಗೆ 'ಈಗಲೂ' ದಾರಿತೋರುವ ಬೆಳಕೊಂದನ್ನು ನಾನು ಕಂಡುಕೊಂಡಿದ್ದೆ. ಆತನನ್ನು ಕ್ಷಮಿಸುವುದರೊಂದಿಗೆ ನನ್ನೊಂದಿಗೆ ಸದಾ ಇರುವಂಥ ವಿಶೇಷ ಶಕ್ತಿಯೊಂದನ್ನು ಪಡೆದಿದ್ದೆ.

ನೋಡಿ, 'ಹಗ್' ಎನ್ನುವುದು ನನ್ನ ಮಧ್ಯದ ಹೆಸರು ಆ ಹುಡುಗ ನಾನೇ!

ರಾಜಕುಮಾರಿಯ ಹುಟ್ಟುಹಬ್ಬ

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೦, ಚಾಮುಂಡಿಪುರಂ
ಮೈಸೂರು-೫೭೦ ೦೦೪

ಅಂದು ರಾಜಕುಮಾರಿಯ ಹನ್ನೆರೆಡನೆಯ ವರ್ಷದ ಹುಟ್ಟುಹಬ್ಬ, ಅವಳು ರಾಜಕುಮಾರಿಯಾದರೂ ಪಾಪ ಬಡಮಕ್ಕಳಂತೆ ಅವಳ ಹುಟ್ಟುಹಬ್ಬವೂ ವರ್ಷಕ್ಕೆ ಒಂದೇ ಬಾರಿ.

ರಾಜಕುಮಾರಿ ಅರಮನೆಯ ಬಿಸಿಲು ಮಚ್ಚಿನ ಮೇಲೆ ತನ್ನ ವಯಸ್ಸಿನ ಹುಡುಗ ಹುಡುಗಿಯರೊಡನೆ ಕಣ್ಣಾಮುಚ್ಚಾಲೆ ಆಡುತ್ತಿದ್ದಳು. ಬೇರೆ ದಿನಗಳಲ್ಲಿ ಅವಳು ಅವಳ ಅಂತಸ್ತಿಗೆ ತಕ್ಕವರೊಡನೆ ಮಾತ್ರ ಆಡಬೇಕಾಗಿತ್ತು. ಆದರೆ ಹುಟ್ಟುಹಬ್ಬದ ದಿನ ರಾಜ ಅವಳಿಗೆ ಎಲ್ಲಾ ವರ್ಗದ ಸ್ನೇಹಿತರೊಡನೆ ಆಡಲು ಅನುಮತಿ ಕೊಟ್ಟಿದ್ದ.

ಅರಮನೆಯ ಮುಂದಿದ್ದ ಉದ್ಯಾನವನದಲ್ಲಿ ಸೂರ್ಯಕಾಂತಿ, ಗುಲಾಬಿ, ಸೇವಂತಿಗೆ ಮುಂತಾದ ಹೂವುಗಳು ಸೂರ್ಯನ ಬೆಳಕಿನಲ್ಲಿ ಕಂಗೊಳಿಸುತ್ತಿದ್ದವು. ವರ್ಣರಂಜಿತ ರೆಕ್ಕೆಗಳ ಮೇಲೆ ಸುವರ್ಣದ ಧೂಳು ಹೊತ್ತ ಬಣ್ಣದ ಚಿಟ್ಟೆಗಳು ಹೂವಿಂದ ಹೂವಿಗೆ ಹಾರಾಡುತ್ತಿದ್ದವು. ದಾಳಿಂಬೆ ಬಿಸಿಲಿಗೆ ಬಿರುಕು ಬಿಟ್ಟು ತಮ್ಮ ಕೆಂಪು ಹೃದಯವನ್ನು ಹೊರಕ್ಕೆ ತೋರಿಸುತ್ತಿದ್ದು ನೋಡಲು ಮನೋಹರವಾಗಿತ್ತು. ಬೀಸುತ್ತಿದ್ದ ಗಾಳಿಯಲ್ಲಿ ಹೂವು ಹಣ್ಣುಗಳ ಸುಗಂಧ ತುಂಬಿತ್ತು.

ಅಲ್ಲಿ ಬಂದ ಮಕ್ಕಳೆಲ್ಲರೂ ಬಣ್ಣ ಬಣ್ಣದ ಉಡುಗೆಯಲ್ಲಿ ಅಂದವಾಗಿ ಕಾಣುತ್ತಿದ್ದರು. ಆದರೆ ರಾಜಕುಮಾರಿಯ ಬಟ್ಟೆಬರೆಯಲ್ಲಿ ವಿಶೇಷವಾದ ಅಭಿರುಚಿ ನೋಡಬಹುದಾಗಿತ್ತು-ಸ್ಯಾಟಿನ್‌ನ ನಿಲುವಂಗಿ, ಜರಿಯಲ್ಲಿ ತೋಳುಗಳಿಗೆ ಕಸೂತಿ ಮಾಡಿರುವ ಜಂಪರ್, ಪಿಂಕ್ ಸ್ಕರ್ಟ್, ಕಾಲಿಗೆ ಪಿಂಕ್ ಬಣ್ಣದ ಪಾದರಕ್ಷೆಗಳು ಮತ್ತು ಹೊಂಬಣ್ಣದ ಕೂದಲಲ್ಲಿ ಶ್ವೇತ ಗುಲಾಬಿ. ತನ್ನ ಕೊಠಡಿಯ ಕಿಟಕಿಯ ಮೂಲಕ ರಾಜ ಹೊರಗೆ ನೋಡುತ್ತಿದ್ದ . ಅವನ ಪಕ್ಕದಲ್ಲಿ ಅವನ ತಮ್ಮ ಡಾನ್ ಪೆಡ್ರೋ ಕುಳಿತಿದ್ದ. ಅವನೊಬ್ಬ ಧೂರ್ತ. ರಾಜಕುಮಾರಿ ನೆರೆದಿದ್ದ ಆಸ್ಥಾನಿಕರಿಗೆ ನಮಸ್ಕರಿಸುವುದನ್ನು, ನಗುವುದನ್ನು ನೋಡುತ್ತಿದ್ದ ರಾಜನ ಮುಖದಲ್ಲಿ ದುಃಖ ಕಾಣಿಸುತ್ತಿತ್ತು. ನೋಡಲು ಮಗಳಂತೆಯೇ ಇದ್ದ ರಾಣಿ ಕೆಲವು ವರ್ಷಗಳ ಹಿಂದೆ ಸತ್ತು ಹೋಗಿದ್ದಳು. ಅವಳನ್ನು ಕಂಡರೆ ರಾಜನಿಗೆ ತುಂಬ ಪ್ರೀತಿ ಇತ್ತು. ಸತ್ತಮೇಲೆ ಅವಳನ್ನು ಹೂಳುವುದರ ಬದಲು ವಿಜ್ಞಾನಿಗಳ ಸಹಾಯದಿಂದ ರಾಸಾಯನಿಕ ವಸ್ತುಗಳನ್ನು ಅವಳ ದೇಹಕ್ಕೆ ತುಂಬಿಸಿ ಶವ ಕೆಡದಂತೆ ರಾಜ ಅರಮನೆಯ ಪಕ್ಕದಲ್ಲಿದ್ದ ಚಾಪೆಲ್‌ನಲ್ಲಿಡಿಸಿದ್ದ. ತಿಂಗಳಿಗೊಂದು ಸಲ ಕರಿ ಬಟ್ಟೆ ಉಟ್ಟು ಅಲ್ಲಿಗೆ ಹೋಗಿ ಶವದ ಪಕ್ಕದಲ್ಲಿ ಕುಳಿತು ಶವದ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, 'ರಾಣಿ, ನನ್ನ ಮುದ್ದಿನ ರಾಣಿ' ಎಂದು ಕೂಗುತ್ತಾ ಅವಳನ್ನು ಎಬ್ಬಿಸಲು ಪ್ರಯತ್ನಿಸುತ್ತಿದ್ದ. ಇನ್ನೊಬ್ಬಳನ್ನು ಮದುವೆಯಾಗೆಂದು ಹಲವರು ಅವನನ್ನು ಬಲವಂತ ಮಾಡಿದರು . ಆದರೆ ರಾಜನಿಗೆ ಪುನಃ ಮದುವೆಯಾಗುವುದು ಇಷ್ಟವಿಲ್ಲ.

ಅವನ ವೈವಾಹಿಕ ಜೀವನ , ಅದು ತಂದ

ಮೂಲ: ಆಸ್ಕರ್ ವೈಲ್ಡ್ ಅವರ 'ದಿ ಬರ್ತ್‌ಡೇ ಆಫ್ ದಿ ಇನ್‌ಫ್ಯಾಂಟಾ' ಎಂಬ ಕಥೆಯ ಕನ್ನಡಾನುವಾದ

ಸುಖ ಸಂತೃಪ್ತಿ ಮತ್ತು ದುಃಖದ ಅಂತ್ಯ ಎಲ್ಲವೂ ರಾಜನಿಗೆ ಮಗಳನ್ನು ಕಂಡಾಗ ಜ್ಞಾಪಕಕ್ಕೆ ಬರುತ್ತದೆ. ಮಗಳು ತಲೆ ಅಲ್ಲಾಡಿಸುವುದು, ಗರ್ವದಿಂದ ತುಟಿ ಸೊಟ್ಟ ಮಾಡುವುದು ಎಲ್ಲವೂ ತಾಯಿಯ ತರಹ.

ರಾಜಕುಮಾರಿಯನ್ನು ಸಂತೋಷ ಗೊಳಿಸಲು ಅರಮನೆಯ ಅಂಗಳದಲ್ಲಿ ವಿವಿಧ ವಿನೋದಾವಳಿ ಕಾರ್ಯಕ್ರಮ ಏರ್ಪಾಡಾಗಿತ್ತು. ಕಾರ್ಯಕ್ರಮದಲ್ಲಿ ಒಂದು ಅಣುಕು ಗೂಳಿ ಕಾಳಗ. ಕೆಲವು ಹುಡುಗರು ಆಟದ ಕುದುರೆಗಳನ್ನೇರಿ ಗೂಳಿಯನ್ನು ಸುತ್ತಾಡಿಸುತ್ತಾ ಭರ್ಜಿಯಿಂದ ಅದನ್ನು ತಿವಿಯುತ್ತಿದ್ದರು. ಅದೇನು ನಿಜವಾದ ಗೂಳಿಯಲ್ಲ. ಬೆತ್ತ ಮತ್ತು ತೊಗಲಿನಿಂದ ಗೂಳಿ ಮುಖಮಾಡಿ ಹುಡುಗನಿಗೆ ಹಾಕಿರುವ ಗೂಳಿ. ಅವನು ಮಧ್ಯೆ ಮಧ್ಯೆ ಎರಡು ಕಾಲುಗಳ ಮೇಲೆ ನಡೆಯುತ್ತಿದ್ದ. ಗೂಳಿ ಎರಡು ಕಾಲುಗಳ ಮೇಲೆ ಓಡಾಡುವುದಿಲ್ಲ ಎಂದರೆ ಅವನಿಗೆ ಅದು ಗೊತ್ತಾಗುತ್ತಲೇ ಇರಲಿಲ್ಲ. ಆ ಪಾತ್ರ ಮಾಡಿದವನು ಫ್ರೆಂಚ್ ರಾಯಭಾರಿಯ ಮಗ. ಕಾಳಗದ ಕೊನೆಯಲ್ಲಿ ಗೂಳಿಯ ತಲೆ ಕತ್ತರಿಸಿ ಹಾಕಿದರು. ಸಧ್ಯ ಹುಡುಗನಿಗೆ ಏನೂ ಅಪಾಯವಾಗಲಿಲ್ಲ.

ಅನಂತರ ಆಫ್ರಿಕಾ ದೇಶದ ಒಬ್ಬ ಹಾವಾಡಿಗನೊಬ್ಬನಿಂದ ಒಂದು ಕಾರ್ಯಕ್ರಮ. ಅವನು ಒಂದು ದೊಡ್ಡ ಅಗಲ ತಳದ ಬುಟ್ಟಿ ತಂದಿದ್ದ. ಅದರಲ್ಲೊಂದು ಕೆಂಪು ಬಟ್ಟೆ. ಬುಟ್ಟಿಯನ್ನು ಅಂಗಳದ ಮಧ್ಯೆದಲ್ಲಿಟ್ಟು ಹಾವಾಡಿಗ ಪುಂಗಿ ಊದಲು ಶುರುಮಾಡಿದ. ನಾದ ಉತ್ತುಂಗಕ್ಕೆ ಏರಿದಂತೆ ಕೆಂಪು ಬಟ್ಟೆಯ ಕೆಳಗಿದ್ದ ಹಸುರು-ಹಳದಿ ಬಣ್ಣದ ಎರಡು ಹಾವುಗಳು ಈಚೆ ಬಂದವು. ಅವುಗಳ ಹೆಡೆಯಲ್ಲಿ ಚುಕ್ಕಿಗಳು. ನಾಲಗೆಯನ್ನು ಹೊರಚಾಚಿ ಹೆಡೆ ಆಡಿಸುತ್ತಿದ್ದ ಅವನ್ನು ಕಂಡು ಮಕ್ಕಳು ದಿಗಿಲುಗೊಂಡವು.

ಹಾವಾಡಿಗ ತನ್ನ ಹಾವುಗಳೊಡನೆ ಹೊರಟ ನಂತರ ಕೆಲವು ಸುಂದರ ಈಜಿಪ್ಟಿಯನ್ನರು ಮುಂಭಾಗಕ್ಕೆ ಬಂದರು. ಕೆಲವರು ಸಂಗೀತ ವಾದ್ಯಗಳನ್ನು ತಂದಿದ್ದರು. ಅವರಿಗೆ ರಾಜಕುಮಾರಿಯನ್ನು ಕಂಡು ಆನಂದವಾಗಿತ್ತು. ಅವರು ವಾದ್ಯದೊಡನೆ ಹಾಡಿದರು. ಸಂಗೀತ ಸುಶ್ರಾವ್ಯವಾಗಿತ್ತು.

ಮುಂದಿನ ಕಾರ್ಯಕ್ರಮ ಕರಡಿ ಆಟ. ಇಬ್ಬರು ಲಂಬಾಣಿಗಳು ಕರಡಿಯೊಂದನ್ನು ಸರಪಳಿ ಹಾಕಿ ಕರೆತಂದರು. ಕರಡಿ ತನ್ನ ತಲೆಯ ಮೇಲೆ ನಿಂತು ಕೊಳ್ಳುವಂತೆ, ಪಲ್ಟಿ ಹೊಡೆಯುವಂತೆ, ಮುಂಗಾಲುಗಳ ಮೇಲೆ ನಡೆಯುವಂತೆ ಮಾಡಿದರು. ಕರಡಿಯಿಂದ ಆಡಿಸಿದ ಆಟ ಚೆನ್ನಾಗಿತ್ತು.

ಅಂದಿನ ಕಾರ್ಯಕ್ರಮದಲ್ಲಿ ತುಂಬಾ ತಮಾಷೆ ಅನಿಸಿದ್ದು ಕುಬ್ಜನ ನೃತ್ಯ ಅನ್ನುವುದರಲ್ಲಿ ಅನುಮಾನವೇ ಇಲ್ಲ. ಅವನು ತನ್ನ ಬಾಗಿದ ಕಾಲುಗಳನ್ನು ಸೊಟ್ಟಪಟ್ಟ ಹಾಕುತ್ತಾ, ದಪ್ಪ ತಲೆಯನ್ನು ಅತ್ತ ಇತ್ತ ಅಲ್ಲಾಡಿಸುತ್ತಾ ಅಂಗಳಕ್ಕೆ ಬಂದಾಗ ಹುಡುಗರೆಲ್ಲಾ ಚಪ್ಪಾಳೆ ತಟ್ಟಿದರು, ಕೇಕೆ ಹಾಕಿದರು. ರಾಜಕುಮಾರಿಯೂ ಗಟ್ಟಿಯಾಗಿ ನಕ್ಕಳು. ರಾಜಕುಮಾರಿಯರು ತಮ್ಮ ಸುಖ ದುಃಖಗಳನ್ನು ಸಾರ್ವಜನಿಕರೆದರು ತೋರಿಸಬಾರದೆಂಬುದನ್ನು ಅವಳು ಮರೆತಿದ್ದಳು.

ಅಡ್ಡ ಮೋರೆ, ಗಂಟು ಮೂಗು, ದಪ್ಪ ತಲೆ, ಸಣ್ಣ ಕಿವಿ, ದೊಡ್ಡ ಹೊಟ್ಟೆ, ಸೊಟ್ಟ ಕೈಕಾಲುಗಳುಳ್ಳ ಮೂರು ಅಡಿ ಎತ್ತರದ ಕುಬ್ಜ ಅವನು. ನಿಜವಾಗಿಯೂ ಅವನಿಗಿಂತ ಕುರೂಪಿಯಾಗಿರುವವರು ಇರಲು ಸಾಧ್ಯವೇ ಇಲ್ಲ. ಹಿಂದಿನ ದಿನ ಅವನು ಕಾಡಿನಲ್ಲಿ ಬೇಟೆಗೆ

ಹೋದ ಇಬ್ಬರು ಶ್ರೀಮಂತರಿಗೆ ಸಿಕ್ಕಿದನಂತೆ. ಅವರು ಅವನನ್ನು ಅರಮನೆಗೆ ಕರೆದುಕೊಂಡು ಬಂದು 'ಅಚ್ಚರಿ ಕಾಣಿಕೆ' ಎಂದು ಕೊಟ್ಟರು. ಆ ಹುಡುಗನ ಅಪ್ಪ ಇದ್ದಿಲು ಸುಡುವವನು. ಕುರೂಪಿಯಾದ ಹಾಗೂ ಪ್ರಯೋಜನಕ್ಕೆ ಬಾರದ ಮಗ ಕಾಡಿನಲ್ಲಿ ತಪ್ಪಿಸಿಕೊಂಡಿದ್ದು ಅಪ್ಪನಿಗೆ ದುಃಖ ತರಲಿಲ್ಲ. ಹುಡುಗನಿಗೆ ತಾನೊಬ್ಬ ಕುರೂಪಿ ಎಂಬುದೂ ಗೊತ್ತಿರಲಿಲ್ಲ! ಕೀಳರಿಮೆ ಇಲ್ಲದೆ ಅವನು ಸಂತೋಷವಾಗಿಯೇ ಇದ್ದ.

ಆ ಕುರೂಪಿ ಕುಳ್ಳ ಅಂಗಳದ ಮಧ್ಯ ಭಾಗಕ್ಕೆ ಬಂದು ಕುಣಿದು ಕುಪ್ಪಳಿಸಿದ. ಕುಣಿಯುತ್ತಿದ್ದ ಅವನನ್ನು ನೋಡಿ ಕೇಕೆ ಹಾಕಿ, ಚಪ್ಪಾಳೆ ತಟ್ಟಿದಾಗ ಅವನು ಕತ್ತನ್ನು ಕೊಂಕಿಸಿ ನಮಸ್ಕಾರ ಮಾಡುತ್ತಿದ್ದ. ಬೇರೆಯವರು ನಗಲೆಂದೇ ಪ್ರಕೃತಿ ಇವನನ್ನು ಸೃಷ್ಟಿಸಿರಬೇಕು. ಅಡ್ಡಾದಿಡ್ಡಿ ಕುಣಿಯುತ್ತಿದ್ದ ಆ ಕುಬ್ಜ ತನ್ನ ಕಣ್ಣುಗಳನ್ನ ರಾಜಕುಮಾರಿಯಲ್ಲೇ ನೆಟ್ಟಿದ್ದ, ಅವಳ ಸಂತಸಕ್ಕೆ ಕುಣಿಯುತ್ತಿದ್ದ. ದಾದಿಯನ್ನು ರೇಗಿಸಲು ಹಾಗೂ ತಮಾಷೆ ಮಾಡಲು ರಾಜಕುಮಾರಿ ತಾನು ಮುಡಿದಿದ್ದ ಶ್ವೇತ ಗುಲಾಬಿಯನ್ನು ಕುಬ್ಜನ ಕಡೆ ಎಸೆದಳು. ಅವನು ಅದನ್ನು ತೆಗೆದುಕೊಂಡು ತನ್ನ ಒರಟು ತುಟಿಗಳಿಂದ ಅದಕ್ಕೆ ಮುತ್ತಿಟ್ಟು ಅಂಗಿಯ ಎದೆಗೆ ಸಿಕ್ಕಿಸಿಕೊಂಡ. ನಂತರ ಮೊಣಕಾಲೂರಿ ಕಿವಿಯಿಂದ ಕಿವಿಯವರೆಗೆ ಹಲ್ಲು ತೋರಿಸುತ್ತಾ ತನ್ನ ಹೊಳಪು ಕಣ್ಣುಗಳಿಂದ ಸಂತಸ ವ್ಯಕ್ತಪಡಿಸಿದ.

ಆಗಲೇ ಮಧ್ಯಾಹ್ನ. ಸೂರ್ಯನ ತಾಪ ಜಾಸ್ತಿಯಾಯಿತು. ಭೋಜನಕ್ಕೆ ಹೊತ್ತಾಯಿತೆಂದು ಸೇವಕರು ರಾಜಕುಮಾರಿಗೆ ಜ್ಞಾಪಿಸಿದರು. ರಾಜಕುಮಾರಿ ಎದ್ದು ನಿಂತು ಕುಳ್ಳನಿಗೆ ಸಂಜೆ ನೃತ್ಯಮಾಡಬೇಕೆಂದು ಆಜ್ಞಾಪಿಸಿ ಹೊರಟಳು. ಮಕ್ಕಳೂ ಅವಳ ಹಿಂದೆ ನಡೆದರು.

ಇನ್ನೊಂದು ಬಾರಿ ನೃತ್ಯ ಮಾಡುವ ಅವಕಾಶ ಸಿಕ್ಕಿತೆಂದು ಸಂತೋಷದಿಂದ ಕುಳ್ಳ, ರಾಜಕುಮಾರಿ ಕೊಟ್ಟ ಗುಲಾಬಿಯನ್ನು ಮುತ್ತಿಡುತ್ತಾ ಅಂಗಳದಲ್ಲೆಲ್ಲಾ ಸುತ್ತಾಡಿದ. ಹೂಪಾತಿಗಳಲ್ಲಿದ್ದ ಪುಷ್ಪಗಳಿಗೆ ಕುರೂಪಿ ಕುಬ್ಜ ತಮ್ಮ ನಡುವೆ ಬಂದದ್ದು ಕೋಪ ತಂದಿತ್ತು.

''ನಾವಿರುವ ಬಳಿ ಕುರೂಪಿ ಬರುವುದು ಸರಿಯಲ್ಲ'' ಎಂದುವು ಟ್ಯುಲಿಪ್‌ಗಳು.

''ಎಷ್ಟು ಭಯಂಕರ ! ಅವನನ್ನು ನೋಡಿದಾಗ ಮೈ ಚುಚ್ಚಿದ ಹಾಗೆ ಆಗುತ್ತದೆ. ನನ್ನ ಬಳಿ ಬಂದರೆ ನನ್ನ ಮುಳ್ಳಿನಿಂದ ಅವನನ್ನು ಚುಚ್ಚುತ್ತೇನೆ'' ಎಂದಿತು ಕ್ಯಾಕ್ಟಸ್.

''ನನ್ನ ಒಂದು ಹೂವು ಅವನ ಪಾಲಾಗಿದೆ. ನಾನು ಅದನ್ನು ಕೊಟ್ಟದ್ದು ರಾಜಕುಮಾರಿಗೆ. ಅವನು ಅದನ್ನು ಕದ್ದಿರಬೇಕು'' ಎನ್ನುತ್ತಾ ಬಿಳಿ ಗುಲಾಬಿ ಗಿಡ ''ಕಳ್ಳ, ಕಳ್ಳ'' ಎಂದು ಅರಚಿತು.

ಆದರೆ ಪ್ರಾಣಿಪಕ್ಷಿಗಳಿಗೆ ಅವನನ್ನು ಕಂಡರೆ ಪ್ರೀತಿ ಇತ್ತು. ಹಕ್ಕಿಗಳ ಧ್ವನಿಯನ್ನು ಅವನು ಅನುಸರಿಸುತ್ತಿದ್ದ. ಮೊದಲ ಹೆಜ್ಜೆಗಳನ್ನು ಗುರುತಿಸಿ ಮೊಲ ಎಲ್ಲಿದೆ ಎಂಬುದನ್ನು ಪತ್ತೆ ಮಾಡುತ್ತಿದ್ದ. ಪಾರಿವಾಳಗಳು ಎಲ್ಲಿ ಗೂಡು ಕಟ್ಟಿವೆ ಎಂದು ಅವನಿಗೆ ಗೊತ್ತಿತ್ತು. ಬೇಟೆಗಾರನೊಬ್ಬ ತಾಯಿ ಪಕ್ಷಿಯನ್ನು ಹೊಡೆದು ಹಾಕಿದಾಗ ಗೂಡಿನಿಂದ ಅದರ ಮರಿಗಳನ್ನು ತಂದು ಅವುಗಳನ್ನು ಸಾಕಿದ್ದ. ಕಾಡಿನಲ್ಲಿರುವಾಗ ಅವನಿಗೆ ಅನೇಕ ಪ್ರಾಣಿಪಕ್ಷಿಗಳು ಗೆಳೆಯರಾಗಿದ್ದವು. ಅವುಗಳೊಡನೆ ಆವನು ಆಟವಾಡುತ್ತಿದ್ದ.

ರಾಜಕುಮಾರಿ ಎಲ್ಲಿಗೆ ಹೋದಳು? ಅವನು ಗುಲಾಬಿಯನ್ನು ಕೇಳಿದ. ಅವಳಿಂದ ಉತ್ತರವಿಲ್ಲ. ಅರಮನೆ ನಿದ್ದೆ ಹೋದಂತಿತ್ತು. ಬಾಗಿಲುಗಳು ಹಾಕಿಲ್ಲದಿದ್ದರೂ, ಕಿಟಕಿ ಮತ್ತು

ಬಾಗಿಲುಗಳಿಗೆ ದಪ್ಪ ಪರದೆಗಳು ಮುಚ್ಚಿದ್ದವು. ಅರಮನೆಯೊಳಗೆ ಹೋಗಲು ಕುಳ್ಳ ಎಲ್ಲ ಕಡೆ ಅಲೆದ. ಒಂದು ಬಾಗಿಲು ತೆರೆದಿತ್ತು. ಅದರಲ್ಲಿ ನುಸುಳಿಹೋದ. ಅದು ಒಂದು ದೊಡ್ಡ ಹಜಾರ. ನೆಲಕ್ಕೆ ಬಣ್ಣ ಬಣ್ಣದ ಕಲ್ಲುಗಳು. ರಾಜಕುಮಾರಿ ಅಲ್ಲಿರಲಿಲ್ಲ. ಬದಲು ಅಮೃತ ಶಿಲೆಯ ಪ್ರತಿಮೆಗಳಿದ್ದವು. ಹಜಾರದ ಒಂದು ತುದಿಯಲ್ಲಿ ಪರದೆ ಹಾಕಿದ ಬಾಗಿಲು! ಅದಕ್ಕೆ ಕಸೂತಿ ಮಾಡಿರುವ ಕರಿ ವೆಲ್‌ವೆಟ್‌ನ ಪರದೆ. ರಾಜಕುಮಾರಿ ಬಹುಶಃ ಅದರ ಹಿಂದೆ ಅವಿತುಕೊಂಡಿರಬೇಕೆಂದು ಅಲ್ಲಿಗೆ ಹೋಗಿ ನೋಡಿದ. ಅವಳು ಅಲ್ಲಿರಲಿಲ್ಲ. ಬಾಗಿಲ ಹಿಂಭಾಗಕ್ಕಿದ್ದ ಕೊಠಡಿ ಇನ್ನೂ ಸುಂದರ ವಾಗಿತ್ತು. ಗೋಡೆಗಳ ಮೇಲೆ ಚಿತ್ರಗಾರರು ಬಿಡಿಸಿದ್ದ ಸುಂದರ ಚಿತ್ರಗಳು. ಅದು ಕೌನ್ಸಿಲ್ ರೂಂ. ಕುಳ್ಳ ರತ್ನಗಂಬಳಿಯನ್ನು ತುಳಿದು ಕೊಂಡು ಮುಂದಿನ ಕೊಠಡಿಗೆ ಹೋದ. ಅಲ್ಲಿಯೂ ರಾಜಕುಮಾರಿ ಇರಲಿಲ್ಲ. ರಾಯಭಾರಿಗಳನ್ನು ಮತ್ತು ಶ್ರೀಮಂತರನ್ನು ರಾಜ ಭೇಟಿ ಮಾಡುವ ಕೊಠಡಿಅದು. ಮೇಲ್ಛಾವಣಿಯಿಂದ ತೂಗುಬಿದ್ದ ಗಾಜಿನ ಹೂಗೊಂಚಲು, ಗೋಡೆಗಳ ಮೇಲೆ ಸುಂದರ ಚಿತ್ರಗಳು, ನೆಲಕ್ಕೆ ಅಮೃತಶಿಲೆ, ಕುಳಿತುಕೊಳ್ಳು ವುದಕ್ಕೆ ಭಾರಿ ಕುರ್ಚಿಗಳು.

ಅರಮನೆಯ ವಾತಾವರಣ ಉಸಿರು ಕಟ್ಟಿಸುವಂತಿತ್ತು. ಬಿಡಿ ಬೀಸಾಗಿ ಗಾಳಿ ಬೀಸು ತ್ತಿರಲಿಲ್ಲ. ಆದರೆ ಕಾಡಿನಲ್ಲಿ? ಅರಮನೆಯ ಹೂವುಗಳಷ್ಟು ಕಾಡಿನ ಹೂವುಗಳು ಸುಂದರ ವಾಗಿಲ್ಲದಿದ್ದರೂ ಅವುಗಳಲ್ಲಿ ಹೆಚ್ಚು ಸುಗಂಧ ವಿರುತಿತ್ತು. ಕುಳ್ಳ ಪಕ್ಕದ ಕೊಠಡಿಗೆ ಹೋದ. ಅವನಿಗೆ ಸ್ವಲ್ಪ ಹೆದರಿಕೆಯಾಯ್ತು. ಕಾರಣ ಅಲ್ಲಿ ಇನ್ನೊಬ್ಬನಿದ್ದ. ಅವನೊಬ್ಬ ಗುಜ್ಜಾರಿ, ಗೂನು ಬೆನ್ನು, ಸೊಟ್ಟ ಕೈಕಾಲುಗಳು, ದಪ್ಪತಲೆ, ತಲೆಯಲ್ಲಿ ಅಡ್ಡಾದಿಡ್ಡಿ ಬೆಳೆದ ಕಪ್ಪು ಕೂದಲು. ಅವನನ್ನು ನೋಡಿ ಕುಬ್ಜ ಹುಬ್ಬು ಗಂಟು ಹಾಕಿದ. ಆ ಗುಜ್ಜಾರಿಯು ಹುಬ್ಬು ಗಂಟು ಹಾಕಿತು. ಅವನು ನಕ್ಕ, ಅದೂ ನಕ್ಕಿತು. ತಮಾಷೆಗೆ ಕತ್ತು ಬಗ್ಗಿಸಿ ನಮಸ್ಕರಿಸಿದ, ಅದೂ ನಮಸ್ಕರಿಸಿತು. ಅವನನ್ನು ಮುಟ್ಟಿದ. ಈಗ ಆ ಗುಜ್ಜಾರಿಯ ಮುಖವು ಇವನ ಮುಖದ ಬಳಿಯೇ ಬಂದಹಾಗೆ ಆಯಿತು. ಅದಕ್ಕೊಂದು ಗುದ್ದು ಕೊಟ್ಟ. ಅದು ಬರ್ಫದಂತೆ ತಣ್ಣಗಿತ್ತು. ಕುಬ್ಜ ಹಿಂದೆ ಸರಿದ. ಅದು ಹಿಂದೆ ಸರಿಯಿತು.

ಅದೇನು? ಸ್ವಲ್ಪ ಹೊತ್ತು ಯೋಚಿಸಿದ. ಪ್ರತಿಧ್ವನಿಯ ಪರಿಚಯ ಅವನಿಗೆ ಕಾಡಿನಲ್ಲಾ ಗಿತ್ತು. ಅವನಿಗೆ ನಿಧಾನವಾಗಿ ಅರ್ಥ ವಾಯಿತು. ಅದು ಅವನ ಪ್ರತಿರೂಪ, ಬೇರೆ ಯಾವುದು ಅಲ್ಲ. ತನ್ನ ಕುರೂಪಕ್ಕೆ ತಾನೆ ಮಕ್ಕಳು ನಗುವುದು? ತನ್ನ ರೂಪು ಹೇಗಿದೆ ಎಂದು ತಿಳಿದು ಕೊಳ್ಳಲು ಕಾಡಿನಲಿ ಕನ್ನಡಿ ಇರಲಿಲ್ಲ. ಈಗ ಗೊತ್ತಾ ಯಿತು ತಾನೊಬ್ಬ ನೋಡಲು ಅಸಹ್ಯವಾಗಿ ರುವ ಕುಳ್ಳ, ತನ್ನನ್ನು ತಂದೆತಾಯಿ ಹುಟ್ಟಿ ದೊಡನೆ ಏಕೆ ಕೊಂದು ಹಾಕಲಿಲ್ಲ? ತನ್ನನ್ನೇಕೆ ಮಾರಿದರು? ಬಿಸಿ ಕಣ್ಣೀರು ಅವನ ಕೆನ್ನೆಗಳು ಮೇಲೆ ಇಳಿಯಿತು.

ಕುಳ್ಳ ಅಲ್ಲೆ ಅಳುತ್ತಾ ಮುಷ್ಟಿಯಲ್ಲಿ ನೆಲ ಕುಟ್ಟುತ್ತಾ ನೆಲದ ಮೇಲೆ ಕುಳಿತ. ರಾಜ ಕುಮಾರಿ ಕುಳ್ಳ ಅಲ್ಲಿರುವುದನ್ನು ಕಂಡಳು. ಅವನ ಕುಣಿತ ತಮಾಷೆಯಾಗಿತ್ತು. ಆದರೆ ಅವನ ನಟನೆ ಇನ್ನೂ ತಮಾಷೆಯಾಗಿದೆ ಎಂದು ಹೇಳುತ್ತಾ ಚಪ್ಪಾಳೆ ತಟ್ಟಿದಳು. ಕುಳ್ಳನ ಅಳು ನಿಧಾನವಾಗುತ್ತಾ ಬಂತು. ಅವನು ಬಿಕ್ಕಳಿ ಸುತ್ತಾ ಒರಗಿದ.

ರಾಜಕುಮಾರಿ ''ಭೇಷ್! ನಟನೆ ಚೆನ್ನಾ ಗಿದೆ. ಆದರೆ ಈಗ ನೃತ್ಯಮಾಡು'' ಎಂದಳು. ಆದರೆ ಕುಳ್ಳ ಏಳಲಿಲ್ಲ. ರಾಜಕುಮಾರಿ ತನ್ನ

ಪಾದದಿಂದ ನೆಲಕುಟ್ಟುತ್ತಾ, ಚಿಕ್ಕಪ್ಪನಿಗೆ ಹೇಳಿ ಕಳುಹಿಸಿದಳು. ಡಾನ್ ಪಿಡ್ರೋ ಅಲ್ಲಿಗೆ ಬಂದು ಕುಳ್ಳನ ಕೆನ್ನೆಗೆ ಎರಡು ಬಾರಿಸಿ, ''ಎದ್ದೇಳು, ಸ್ಪೇನ್‌ನ ರಾಜಕುಮಾರಿ ನಿನ್ನ ನೃತ್ಯ ನೋಡಬೇಕು ಎಂದಾಗ ನೀನೇಕೆ ಬಿದ್ದುಕೊಂಡಿದ್ದಿ?'' ಎಂದು ಕಿರುಚಿದ. ಆದರೆ ಕುಳ್ಳ ಏಳಲಿಲ್ಲ.

''ಛಡಿ ಶಿಕ್ಷೆ ಕೊಡುವವರನ್ನು ಕರೆಸಬೇಕು'' ಎಂದ ಪಿಡ್ರೋ. ಆದರೆ ಅವನ ಜೊತೆ ಬಂದಿದ್ದ ಅಧಿಕಾರಿ ಕುಳ್ಳನ ಪಕ್ಕದಲ್ಲಿ ಕುಳಿತು ಅವನ ಎದೆಯ ಮೇಲೆ ತನ್ನ ಹಸ್ತವಿಟ್ಟು ಪರೀಕ್ಷಿಸಿದ. ನಂತರ ಎದ್ದು, ರಾಜಕುಮಾರಿಗೆ ತಲೆತಗ್ಗಿಸಿ ಹೇಳಿದ-

''ರಾಜಕುಮಾರಿ, ಇನ್ನು ಈ ಕುಬ್ಜ ನೃತ್ಯ ಮಾಡಲಾರ''.

''ಏಕೆ?'' ಎಂದಳು ರಾಜಕುಮಾರಿ.

''ಏಕೆಂದರೆ ಅವನಿಗೆ ಹೃದಯಾಘಾತವಾಗಿದೆ''.

ರಾಜಕುಮಾರಿ ಹುಬ್ಬುಗಂಟಿಕ್ಕಿ, ತನ್ನ ಕೆಂದುಟಿಗಳನ್ನು ಸೊಟ್ಟಮಾಡಿ ಹೇಳಿದಳು- ''ಹೃದಯ ಇರುವವರಿಗೆ ತಾನೇ ಹೃದಯಾಘಾತವಾಗುವುದು? ಇನ್ನು ಮುಂದೆ ಇಲ್ಲಿನ ಪ್ರದರ್ಶನಕ್ಕೆ ಹೃದಯ ಇಲ್ಲದವರನ್ನು ಕರೆಯಿಸಿ''.

ಪ್ರಜಾಸತ್ತೆಯ ಪಂಚ ಸೂತ್ರಗಳು

೧. ವ್ಯಕ್ತಿ ಅದೆಷ್ಟೇ ಶ್ರೇಷ್ಠನಿರಲಿ, ಪ್ರಜಾಸತ್ತೆಗೆ ಅನಿವಾರ್ಯನೆನಿಸಲಾರ.

೨. ವ್ಯಕ್ತಿಯ ವೈಭವೀಕರಣ ಪ್ರಜಾಸತ್ತೆಯ ನಿಷೇಧ; ಅವೆರಡೂ ಜೊತೆಗೂಡಿ ಬಾಳಲಾರವು.

೩. ಪ್ರಜಾಸತ್ತೆಯ ಅಡಿಯಲ್ಲಿ, ಕಾನೂನಿನ ಸಮಕ್ಷಮ, ಸರ್ವರೂ ಸಮ; ವ್ಯಕ್ತಿಯ ಅಂತಸ್ತು ಗಣನೆಗೆ ಬಾರದು.

೪. ಸ್ವಯಂ-ಪ್ರೇರಿತ ಶಿಸ್ತು, ಹಕ್ಕಿನ ಪ್ರಜ್ಞೆಯಂತೆಯೇ ಕರ್ತವ್ಯದ ಪ್ರಜ್ಞೆ, ಪ್ರಜಾಸತ್ತೆಯ ಪೋಷಣೆ.

೫. 'ಸಮಾನತೆ, ಸಮಾನ ಅವಕಾಶ, ಸಮ-ಬಾಳು, ಸಮ-ಪಾಲು' ಪ್ರಜಾಸತ್ತೆ ನೀಡುವ ಆಶ್ವಾಸನೆ.

ಮಕ್ಕಳ ಗೂರಲು

ಡಾ|| ಸಿ.ಎಸ್.ಕಮಲ
೧೪೯೮/೨೪ ''ಶ್ರೀ ಹರಿಕೃಪ''
ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರ
ಮೈಸೂರು-೫೭೦ ೦೦೪

ಗೂರಲನ್ನು ಎಳೆತ, ಉಬ್ಬಸ, ದಮ್ಮು, ಆಸ್ತಮ ಎಂದು ಹಲವು ಹೆಸರಿನಿಂದ ಕರೆಯುವ ವಾಡಿಕೆ ಇದೆ. ಇದು ಮಕ್ಕಳಿಂದ ಹಿಡಿದು ಎಲ್ಲ ವಯಸ್ಸಿನವರಲ್ಲೂ ಬರಬಹುದಾದ ಮತ್ತು ಬೇರೂರುವ (ಕ್ರಾನಿಕ್) ಖಾಯಿಲೆ. ಪ್ರಪಂಚದಾದ್ಯಂತ ಎಲ್ಲ ದೇಶಗಳಲ್ಲೂ ಇದು ಇತ್ತಿಚೆಗೆ ಹೆಚ್ಚಾಗುತ್ತಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ ೫ ರಷ್ಟು ಜನಕ್ಕೆ ಜೀವನದಲ್ಲಿ ಯಾವಾಗಲಾದರೂ ಈ ಖಾಯಿಲೆ ಬರಬಹುದು. ಮಕ್ಕಳಲ್ಲಿ ಸುಮಾರು ೮ ವರ್ಷ ತುಂಬುವ ಮುಂಚೆಯೇ ಬರುತ್ತದೆ. ವಯಸ್ಕರಲ್ಲಿ ಮಹಿಳೆಯರಿಗೆ ಹೆಚ್ಚು. ಮಕ್ಕಳಲ್ಲಿ ಗಂಡು ಮಕ್ಕಳಿಗೆ ಹೆಚ್ಚು (ಗಂ:ಹೆಂ= 3:2) ಮತ್ತು ಹದಿಹರೆಯದ ಗಂಡು ಹೆಣ್ಣು ಮಕ್ಕಳಲ್ಲಿ ಸಮಾನ ಪ್ರಮಾಣದಲ್ಲಿ ಕಾಣಬರುತ್ತದೆ.

ಉಸಿರಾಟದ ಕ್ರಿಯೆಯಿಂದ ನಮ್ಮ ದೇಹದ ರಕ್ತ ಶುದ್ಧವಾಗುತ್ತಗೆ. ಉಸಿರು ಒಳಗೆಳೆದುಕೊಂಡಾಗ ಶ್ವಾಸನಾಳದ ಮೂಲಕ ದೇಹಕ್ಕೆ ಅಗತ್ಯವಾದ ಆಮ್ಲಜನಕವು ಪುಪ್ಪುಸ ತಲುಪುತ್ತದೆ. ಅಲ್ಲಿಯ ರಕ್ತನಾಳದೊಳಗೆ ಚಲನೆಯಲ್ಲಿರುವ ರಕ್ತವು ಆಮ್ಲಜನಕವನ್ನು ಹೀರಿಕೊಂಡು ಇಂಗಾಲಾಮ್ಲವನ್ನು ಬಿಡುತ್ತದೆ; ಮತ್ತೆ ನಾವು ಉಸಿರು ಹೊರಗೆ ಬಿಟ್ಟಾಗ ಈ ಇಂಗಾಲಾಮ್ಲ ಹೊತ್ತ ಗಾಳಿ ಅದೇ ಶ್ವಾಸನಾಳಗಳ ಮೂಲಕ ಹೊರಬರುತ್ತದೆ. ಇದು ಪುಪ್ಪುಸದ ಮುಖ್ಯ ಕ್ರಿಯೆ. ಗಾಳಿಯ ಒಳಹೊರ ಚಲನೆಗೆ ಅಡ್ಡಿ ಇದ್ದರೆ, ಈ ಕ್ರಿಯೆಗೆ ತೊಡಕುಂಟಾಗುತ್ತದೆ. ಗೂರಲು ಖಾಯಿಲೆ ಯಲ್ಲಿ ಇಂಥ ಅಡಚಣೆಯುಂಟಾಗುವ ಸ್ಥಿತಿ ಇರುತ್ತದೆ. ಆದರೆ ಈ ಅಡಚಣೆ ಮತ್ತೆ ಪೂರ್ವ ಸ್ಥಿತಿಗೆ ತಿರುಗಬಹುದಾದಂತಹುದು.

ನಾವು ಉಸಿರಾಡುವ ಗಾಳಿಯಲ್ಲಿ ಅಗತ್ಯವಿರುವ ಆಮ್ಲಜನಕವಷ್ಟೇ ಅಲ್ಲದೇ ಪರಿಸರದ ಧೂಳು, ಹೊಗೆ, ಎಷ್ಟೋ ಕ್ರಿಮಿಗಳೂ ಸೇರಿರುತ್ತವೆ. ಇವು ಕೆಲವರಲ್ಲಿ ಗೂರಲುಂಟುಮಾಡುತ್ತವೆ. ಇಂಥವರ ಶ್ವಾಸನಾಳ ಈ ವಸ್ತುಗಳಿಗೆ ಮಿತಿಮೀರಿದ ಪ್ರತಿಕ್ರಿಯೆ ತೋರಿಸುತ್ತದೆ. (ಅತಿಪಟುತ್ವ, ಅತಿಸಂವೇದಕತೆ). ಎಂದೇ ಗೂರಲನ್ನು ಶ್ವಾಸನಾಳದ ಅತಿ ಪಟುತ್ವ ಉಂಟುಮಾಡುವ ಒಂದು ಖಾಯಿಲೆ ಎಂದು ಹೇಳಿದೆ. ಪರಿಣಾಮವಾಗಿ ಚಿಕ್ಕಶ್ವಾಸನಾಳಗಳ ಒಳಸುತ್ತಳತೆ ಸಂಕುಚಿತಗೊಳ್ಳುವುದು ಅದರ ಒಳಲೋಳೆ ಪದರದ ಊತ, ಅತಿ ಹೆಚ್ಚು ಲೋಳೆರಸ ಉತ್ಪತ್ತಿ ಉಂಟಾಗಿ ಗಾಳಿಯ ಚಲನೆಗೆ ಅಡಚಣೆಯಾಗುತ್ತದೆ.

ಶ್ವಾಸನಾಳಗಳಲ್ಲಿ ಈ ಬದಲಾವಣೆಯಿಂದ ಗೂರಲಿನ ಚಿಹ್ನೆಗಳಾದ ಉಸಿರಾಟದ ತೊಂದರೆ, ಕೆಮ್ಮಲು ಮತ್ತು ಗಸ್ ಗಸ್ ಶಬ್ದದ (ಶೀಟಿ ಶಬ್ದದ) ಉಸಿರಾಟಿಕೆ ಕಾಣಿಸಿಕೊಳ್ಳುತ್ತವೆ.

ಗೂರಲು ವಿಭಿನ್ನ ಕಾರಣಗಳ, ವಿಭಿನ್ನ ಲಕ್ಷಣಗಳ ಮತ್ತು ಹೆಚ್ಚಾಗಿ ಅನುವಂಶೀಯವಾಗಿ ಬರುವಂಥ ಖಾಯಿಲೆ. ಅನುವಂಶೀಯ ಅಂಶದ ಜೊತೆಗೆ ಹಲವು ಪರಿಸರದ ವಸ್ತುಗಳು ಪ್ರೇರಕಗಳಾಗಿದ್ದು ಈ ಖಾಯಿಲೆಗೆ ಬಹು ಮುಖ್ಯ ಅಂಶಗಳಾಗಿರುತ್ತವೆ. ಅಲ್ಲದೆ ಅಲರ್ಜಿಯಿಂದಾಗುವ ನೆಗಡಿ, ಚರ್ಮದ ಏಟೋಪಿಕ್ ಉರಿಯೂತಗಳು ಕೂಡ ಉದಾ: ಎಕ್ಸೀಮ, ಕಜ್ಜಿತುರಿ. ಇವು ಒಂದಕ್ಕೊಂದು ಪರಸ್ಪರ ಸಂಬಂಧ ಉಳ್ಳವು. ಮುಕ್ಕಾಲು ಮೂರು ಪಾಲು ಈ ಖಾಯಿಲೆ ಅಲರ್ಜಿಗೆ ಸಂಬಂಧಿಸಿದ್ದರೂ, ಅಲರ್ಜಿಪ್ರವೃತ್ತಿ ಇಲ್ಲದವರಲ್ಲೂ ಬರಬಹುದು.

ಪ್ರೇರಕಗಳು ಹಲವಾರಿರಬಹುದು. ಆದರೆ ಪ್ರತಿಯೊಂದು ಮಗುವಿಗೂ ಇದು ವಿಶಿಷ್ಟ ವಸ್ತುವನ್ನು ಕುರಿತದ್ದೇ ಆಗಿರುತ್ತದೆ.

ಸಾಮಾನ್ಯವಾಗಿ ಪ್ರೇರಕಗಳೆನಿಸುವ ವಸ್ತುಗಳು ಹೀಗಿವೆ:

೧. ಸಸ್ಯಗಳ ಪರಾಗಗಳು, ಬೂಷ್ಟು (ಇಲ್ಲಣ) , ಪ್ರಾಣಿಗಳ ಕೂದಲಿನ ಹೊಟ್ಟು (ಸಾಕಿದ ನಾಯಿ, ಬೆಕ್ಕು, ಮೊಲಗಳು, ಇತ್ಯಾದಿ), ಸೀಗೆಪುಡಿ, ಉಣ್ಣೆಬಟ್ಟೆ ಸುಗಂಧ ಗಳು, [illegible]. ೨. ಶ್ವಾಸನಾಳದ ಸೋಂಕು. ೩. ಕೆಲವು ಔಷಧಿಗಳು, ಉದಾ: ಆಸ್ಪರಿನ್, ಹೃದಯರೋಗಶಮನಕ್ಕೆ ಉಪಯೋಗಿಸುವ ಔಷಧಿಗಳಲ್ಲಿ ಒಂದಾದ ಪ್ರೋಪ್ರನಲಾಲ್, ನೋವುಶಮನ ಔಷಧಿ ಇಬುಪ್ರೋಫೆನ್ ಪೆನಿಸಿಲಿನ್ ಆಂಟಿ ಬಯಾಟಿಕ್ ಮುಂತಾದುವು. ೪. ಭಾವೋದ್ವೇಗ ಪರೀಕ್ಷೆಯ ಭಯ, ಆಪ್ತರ ನಿಧನ, ತಾಯಿಯಿಂದ ಅಗಲಿಕೆ). ೫. ವ್ಯಾಯಾಮ. ೬. ಒಮ್ಮೊಮ್ಮೆ, ವಿರಳವಾಗಿ ಹಲವು ಆಹಾರಪದಾರ್ಥಗಳು (ಹಸುವಿನ ಹಾಲು, ಮೀನು, ಮೊಟ್ಟೆ ಇತ್ಯಾದಿ).೭. ಹವಾ ವ್ಯತ್ಯಾಸ: ಕೆಲವರಿಗೆ ಒಣ ಹವೆ ಪ್ರೇರಕವಾದರೆ, ಮತ್ತೆ ಕೆಲವರಿಗೆ ಶೀತಲ ಹವೆ, . ೮. ಹಲವು ಉದ್ರೇಕಕಾರಿ (ಇರಿಟೆಂಟ್ಸ್) ವಸ್ತುಗಳಾದ ಧೂಮಪಾನದ ಹೊಗೆ, ಸುವಾಸನೆ ದ್ರವ್ಯಗಳ ಸೀರ್ಪಣಿಗಳು (ಸ್ಪ್ರೇ), ದುರ್ನಾತ [illegible].

ಯಾವ ಮಗುವಿಗೆ ಯಾವ ವಸ್ತು ಪ್ರೇರಕವಾಗುತ್ತದೆಂದು ಹೇಳಲಾಗುವುದಿಲ್ಲ. ಇದನ್ನು ಕಂಡುಕೊಳ್ಳುವಲ್ಲಿ ಮನೆಯವರ ಪಾತ್ರವೇ ಹೆಚ್ಚಿನದು. ಪ್ರತಿದಿನ ಮಗುವನ್ನು ನೋಡಿಕೊಳ್ಳುವವರು ಗಮನವಿಟ್ಟು ತಿಳಿಯ ಬೇಕಾದ ಮುಖ್ಯ ಮಾಹಿತಿ.

ಗೂರಲಿನಲ್ಲಿ ಅಲರ್ಜಿ ಅಥವಾ ಬಾಹ್ಯ ಗೂರಲು ಮತ್ತು ವ್ಯಕ್ತಿ ವೈಶಿಷ್ಟ್ಯದ ಗೂರಲು ಎಂದು ಎರಡು ವಿಧ ಗುರುತಿಸುವುದುಂಟು. ಆದರೆ ಸಾಮಾನ್ಯವಾಗಿ ರೋಗಿಗಳಲ್ಲಿ ಈ ಎರಡರ ಅಂಶಗಳೂ ಇರುತ್ತವಾದ್ದರಿಂದ ಬಳಕೆಯಲ್ಲಿ ಈ ವಿಭಜನೆ ಅಷ್ಟು ಮುಖ್ಯವಲ್ಲ.

ಕಷ್ಟದಿಂದ ಉಸಿರಾಡುವುದು, ಗಸ್ ಗಸ್ ಶಬ್ದದ ಉಸಿರು ಮತ್ತು ಕೆಮ್ಮು ಗೂರಲಿನ ಚಿಹ್ನೆಗಳು. ಕೆಲವು ಬಾರಿ ಎಡಬಿಡದ ಕೆಮ್ಮಲು ಮಾತ್ರವೇ ಕಾಣಬಹುದು. ಈ ಶೀಟಿ ಶಬ್ದದ ಉಸಿರು ಇದ್ದರೆ ಮಾತ್ರ ಅದು ಗೂರಲೆಂದು ಹೇಳಲಾಗುವುದಿಲ್ಲ. ಗೂರಲು ಮಕ್ಕಳು ಸಾಧಾರಣವಾಗಿ ಹಗಲು ಹೊತ್ತೆಲ್ಲ ಆರಾಮವಾಗಿರುತ್ತಾರೆ. ರಾತ್ರಿ ಮುಂಜಾನೆ ವೇಳೆಯಲ್ಲಿ ಇವರ ಗೂರಲು ತೀವ್ರವಾಗುತ್ತದೆ. ಕೆಲವು ಮಕ್ಕಳಿಗೆ ವ್ಯಾಯಾಮದಿಂದ ಮಾತ್ರವೇ ಗೂರಲು ಬರುತ್ತದೆ. ಸಾಮಾನ್ಯ ಗೂರಲಿರುವ ಮಕ್ಕಳಲ್ಲಿ ಅದು ತಿಂಗಳಿಗೊಮ್ಮೆ ೩-೪ ಗಂಟೆ [illegible] ಕಾಲ ಮಾತ್ರವಿದ್ದು ಶಮನವಾಗಿ ಬಿಡುತ್ತದೆ. ಇವರ ದೈನಂದಿನ ಚಟುವಟಿಕೆಗಳಿಗೆ ಇವರಿಂದ ಅಡ್ಡಿಯಾಗುವುದಿಲ್ಲ. ಮತ್ತೆ ಕೆಲವು ಮಕ್ಕಳಿಗೆ ತಿಂಗಳಿಗೆ ೨-೩ ಬಾರಿ ಕಂಡು ಬಂದು ೩-೪ ದಿನಗಳ ತನಕ ಇರುತ್ತದೆ. ಈ ಸಮಯದಲ್ಲಿ ಇವರಿಗೆ ಊಟ, ಆಟ, ಪಾಠಕ್ಕೆ ತೊಂದರೆಯಾಗಿ, ಆಡಿಗಡಿಗೆ ಶಾಲೆಗೆ ತಪ್ಪಿಸಿಕೊಳ್ಳಬೇಕಾಗುತ್ತದೆ. ಇನ್ನು ಕೆಲವು ಮಕ್ಕಳಲ್ಲಿ ವರ್ಷಪಿಡೀ ಚಿಹ್ನೆಗಳಿದ್ದು ಆಗಾಗ ಬಹು ತೀವ್ರತೆಗೂ ಹೋಗುತ್ತದೆ. ಇದನ್ನು ಸರಿಯಾಗಿ ನಿಯಂತ್ರಣ ಮಾಡಿಕೊಳ್ಳದಿದ್ದರೆ, ಬರಬರುತ್ತ ಶ್ವಾಸಕೋಶಗಳ ಉಬ್ಬುವಿಕೆ ಹೆಚ್ಚಾಗಿ ಗಾಳಿಯುಬ್ಬಟೆ ಆಗುತ್ತದೆ.ಗೂರಲು ಗಾಳಿ ಉಬ್ಬಟೆಯ ಸ್ಥಿತಿಗೆ ಏರಿದಾಗ ರೋಗಿಗೆ ಸ್ವಲ್ಪ ದೂರ ನಡೆದರೂ ಆಯಾಸ, ಉಬ್ಬಸ ಬರುತ್ತದೆ.

ಮಕ್ಕಳಲ್ಲಿ ಕಿರಿದಾದ ಶ್ವಾಸನಾಳಗಳಿರುವುದರಿಂದ ಶೀಟಿಶಬ್ದದ ಉಸಿರು ವಯಸ್ಕರಿ

ಗಿಂತ ಹೆಚ್ಚು. ಬಹುಬೇಗ [illegible]ಟದ ವೇಗ ಹೆಚ್ಚಾಗಿ, ಪಕ್ಕೆ ಎಳೆತವೂ ಬರಬಹುದು.

ಗೂರಲಿರುವ ಮಕ್ಕಳಿಗೆ ಕೆಲವು ಪ್ರಯೋಗ ಪರೀಕ್ಷೆಗಳು: ಅವಶ್ಯ. ಕೆಲವುಸರ್ತಿ ಖಾಯಿಲೆಯ ಕಾರಣ, ಶ್ವಾಸಕೋಶದ ಕ್ರಿಯಾ ಶಕ್ತಿಯ ಸ್ಥಿತಿ ತಿಳಿಯಲು, ಚಿಕಿತ್ಸಾಕ್ರಮಗಳ ಸಫಲತೆಗಳನ್ನು ಅಂದಾಜು ಮಾಡಲು, ರೋಗವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಈ ಪರೀಕ್ಷೆಗಳು ಸಹಕಾರಿಯಾಗುತ್ತವೆ. ಸಾಧಾರಣವಾಗಿ ಎದೆಭಾಗದ ಕ್ಷ-ಕಿರಣ, ರಕ್ತಪರೀಕ್ಷೆ ಗೂರಲಿರುವ ಎಲ್ಲ ಮಕ್ಕಳಿಗೂ ಮಾಡಬೇಕಾಗುತ್ತದೆ. ಸ್ಪೈರೊಮಿಟ್ರಿ ಮತ್ತು ಪೀಕ್ ಫ್ಲೋ ಮೀಟರ್ ಮಗುವಿನ ಶ್ವಾಸಕ್ರಿಯೆಯನ್ನು ಅಳೆಯುವ ಸಾಧಾರಣ ಯಂತ್ರ ಸಲಕರಣೆಗಳು. ಇವುಗಳು ಶ್ವಾಸಕೋಶ ಖಾಯಿಲೆ ತಜ್ಞರ ಕ್ಲಿನಿಕ್‌ಗಳಲ್ಲಿ, ಆಸ್ಪತ್ರೆಗಳಲ್ಲಿರುತ್ತವೆ. ಪೀಕ್ ಫ್ಲೋ ಮೀಟರ್ ಅತ್ಯಂತ ಸಾಧಾರಣ ಸಲಕರಣೆಯಾಗಿದ್ದು ಮನೆ ಗಳಲ್ಲೂ ಇಟ್ಟುಕೊಂಡು ಶ್ವಾಸಕ್ರಿಯಾ ಶಕ್ತಿಯ ಮಾಪನ ಮಾಡಿಕೊಳ್ಳಬಹುದು. ಈ ಸಲಕರಣೆಯಲ್ಲಿ ಸಣ್ಣ ಪ್ಲಾಸ್ಟಿಕ್ ಸಂಪುಟದೊಳಗೆ, ಅಂಕಿಗಳನ್ನು ಗುರುತುಮಾಡಿರುವ ಒಂದು ಕೊಳವೆ ಇರುತ್ತದೆ. ಮಕ್ಕಳು ಒಮ್ಮೆ ಜೋರಾಗಿ ಉಸಿರೆಳೆದುಕೊಂಡು ರಭಸದಿಂದ ಕೊಳವೆಯೊಳಗೂದಿದರೆ, ಒಂದು ಚಿಕ್ಕ ಗುಂಡಿ ಮಗುವಿನ ಶ್ವಾಸಶಕ್ತಿಯನ್ನು ಅಂಕಿಗಳ ಮೇಲೆ ಸೂಚಿಸುತ್ತದೆ. ಈ ವಿಧಾನವನ್ನು ಅರಿತು ಕೊಂಡು ಮಾಡಬೇಕಾಗುವುದರಿಂದ, ಅತಿ ಚಿಕ್ಕ ಮಕ್ಕಳಲ್ಲಿ ಇದು ಅಷ್ಟು ಉಪಯೋಗವಾಗುವುದಿಲ್ಲ. ಸದ್ಯದಲ್ಲಿ ಕೆಲವು ಶ್ವಾಸಕೋಶ ತಜ್ಞರು ಮಾತ್ರ ಇದನ್ನು ಉಪಯೋಗಿಸುತ್ತಿದ್ದಾರೆ. ಗೂರಲು ಖಾಯಿಲೆ ಮರಣಾಂತಿಕ ವಾಗುವುದು ಬಹಳ ವಿರಳ.

ಗೂರಲು ಖಾಯಿಲೆ ಸಂಪೂರ್ಣವಾಗಿ ಗುಣವಾಗುವಂಥದ್ದಲ್ಲ, ಆದರೆ ಬಲು ಮಟ್ಟಿಗೆ ನಿಯಂತ್ರಣದಲ್ಲಿಟ್ಟುಕೊಳ್ಳಬಹುದು. ಹಾಗೆಂದು ಗೂರಲು ಮಕ್ಕಳ ತಾಯಂದಿರು ನಿರಾಶರಾಗಬೇಕಾಗಿಲ್ಲ. ಇತ್ತೀಚಿಗಿನ ಗೂರಲಿನ ಚಿಕಿತ್ಸಾಕ್ರಮಗಳು ಮತ್ತು ಹೊಸ ಔಷಧಿಗಳಿಂದ ವ್ಯಕ್ತಿ ಉನ್ನತಮಟ್ಟದ ಜೀವನ ನಡೆಸಲು ಅನುಕೂಲವಾಗಿವೆ. ಆಗಾಗ್ಗೆ ಉಲ್ಬಣಗೊಳ್ಳುವ ಗೂರಲಿನ ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆಯಿಂದ ಈ ಅತಿರೇಕಗಳನ್ನು ತಡೆಯುವ ಕ್ರಮಗಳನ್ನು ನಿಮ್ಮ ವೈದ್ಯರಿಂದ ಸರಿಯಾಗಿ ತಿಳಿದುಕೊಂಡು, ಅದರಂತೆ, ತಪ್ಪದೇ ಪಾಲಿಸಿಕೊಂಡು ಬಂದರೆ, ಗುಣವೇ ಆಗಿಬಿಟ್ಟಿದಿಯೋ ಎನ್ನುವಷ್ಟು ಮಟ್ಟಿಗೆ ಖಾಯಿಲೆ ನಿಯಂತ್ರಣ ಸಾಧ್ಯ. ಇದು ಅವಮಾನಪಟ್ಟುಕೊಂಡು ಮುಚ್ಚಿಡುವಂಥ ಖಾಯಿಲೆಯಲ್ಲ. ಗೂರಲಿರುವ ಹಲವು ಕ್ರೀಡಾಪಟುಗಳು, ಸಿನಿಮಾ ನಟರು, ವೈದ್ಯರು ಅವರವರ ಕ್ಷೇತ್ರದಲ್ಲಿ ಉನ್ನತ ಕೀರ್ತಿ ಗಳಿಸಿರುವ ಉದಾಹರಣೆಗಳಿವೆ. ಇವು ಗೂರಲಿರುವವರು ಸಾರ್ಥಕವಾದ ತುಂಬು ಜೀವನ ನಡೆಸಬಹುದೆಂಬುದನ್ನು ಸೂಚಿಸುತ್ತವೆ.

ಗೂರಲು ಚಿಕಿತ್ಸಾಕ್ರಮದಲ್ಲಿ ಮೂರು ವಿಭಾಗಗಳನ್ನು ಪರಿಗಣಿಸಬಹುದು.

೧. ಪ್ರೇರಕವಸ್ತುಗಳಿಂದ ರಕ್ಷಣೆ. ೨. ಔಷಧಿಗಳ ಉಪಯೋಗ. ೩. ಇಮ್ಯುನೋಥೆರಪಿ.

ಮೊದಲಿನ ಎರಡು ಕ್ರಮಗಳು ಮಕ್ಕಳ ಗೂರಲಿನ ಚಿಕಿತ್ಸೆಯಲ್ಲಿ ಮುಖ್ಯವಾದವು.

ಖಾಯಿಲೆಯನ್ನು ಪ್ರಚೋದಿಸುವ ಪ್ರೇರಕಗಳನ್ನು ನಿವಾರಿಸುವುದರಿಂದ ಮಗುವಿಗೆ ನಡುನಡುವೆ ಕಾಣಿಸುವ ಗೂರಲು ಅತಿರೇಕಗಳನ್ನು ಬಲು ಮಟ್ಟಿಗೆ ಕಡಿಮೆ ಮಾಡಬಹುದು. ಬಾಹ್ಯ ಪರಿಸರದ ಪ್ರೇರಕಗಳಾದ ಧೂಳು, ಹೊಗೆ, ಶೀತಲಗಾಳಿ ಇವುಗಳಿಂದ ತಪ್ಪಿಸಿಕೊಳ್ಳುವುದು

ಸಾಧ್ಯವಿಲ್ಲ. ಮನೆ ಒಳಗಿನ ಪರಿಸರವನ್ನು ಆದಷ್ಟೂ ಮಗುವಿನ ಖಾಯಿಲೆಯ ಪ್ರೇರಕಗಳು ಇಲ್ಲದಂತೆ ಹಿತವಾಗಿಡಬಹುದು. ಮನೆ ಧೂಳು ಹೊಡೆಯುವುದು, ಹಾಸಿಗೆ ಬಟ್ಟೆ ಕೊಡುವುದು, ಮನೆಗೆ ಸುಣ್ಣಬಣ್ಣ ಮಾಡಿಸುವುದು ಇತ್ಯಾದಿ ಕೆಲಸಗಳನ್ನು ಮಗು ಮನೆಯಲ್ಲಿಲ್ಲದಿದ್ದಾಗ ಮಾಡಬಹುದು. ಸಾಧಾರಣವಾಗಿ ಮಗುವು ಸಾಕಿದ ನಾಯಿ, ಬೆಕ್ಕುಗಳನ್ನು ಮುದ್ದಿಸುವಾಗ ಗೂರಲು ಉದ್ರೇಕಗೊಳ್ಳಬಹುದು. ಆದ್ದರಿಂದ ಇವನ್ನು ಸಾಕದಿರುವುದೇ ಲೇಸು. ಮನೆಯಲ್ಲಿ ಧೂಮಪಾನ, ಸುವಾಸನಾ ದ್ರವ್ಯಗಳ ಸಿಂಪಡಣೆ ಮುಂತಾದವು ಮಕ್ಕಳ ಗೂರಲಿಗೆ ಆಹ್ವಾನವಿಟ್ಟಂತೆ.


ಮಕ್ಕಳ ಗೂರಲು ಶುಶ್ರೂಷೆ ಅವರ ಬೆಳೆವಣಿಗೆಗೆ ಅಡ್ಡಿಯಾಗದಂತಿರಬೇಕು. ಈ ದೃಷ್ಟಿಯಿಂದ, ಗೂರಲಿಗೆ ಹೆದರಿ ಪೌಷ್ಟಿಕ ಆಹಾರಗಳನ್ನೆಲ್ಲ ನಿಲ್ಲಿಸಬಾರದು. ನಿಮ್ಮ ಮಗುವಿಗೆ ಯಾವ ಆಹಾರದಿಂದ ಗೂರಲು ಉದ್ರೇಕವಾಗುತ್ತದೋ, ಅದನ್ನು ಮಾತ್ರ ಕೊಡಬಾರದು. ಸಾಧಾರಣವಾಗಿ ಐಸ್ ಕ್ರೀಮ್ ಅತಿಶೈತ್ಯಪಾನೀಯಗಳು, ಸೀಬೆಹಣ್ಣು ದ್ರಾಕ್ಷಿಹಣ್ಣು ಗೂರಲನ್ನು ಉದ್ರೇಕಿಸುತ್ತವೆ.

ಪಟ್ಟು ಹಿಡಿದ ಅಳುವಿನಿಂದ, ಜೋರಾಗಿ ತಡೆಯಿಲ್ಲದೆ ಮಾತನಾಡುವುದು, ನಗುವುದರಿಂದಲೂ ಗೂರಲು ಉದ್ರೇಕಿಸುವ ಸಂಭವವಿರುತ್ತದೆ. ನಿಧಾನವಾಗಿ ಮೆಲುದನಿಯಲ್ಲಿ ಮಾತನಾಡುವುದು ಒಳ್ಳೆಯದು.

ಉದ್ರೇಕ ಸ್ಥಿತಿಯಲ್ಲಿರುವ ಗೂರಲಿನ ಶೀಘ್ರ ಶಮನಕ್ಕೂ ಅದನ್ನು ದೀರ್ಘಕಾಲ ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೂ ಔಷಧಗಳಿವೆ. ಉದಾಹರಣೆಗೆ: ಸಾಲ್‌ಬ್ಯುಟಮಾಲ್, ಟರ್‌ಬ್ಯುಟಲಿನ್, ಥಿಯೋಫಿಲಿನ್, ಕಾರ್ಟಿಸೋನ್ ಮುಂತಾದವನ್ನು ಶೀಘ್ರ ಶಮನಕ್ಕಾಗಿ ಉಪಯೋಗಿಸುತ್ತಾರೆ. ಇದೇ ಕೆಲವು ಔಷಧಿಗಳನ್ನು ದೀರ್ಘಕಾಲ ಕೆಲಸ ಮಾಡುವ ಮಾದರಿಗಳಲ್ಲಿ ಮತ್ತು ಕ್ರೋಮೊ ಲಿನ್ ಔಷಧ ಮುಂತಾದವನ್ನು ಖಾಯಿಲೆಯ ದೀರ್ಘಕಾಲ ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ. ದೀರ್ಘಕಾಲ ನಿಯಂತ್ರಣದ ಔಷಧಿಗಳು ಶ್ವಾಸನಾಳದ ಗಾಸಿಯನ್ನು ಕಡಿಮೆ ಮಾಡುತ್ತವೆ.

ಗೂರಲು ಔಷಧಗಳು ದ್ರವ, ಗುಳಿಗೆ ಮತ್ತು ಏರೋಸಾಲ್ ಸ್ಪ್ರೇರೂಪದಲ್ಲಿ ಇರುತ್ತವೆ. ಸ್ಪ್ರೇರೂಪದ ಔಷಧಿಗಳನ್ನು ಉಪಯೋಗಿಸಲು ಸಾಧಾರಣ ಯಂತ್ರೋಪಕರಣಗಳು ದೊರೆಯುತ್ತವೆ. ಉದಾ: ಇನ್ಹೇಲರ್, ಸ್ಪೇಸ್‌ಹೇಲರ್, ರೋಟಹೇಲರ್ ಇತ್ಯಾದಿ. ಮಗುವಿನ

ಗೂರಲು ಉಪಶಮನಕ್ಕೆ ಬಳಸುವ ಕೆಲವು ಉಪಕರಣಗಳು :



ವಯಸ್ಸಿಗೆ ತಕ್ಕಂತ ಉಪಕರಣೆಗಳಲ್ಲಿ ಯಾವುದನ್ನಾದರೂ ಉಪಯೋಗಿಸಿ ಅದರ ಮೂಲಕ ಔಷಧಿ ಕೊಡಬೇಕು. ಇದನ್ನು ಬಾಯೊಳಗೆ ಇಟ್ಟುಕೊಂಡು ತೆಗೆದುಕೊಳ್ಳಬೇಕು. ಇದರೊಳಗೆ ಹಾಕಿದ ಔಷಧವು ಆವಿಯ ರೂಪದಲ್ಲಿ ಬಂದು ಉಸಿರಾಡಿ ಹೀರಿಕೊಂಡಾಗ ನೇರ ಶ್ವಾಸನಾಳ ತಲಪುತ್ತದೆ. ಈ ಔಷಧಗಳು ದ್ರವ ಮತ್ತು ಗುಳಿಗೆ ರೂಪದ ಔಷಧಕ್ಕಿಂತ ಬಲು ಕಡಿಮೆ ಪ್ರಮಾಣದಲ್ಲ ಸಮಾನ ಶಮನಫಲ ಕೊಡುತ್ತವೆ.

ನಿಮ್ಮ ಮಗುವಿಗೆ ಗೂರಲು ತೊಂದರೆಯಾದಾಗ ವೈದ್ಯರಲ್ಲಿ ತೋರಿಸಬೇಕು. ಗೂರಲು ಸಾಧಾರಣವಾಗಿ ಬರುವ ವೇಳೆ, ಹಿನ್ನೆಲೆ ಸನ್ನಿವೇಶ, ತೀವ್ರತೆಗಳನ್ನು ಅವರಿಗೆ ವಿವರವಾಗಿ ತಿಳಿಸಬೇಕು. ಅವುಗಳಿಗನುಗುಣವಾಗಿ ವೈದ್ಯರು ನಿಮ್ಮ ಮಗುವಿನ ಚಿಕಿತ್ಸಾಕ್ರಮಗಳನ್ನು ತಿಳಿಸಿ ಕೊಡುತ್ತಾರೆ. ಮನೆಯಲ್ಲೇ ಔಷಧಿಗಳನ್ನು ಕೊಡಬಹುದಾದ ಪರಿಸ್ಥಿತಿಗಳು, ಹೆಚ್ಚಾಗುವ ಚಿಹ್ನೆಗಳು, ಮತ್ತು ಮತ್ತೆ ಮರುಪರೀಕ್ಷೆಯ ಅವಸರಗಳನ್ನೂ ಸ್ಪ್ರೇ ಸಲಕರಣೆಗಳ ಉಪಯೋಗವನ್ನೂ ತಿಳಿಸಿ ಕೊಡುತ್ತಾರೆ. ಪ್ರತಿಯೊಬ್ಬ ಮಗುವಿನ ಗೂರಲಿಗೂ ಆದಕ್ಕೆ ವಿಶಿಷ್ಟವಾದ ಚಿಕಿತ್ಸಾಕ್ರಮವಿರುತ್ತದೆ. ಆದ್ದರಿಂದ ಪಕ್ಕದ ಮನೆಯ ಮಗುವಿಗೂ ಗೂರಲು ಇದೆ, ಅದೇ ಔಷಧ ನಮ್ಮ ಮಗುವಿಗೂ ಕೊಟ್ಟರಾಯಿತು ಎಂಬ ಧೋರಣೆ ತಳೆಯುವಂತಿಲ್ಲ. ಆದೂ ಅಲ್ಲದೇ ಪ್ರತಿಯೊಂದು ಮಗುವಿಗೂ, ಖಾಯಿಲೆ ತೀವ್ರತೆ, ವಯಸ್ಸು, ಮಗುವಿನ ತೂಕಕ್ಕೆ ಅನುಸಾರವಾಗಿ ಕೊಡುವ ಔಷಧಿಯ ಪ್ರಮಾಣ ನಿರ್ಧರಿಸಬೇಕು. ಗೂರಲು ಔಷಧಿಯನ್ನು ಚಿಕಿತ್ಸೆಗೆ ಕೊಡಬೇಕಾದ ಪ್ರಮಾಣದಿಲ್ಲ ಕೊಟ್ಟರೆ ಔಷಧಿಯ ದುಷ್ಪರಿಣಾಮವಿರುವುದಿಲ್ಲ. ಕೆಲವು ಮಕ್ಕಳಿಗೆ ಕೆಲವು ಔಷಧ ಸರಿಹೊಂದುತ್ತದೆ, ಕೆಲವು ಸರಿಹೊಂದುವುದಿಲ್ಲ. ಆದ್ದರಿಂದ ವೈದ್ಯರ ಸಲಹೆಗಳನ್ನು ತಪ್ಪದೇ ಅನುಸರಿಸಬೇಕು. ಸ್ವಂತ ವೈದ್ಯಕೀಯ ಮಾಡಿಕೊಳ್ಳುವುದು ಅಪಾಯಕಾರಿಯಾಗಬಲ್ಲದು. ಕೆಲವು ಮಕ್ಕಳಿಗೆ ೨-೩ ಔಷಧಿಗಳ ಅಗತ್ಯವೂ ಇರುತ್ತದೆ. ಈ ಔಷಧಿ ಕ್ರಮಗಳನ್ನೆಲ್ಲ ಮನೆಯಲ್ಲಿಯೇ ಅನುಸರಿಸಬಹುದು. ಆದ್ದರಿಂದ ಮಗುವಿನ ದೈನಂದಿನ ಚಟುವಟಿಕೆಗಳಿಗೆ- ಅಡ್ಡಿಯಾಗುವುದಿಲ್ಲ. ಆದರೆ ಖಾಯಿಲೆ ಈ ಯಾವ ಚಿಕಿತ್ಸಾಕ್ರಮದಲ್ಲೂ ಶಮನವಾಗದೇ ಅತ್ಯಂತ ತೀವ್ರ ಸ್ಥಿತಿಗೆ ಏರಿದರೆ ರೋಗಿಯನ್ನೇ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಬೇಕಾಗುತ್ತದೆ. ಇವರಿಗೆ ಚುಚ್ಚುಮದ್ದುಗಳು ಮತ್ತು ಆಮ್ಲಜನಕ ಕೊಟ್ಟು ಇವರತ್ತ ಜರೂರಿನ ಲಕ್ಷ್ಯ ಹರಿಸಬೇಕಾಗುತ್ತದೆ. ಆದಿ ಹಂತದಲ್ಲಿ ಚಿಕಿತ್ಸೆ ಕೊಟ್ಟು ಮನೆಯಲ್ಲಿ ಸದಾಕಾಲ ಮಗುವಿನ ಬಗ್ಗೆ ಎಚ್ಚರಿಕೆ ವಹಿಸಿದರೆ, ಸಾಧಾರಣವಾಗಿ ರೋಗ ಅತ್ಯಂತ ತೀವ್ರತೆಗೆ ಏರುವ ಸಂಭವ ಕಡಿಮೆ.

ಇಮ್ಯುನೋಥೆರಪಿ ಬಗ್ಗೆ ಎರಡು ಮಾತು : ಸಂಶಯಾಸ್ಪದದ ಅಲರ್ಜನ್ ವಸ್ತುವನ್ನು ಚರ್ಮದ ಮೇಲೆ ಅಲ್ಪಪ್ರಮಾಣದಲ್ಲಿ ಪ್ರಯೋಗಿಸಿ, ಇದು ಗೂರಲು ಖಾಯಿಲೆಗೆ ಸಂಬಂಧಿಸಿದೆಯೇ ಎಂದು ಖಚಿತಮಾಡಿಕೊಳ್ಳುತ್ತಾರೆ. ಅನಂತರ ಈ ನಿರ್ದಿಷ್ಟ ಅಲರ್ಜನ್‌ನ ಸಾರವನ್ನು ಮುಂಚೆಯೇ ನಿರ್ಧರಿಸಿದ ಅವಧಿ ಅಂತರದಲ್ಲಿ ಮತ್ತು ಪ್ರಮಾಣದಲ್ಲಿ ಪದೇ ಪದೇ ಚುಚ್ಚುಮದ್ದಾಗಿ ಕೊಡುವುದರ ಮೂಲಕ ಆ ನಿರ್ದಿಷ್ಟ ಅಲರ್ಜನೆಗೆ ಮಗುವಿನ ಶ್ವಾಸನಾಳದ ಅತಿ ಪಟುತ್ವವನ್ನು ಕಡಿಮೆ ಮಾಡುವ ಚಿಕಿತ್ಸಾಕ್ರಮಕ್ಕೆ ಇಮ್ಯೂನೋಥೆರಪಿ ಎಂದು ಹೆಸರು.

ಇದನ್ನು ಒಂದು ವರ್ಷದಲ್ಲಿ ಕೆಲವು ತಿಂಗಳುಗಳು ಅಥವಾ ವರ್ಷವಿಡೀ ಕೊಡಬೇಕಾಗಬಹುದು. ಇದರಿಂದ ಉತ್ತಮ ಆಗುವುದೇ ಆದರೆ, ಒಂದೆರಡು ವರ್ಷಗಳಲ್ಲಿ ಸೂಚನೆಗಳು ಕಂಡು ಬರುತ್ತದೆ. ಉತ್ತಮ ಕಂಡಲ್ಲಿ ೨-೩ ವರ್ಷಗಳ ತನಕ ಈ ಚಿಕಿತ್ಸೆ ಮುಂದುವರಿಸಬೇಕಾಗುತ್ತದೆ.

ದೀರ್ಘಕಾಲ ನಿಯಂತ್ರಣದ ಔಷಧಿಗಳಿಂದಲೇ ಉತ್ತಮ ಫಲ ಸಿಕ್ಕುತ್ತಿರುವುದರಿಂದ ಮಕ್ಕಳಲ್ಲಿ ಇಮ್ಯುನೋಥೆರಪಿಯು ಅಷ್ಟಾಗಿ ಬಳಕೆಯಲ್ಲಿಲ್ಲ.

ಒಂದು ವರ್ಷಕ್ಕಿಂತ ಕಿರಿಯ ಮಕ್ಕಳ ಗೂರಲಿನ ಬಗ್ಗೆ ವಿಶೇಷ ನಿಗಾ ಇಡಬೇಕು. ಇವರಲ್ಲಿ ಗೂರಲನ್ನು ಪತ್ತೆ ಹಚ್ಚುವುದೂ ಸುಲಭವಲ್ಲ. ಖಾಯಿಲೆಯ ಉಪದ್ರವ ಇವರಲ್ಲಿ ಬಹಳ ಹೆಚ್ಚಾಗಿರುತ್ತದೆ. ಸಾಧಾರಣವಾಗಿ ಗೂರಲಿಗೆ ಉಪಯೋಗಿಸುವ ಔಷಧಿಗಳೂ ಇಷ್ಟು ಚಿಕ್ಕಮಕ್ಕಳಲ್ಲಿ ಅಷ್ಟಾಗಿ ಫಲಕಾರಿಯಾಗುವುದಿಲ್ಲ. ಮಗುವಿಗೆ ಕೆಮ್ಮಿದ್ದರೆ, ತಾಯಂದಿರು ಮಗುವಿನ ಉಸಿರಾಟದ ವೇಗ, ಪಕ್ಕೆ ಎಳೆತ, ಹಾಲು ಸೇವನೆಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಉಸಿರಾಟದ ವೇಗ ಮಿನಿಟಗೆ ೫೦ಕ್ಕೂ ಹೆಚ್ಚಿದ್ದರೆ, ಉಸಿರಾಡಲು ತೊಂದರೆ ಇದ್ದು ಪಕ್ಕೆ ಎಳೆತವಿದ್ದು, ಹಾಲು ಕುಡಿಯಲು ಅಶಕ್ತತೆ ಇದ್ದರೆ ತತ್‌ಕ್ಷಣವೇ ಮಗುವಿಗೆ ಒಂದು ಸರದಿಯ ಗೂರಲಿನ ಔಷಧ ಕೊಟ್ಟು ಅನಂತರ ತಕ್ಷಣ ವೈದ್ಯರ ಹತ್ತಿರ ಕರೆದು ಕೊಂಡು ಹೋಗಬೇಕು. ಚಿಹ್ನೆಗಳು ಇಲ್ಲದಿದ್ದರೂ ಇಂಥ ಮಗುವನ್ನು ಆಗಿಂದಾಗ್ಗೆ ವೈದ್ಯರಲ್ಲಿ ತಪಾಸಣೆ ಮಾಡಿಸುತ್ತಿರುವುದು ಅಪೇಕ್ಷಣೀಯ.

ಗೂರಲು ಚಿಕಿತ್ಸೆಯಲ್ಲಿ ತಾಯಂದಿರು 'ಮಾಡಬೇಕಾದ' ಮತ್ತು 'ಮಾಡಬಾರದ' ವಿಷಯಗಳು:

೧. ಅತಿಹೆಚ್ಚಿನ ಪ್ರಮಾಣದಲ್ಲಿ ಯಾವುದೇ ತರಹ ಪಾನೀಯಗಳನ್ನು ಕುಡಿಸ ಬಾರದು. ಆಗಿಂದಾಗ ಸ್ವಲ್ಪ ಪ್ರಮಾಣದಲ್ಲಿ ಕುಡಿಸಬೇಕು. ಹಾಗೂ ಸ್ವಲ್ಪ ಬೆಚ್ಚಗಿರುವ ಪಾನೀಯಗಳನ್ನು ಕುಡಿಸುವುದು ಉತ್ತಮ.

೨. ನೀರಿನ ಆವಿಹೊಗೆ ಅಥವಾ ಸುವಾಸನೆ ಸೂಸುವ ಔಷಧಿಗಳ ಆವಿಹೊಗೆ ಕೊಟ್ಟರೆ ಗೂರಲು ಮತ್ತೂ ಉದ್ರೇಕಗೊಳ್ಳಬಹುದು.

೩. ಸಾಧಾರಣ ನೆಗಡಿ, ಕೆಮ್ಮಲಿಗೆ ಬಳಸುವ ಔಷಧಿಗಳನ್ನು ಗೂರಲಿರುವ ಮಗುವಿಗೆ ಕೊಡಬಾರದು.

೪. ಅತಿಸುವಾಸನೆ ಎಣ್ಣೆಗಳು, ಮುಲಾಮುಗಳನ್ನು (ಉದಾ: ಯೂಕಲಿಪ್ಟಸ್ ಎಣ್ಣೆ ವಿಕ್ಸ್ ಮುಲಾಮು ಇತ್ಯಾದಿ) ಮಗುವಿನ ಮೈಗೆ ಹಚ್ಚಬಾರದು.

೫. ತಡೆಯಿಲ್ಲದ ಕೆಮ್ಮಲು ಕೂಡ ಗೂರಲಿನ ಚಿಹ್ನೆ ಎಂದು ತಿಳಿಯಬೇಕು.

೬. ಮನೆಯ ಪರಿಸರವನ್ನು ಆದಷ್ಟೂ ಪ್ರಚೋದನಕಾರಿ ಪ್ರೇರಕಗಳಿಲ್ಲದಂತೆ ಕಾಪಾಡಿಕೊಳ್ಳಬೇಕು.

೭. ಗೂರಲು ಮಗುವಿಗೆ ವ್ಯಾಯಾಮದ ಆವಶ್ಯಕತೆ ಇರುತ್ತದೆ. ವ್ಯಾಯಾಮ ಮಾಡುವುದಕ್ಕೆ ಅರ್ಧಗಂಟೆ ಮುಂಚೆ ಔಷಧಿ ಕೊಟ್ಟಿದ್ದರೆ ವ್ಯಾಯಾಮ ಮಾಡುವಾಗ ಗೂರಲು ಬರುವುದಿಲ್ಲ.

೮. ಸ್ನಾನ ಮಾಡಿಸುವಾಗ ಎಣ್ಣೆ, ಸೀಗೆಪುಡಿ ಉಪಯೋಗಿಸದಿರುವುದು ಲೇಸು.

೯. ಸೋಂಕಿರುವ ಮಕ್ಕಳಲ್ಲಿ ಗೂರಲು ಪ್ರಚೋದನೆಗೊಳ್ಳಬಹುದು. ಆದ್ದರಿಂದ ಮಕ್ಕಳಿಗೆ ಸೋಂಕು ಬರದಂತೆ ಎಚ್ಚರವಹಿಸಿ ಗೂರಲು ಉದ್ರೇಕಿಸುವುದನ್ನು ಕಡಿಮೆ ಮಾಡಬಹುದು. ಆದಷ್ಟು ಜನಜಂಗುಳಿ

ಇರುವೆಡೆಗೆ ಮಕ್ಕಳನ್ನು ಕರೆದುಕೊಂಡು ಹೋಗಬಾರದು. ಮೊಲೆ ಹಾಲು ಕುಡಿದ ಮಕ್ಕಳಲ್ಲಿ ಅಲರ್ಜಿ ಬರುವ ಸಂಭವ ಕಡಿಮೆ. ಮಕ್ಕಳಿಗೆ ಕೊಡಿಸುವ ಲಸಿಕೆಗಳಿಂದ ಹಲವು ಸೋಂಕುಗಳನ್ನು ತಡೆಯಬಹುದು. ನೆಗಡಿ, ಕೆಮ್ಮಲು ಇರುವವರಿಂದ ಸಾಧ್ಯವಾದಷ್ಟು ಮಗುವನ್ನು ದೂರವಿರಿಸಬೇಕು.

೧೦. ಮಕ್ಕಳ ಯುಕ್ತ ಬೆಳವಣಿಗೆ ಮತ್ತು ಅದಕ್ಕಾಗಿ ಬೇಕಾಗುವ ಆಹಾರದ ಪೂರೈಕೆ ಬಗ್ಗೆ ನೆನಪಿಡಬೇಕು. ಇಂಥ ಮಕ್ಕಳಿಗೆ ಗೂರಲು ಬರುವುದೆಂದು ಹೆದರಿ ಹೆಚ್ಚು ಕಡಿಮೆ ಎಲ್ಲ ಆಹಾರ ಪದಾರ್ಥಗಳನ್ನು ಕೊಡದೇ ನಿಲ್ಲಿಸಿ ಬಿಡುವುದು ಸರಿಯಲ್ಲ. ನಿಮ್ಮ ಮಗುವಿಗೆ ಯಾವ ಆಹಾರ ಕೊಟ್ಟರೆ ಗೂರಲು ಉದ್ರೇಕವಾಗುತ್ತದೋ ಆ ನಿರ್ದಿಷ್ಟ ಪದಾರ್ಥಗಳನ್ನು ಮಾತ್ರ ಕೊಡದೇ ಇದ್ದರೆ ಸಾಕು. ಒಂದು ಮಗುವಿನ ಆರೋಗ್ಯಕ್ಕೆ ಮೊಸರು ಸರಿಹೋಗದಿದ್ದರೆ, ಇನ್ನೊಬ್ಬ ಮಗುವಿಗೆ ತುಪ್ಪ ಸರಿಹೋಗುವುದಿಲ್ಲ. ಇಬ್ಬರಿಗೂ ಎರಡೂ ನಿಲ್ಲಿಸುವುದರಲ್ಲಿ ಅರ್ಥವಿಲ್ಲ. ಆದರೂ, ಬಹಳ ಶೀತ ಪದಾರ್ಥಗಳಾದ ಐಸ್‌ಕ್ರೀಮ್, ಅತಿ ತಣ್ಣಗಿರುವ ಪಾನೀಯಗಳು, ಮಿಠಾಯಿಗಳನ್ನು ಕೊಡದಿರುವುದು ಕ್ಷೇಮ.

೧೧. ಮಗು ತಿಂದ ಆಹಾರ, ಕೊಂಚ ಗಂಟಲಿನ ಪದರಕ್ಕೆ .ಅಂಟಿ, ಗಂಟಲು ಸೋಂಕು, ಗಂಟಲು ಕೆರೆತ ಬರಬಹುದು. ಉಪ್ಪು ನೀರಿನಿಂದ ಗಂಟಲು ಮುಕ್ಕಳಿಸುವುದು ಮತ್ತು ಊಟದ ಅನಂತರ ತಪ್ಪದೇ ನೀರು ಕುಡಿಸುವ ಅಭ್ಯಾಸ ಮಾಡಿಸಿದರೆ ಗಂಟಲು ಕೆರೆತ, ಸೋಂಕು ತಡೆಯಲು ಅನುಕೂಲವಾಗುತ್ತದೆ.



ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

ಡಿಡಿಟಿ ಯನ್ನು ನಿಷೇಧಿಸದಿರಿ ?

ಮುಳಿಯ ರಾಘವಯ್ಯ
ನಂ.೩, ೮ನೇ ಬ್ಲಾಕ್
ಎಸ್ ಬಿಎಂ ಕಾಲನಿ ಶ್ರೀರಾಂಪುರ,
ಮೈಸೂರು-೫೭೦ ೦೨೩

ಏಪ್ರಿಲ್ ತಿಂಗಳಲ್ಲಿ ಒಂದು ಬುಧವಾರ, ಬೆಳಗಿನ ಕಾಲ ; ಇಂಡೊನೇಶ್ಯದ ಮಧ್ಯ ಜಾವಾದ ಗುಡ್ಡಗಾಡಿನ ಪ್ರದೇಶ. ಶಾಲೆಯಿಂದ ಮರಳುತ್ತಿದ್ದ ಮಗಳು ಓಕಾ ಪ್ರಿಯಾಂಟಿಯನ್ನು ನೋಡಿ, ಮನೆಯ ಹೊರಗೆ ಕೆಲಸದಲ್ಲಿ ತೊಡಗಿದ್ದ ಅವಳ ತಾಯಿ ಸುಮಿಯಾಟಿ ಕೇಳುತ್ತಾಳೆ, ''ಏನಾಗುತ್ತಾ ಇದೆ, ಮಗಳೇ?'' ಹದಿಮೂರು ವರ್ಷದ ಬಾಲೆ ಗೊಣಗುಟ್ಟುತ್ತಾಳೆ, ''ತಲೆ ಸುತ್ತುತ್ತಾ ಇದೆ. ಹೊಟ್ಟೆ ನೋಯುತ್ತಾ ಇದೆ ಅಮ್ಮಾ''.

ಹಳ್ಳಿಯ ಚಿಕ್ಕ ದವಾಖಾನೆಯಿಂದ ಕೊಡಿಸಿದ ಔಷಧಿ ಏನೂ ಪರಿಣಾಮ ಬೀರಲಿಲ್ಲ. ಶುಕ್ರವಾರದ ಹೊತ್ತಿಗೆ ಜ್ವರ ಉಲ್ಬಣಿಸಿತು. ಅವಳ ತಂದೆ ಜೋಲಿಲ್, ಬಾಡಿಗೆಯ ವಾಹನದಲ್ಲಿ ಅವಳನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲೆಣಿಸಿದ. ವಾಹನ ಹಳ್ಳಿಯ ಗಡಿಯನ್ನು ದಾಟುತ್ತಿದ್ದ ಹಾಗೆ ಓಕಾ, ಅವಳ ಹೆತ್ತವರ ಮಡಿಲಲ್ಲೇ ಕೊನೆಯುಸಿರೆಳೆದಳು.

ಸೊಳ್ಳೆಯ ಕಡಿತದಿಂದ ಓಕಾ ಮಲೇರಿಯಾ ಜ್ವರಕ್ಕೆ ತುತ್ತಾಗಿದ್ದಳು. ಜೋಲಿಲ್, ಸುಮಿಯಾಟಿಯರ ಮಲೇರಿಯಾಕ್ಕೆ ಬಲಿಯಾದ ಮಕ್ಕಳಲ್ಲಿ ಓಕಾ ಮೂರನೆಯವಳು.

ಪ್ರಗತಿಶೀಲ ದೇಶಗಳಲ್ಲಿ ಅಸಂಖ್ಯಾತ ಕುಟುಂಬಗಳು ಇದೇ ರೀತಿಯ, ಪ್ರಾಯಶಃ ನಿವಾರಣೀಯ, ದುರಂತಗಳನ್ನು ಅನುಭವಿಸುತ್ತಿವೆ. ಏಕೆಂದರೆ, ಇತ್ತೀಚೆಗಿನವರೆಗೆ ನಿಯಂತ್ರಣದಲ್ಲಿದ್ದ ಮಲೇರಿಯಾ ಪುನಃ ಹೆಡೆಯೆತ್ತಲಾರಂಭಿಸಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿ ವರ್ಷ ಜಗತ್ತಿನಾದ್ಯಂತ ೩೦ ರಿಂದ ೫೦ ಕೋಟಿ ಜನರು ಮಲೇರಿಯಾರೋಗಕ್ಕೆ ತುತ್ತಾಗುತ್ತಿದ್ದಾರೆ. ದಿನಗಳೆದಂತೆ ಕೆಲವೆಡೆಗಳಲ್ಲಿ ಈ ಸಂಖ್ಯೆ ವರ್ಷಂಪ್ರತಿ ಶೇಕಡಾ ೨೦ರಷ್ಟು ಏರುತ್ತ ಇದೆ. ಉದಾಹರಣೆಗಾಗಿ, ಪೆರು ರಾಷ್ಟ್ರದಲ್ಲಿ ೧೯೯೦-೯೬ರ ಅವಧಿಯಲ್ಲಿ ಮಲೇರಿಯಾ ಸಂತ್ರಸ್ತರ ಸಂಖ್ಯೆ ಏಳುಪಟ್ಟು ಏರಿತ್ತು. ಒಂದು ಪ್ರದೇಶದಲ್ಲಂತೂ ಪ್ರಾಣಾಂತಿಕ ಮಲೇರಿಯಾಗ್ರಸ್ತರಾದವರ ಸಂಖ್ಯೆ ೧೪೦ ರಿಂದ ೩೬,೦೦೦ಕ್ಕೆ ಏರಿತ್ತು! ದಕ್ಷಿಣ ಆಫ್ರಿಕಾದಲ್ಲಿ ೧೯೯೫ರಲ್ಲಿ ೮೭೫೦ ಮಲೇರಿಯಾ ರೋಗಿಗಳಲ್ಲಿ ೪೪ ಜನರು ಅಸುನೀಗಿದ್ದರೆ ೧೯೯೯ರಲ್ಲಿ ಪೀಡಿತರಾದವರ ಸಂಖ್ಯೆ ೫೧,೦೦೦ಕ್ಕೆ ಹಾಗೂ ಮರಣ ಹೊಂದಿದವರ ಸಂಖ್ಯೆ ೪೯೩ಕ್ಕೆ ಏರಿತ್ತು. ಇಂಡೋನೇಶ್ಯಾದಲ್ಲಿ ಓಕಾ ಪ್ರಿಯಾಂಟಿಯ ಮನೆಯ ಸಮೀಪದ ಒಂದು ಹಳ್ಳಿಯಲ್ಲಿ ೧೯೯೦ರಲ್ಲಿ ಸುಮಾರಿಗೆ ಪ್ರತಿವರ್ಷ ಸುಮಾರು ೧೫ ಜನರು ಮಲೇರಿಯಾ ಪೀಡಿತರಾಗುತ್ತಿದ್ದರು. ೧೯೯೯ರಲ್ಲಿ ಅವರ ಸಂಖ್ಯೆ ೯೨೧ ಕ್ಕೆ ಹಿಗ್ಗಿತು.

ಪಾಶ್ಚಾತ್ಯ ದೇಶೀಯರೂ ಈ ಅಪಾಯದಿಂದ ಹೊರತಾಗಿಲ್ಲ. ಪ್ರಗತಿಶೀಲ ರಾಷ್ಟ್ರಗಳಿಗೆ ಪ್ರವಾಸ ಹೋಗುವವರಲ್ಲಿ ಕೆಲವರು ಮಲೇರಿಯಾಗ್ರಸ್ತರಾಗುವುದಲ್ಲದೆ, ಕೆಲವೊಮ್ಮೆ ಉಷ್ಣವಲಯದಿಂದ ಯೂರೋಪಿಗೆ ಹಿಂದಿರುಗುವ ವಿಮಾನಗಳಲ್ಲಿ ಮಲೇರಿಯಾ ರೋಗವಾಹಕ ಸೊಳ್ಳೆಗಳು 'ಆಮದು' ಆಗುವುದೂ ಉಂಟು!

ಮಲೇರಿಯಾ ಮರುಕಳಿಸುವುದಕ್ಕೆ

ಡಿಸೆಂಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾನ್ ಡೈಸನ್‌ರವರ ''ಡಿಡಿಟಿ ಶುಡ್ ನಾಟ್ ಬಿ ಬ್ಯಾನ್ಡ್ ಎನ್ನುವ ಲೇಖನದ ಕನ್ನಡ ಅನುವಾದ

ಕಾರಣಗಳು ಅನೇಕವಿವೆ ಎಂದು ವಿಜ್ಞಾನಿಗಳ ಹಾಗೂ ಆರೋಗ್ಯತಜ್ಞರ ಅಂಬೋಣ. ಮಲೇರಿಯಾ ಪರೋಪಜೀವಿಗಳಲ್ಲಿ ಔಷಧಿಗಳನ್ನು ಪ್ರತಿರೋಧಿಸುವ ಶಕ್ತಿ ಹೆಚ್ಚುತ್ತಿರುವುದೂ ಅವುಗಳಲ್ಲಿ ಒಂದು. ಇವೆಲ್ಲಕ್ಕೂ ಮಿಗಿಲಾದ ಕಾರಣವೊಂದಿದೆ ಎನ್ನುತ್ತಾರೆ ಅಮೆರಿಕಾದ ಉಷ್ಣವಲಯ ರೋಗತಜ್ಞ ಡಾನ್ ರಾಬರ್ಟ್ಸ್.

''ವರ್ಷಾನುಗಟ್ಟಳೆಯಿಂದ ಮಲೇರಿಯಾ ರೋಗಮುಕ್ತವಾದ ಮುಂದುವರಿದ ರಾಷ್ಟ್ರಗಳು, ಡಿಡಿಟಿಯನ್ನು ಬಳಸದಿರುವಂತೆ ಉಷ್ಣವಲಯದ ರೋಗಪೀಡಿತ ದೇಶಗಳ ಮೇಲೆ ಒತ್ತಡ ಹೇರುತ್ತಿವೆ. ಯಾವ ದೇಶಗಳು ಡಿಡಿಟಿಯ ಬಳಕೆಯನ್ನು ನಿಲ್ಲಿಸಿವೆಯೋ, ಅಲ್ಲಿ ಮಲೇರಿಯಾ ಮೇರೆ ಮೀರಿ ಉತ್ಕರ್ಷ ಹೊಂದುತ್ತಿರುವುದು ಕಂಡು ಬಂದಿದೆ.'' ಆದರೂ, ವಿಶ್ವಸಂಸ್ಥೆಯ ಪರಿಸರಕಾರ್ಯಕ್ರಮ ಈಗೊಂದು ಮಹತ್ವವಾದ ಹಾಗೂ ವಾದಗ್ರಸ್ತವಾದ ನಿರ್ಣಯವನ್ನು ಕೈಗೊಳ್ಳಲಿದೆ.

ಕೀಟಮಾರಕ: ಡಿಡಿಟಿ ಒಂದು ಅಚ್ಚರಿಯ ರಾಸಾಯನಿಕ ಪದಾರ್ಥ ಎಂದು ತುಂಬ ಕಾಲದಿಂದ ನಂಬಿಕೆಯಿತ್ತು. ಸ್ವಿಟ್ಜರ್ಲ್ಯಾಂಡಿನ ರಸಾಯನವಿಜ್ಞಾನಿ, ಪಾಲ್ ಹರ್ಮನ್ ಮ್ಯುಲ್ಲರ್, ದ್ವಿತೀಯ ವಿಶ್ವಸಮರದ ಪೂರ್ವದಲ್ಲಿ ಅದರ ಒಂದು ವಿಶೇಷ ಗುಣವನ್ನು ಗಮನಿಸಿದಾಗ ಡಿಡಿಟಿಯ ಕಥೆ ಪ್ರಾರಂಭವಾಯಿತು ಎನ್ನಬಹುದು. ಈ ವಸ್ತುವನ್ನು (ಡಿಡಿಟಿ-ಡೈಕ್ಲೋರೋ ಡೈಫಿನೈಲ್ ಟ್ರೈಕ್ಲೋರೋ ಈಥೇನ್) ಪರೀಕ್ಷಿಸಿದ ಒಂದು ಗಾಜಿನ ಪಾತ್ರೆಯನ್ನು ಎಷ್ಟು ಚೆನ್ನಾಗಿ, ಎಷ್ಟು ಸಲ ಸ್ವಚ್ಛ ಮಾಡಿದರೂ, ಅದರೊಳಕ್ಕೆ ಬಂದ ನೊಣಗಳು ಗಾಜಿನ ಒಳಮೈಯನ್ನು ಮುಟ್ಟಿದೊಡನೆಯೇ ಸಾಯುತ್ತಿದ್ದುವು. ಇದರಿಂದ ಡಿಡಿಟಿಯ ಪ್ರಭಾವ ದೀರ್ಘಕಾಲಿಕವೆಂದೂ, ಕೀಟಗಳಿಗೆ ಅತ್ಯಂತ ಮಾರಕವೆಂದೂ, ಆದರೆ ಮಾನವನಿಗೆ ನಿರಪಾಯಕಾರಿಯೆಂದೂ, ಸಿದ್ಧವಾಯಿತು. ವಿಶ್ವಸಮರದ ಸಂದರ್ಭದಲ್ಲಿ ಮಿತ್ರರಾಷ್ಟ್ರಗಳ ಸೈನಿಕರನ್ನು ಮಲೇರಿಯಾದಿಂದ ರಕ್ಷಿಸುವ ಸಲುವಾಗಿ ಅವರು ಆಕ್ರಮಿಸುತ್ತಿದ್ದ ಸ್ಥಳಗಳ ಮೇಲೆ ಮುಂಚಿತವಾಗಿಯೇ ಡಿಡಿಟಿಯನ್ನು ಸಿಂಪಡಿಸುವ ಕೆಲಸ ನಡೆಯುತ್ತಿತ್ತು. ಹೇನುಗಳ ನಾಶಕ್ಕಾಗಿ ಮೈ ಮೇಲೆ ಪೂಸಿಕೊಳ್ಳಲು ಡಿಡಿಟಿ ಪುಡಿಯನ್ನು ಅಮೆರಿಕಾದ ಸೈನಿಕರಿಗೆ ನೀಡಲಾಗುತ್ತಿತ್ತು. ೧೯೪೪ರಲ್ಲಿ, ಟೈಫ್ಯಾಡ್ ರೋಗಕಾರಕ ಹೇನುಗಳ ಧ್ವಂಸಕ್ಕಾಗಿ, ಇಟಲಿಯ ನೇಪಲ್ಸ್ ನಗರದಾದ್ಯಂತ ಡಿಡಿಟಿ ಪುಡಿಯನ್ನು ಸಿಂಪಡಿಸ ಲಾಗಿತ್ತು. ಡಿಡಿಟಿಯ ಉಪಜ್ಞೆಗಾಗಿ ಮ್ಯುಲ್ಲರ್ ಅವರಿಗೆ ೧೯೪೮ರಲ್ಲಿ ನೋಬೆಲ್ ಪುರಸ್ಕಾರವೂ ಸಿಕ್ಕಿತು.

ವಿಶ್ವಸಮರದ ಬಳಿಕ ಹಳದಿಜ್ವರ, ಟೈಫ್ಯಾಡ್, ಆನೆಕಾಲು ಮುಂತಾದ ರೋಗಗಳ ನಿಯಂತ್ರಣಕ್ಕೆ ಪ್ರಪಂಚಾದ್ಯಂತ ಡಿಡಿಟಿಯನ್ನು ಬಳಸಲಾಯಿತು. ಎಲ್ಲಕ್ಕೂ ಮಿಗಿಲಾಗಿ, ಮಲೇರಿಯಾ ಪರೋಪಜೀವಿವಾಹಕಗಳಾದ, ೬೦ಕ್ಕೂ ಮಿಕ್ಕಿದ ಜಾತಿಯ ಸೊಳ್ಳೆಗಳ ನಿರ್ಮೂಲನಕ್ಕಾಗಿ ಅದನ್ನು ಉಪಯೋಗಿಸ ಲಾಗುತ್ತಿತ್ತು.

ಸ್ಪರ್ಶಮಾತ್ರದಿಂದಲೇ ಡಿಡಿಟಿ ಸೊಳ್ಳೆಗಳನ್ನು ನಾಶ ಮಾಡುತ್ತದೆ. ಜವುಗು ಪ್ರದೇಶಗಳನ್ನು ಬಸಿಯುವುದೇ ಮೊದಲಾದ ಇತರ ಉಪಾಯಗಳೂ ಸೇರಿದಂತೆ ಡಿಡಿಟಿ ಸಿಂಪಡಿಸುವ ಕಾರ್ಯಕ್ರಮದಿಂದಾಗಿ, ಅಮೆರಿಕ, ಯೂರೋಪ್, ಜಪಾನ್, ಆಸ್ಟ್ರೇಲಿಯಾ ಮುಂತಾದ ಮುಂದುವರಿದ ಪ್ರದೇಶಗಳಲ್ಲಿ ಮಲೇರಿಯಾ ರೋಗ ಹೇಳಹೆಸರಿಲ್ಲದಂತೆ ನಿರ್ಮೂಲನಗೊಳಿಸಲ್ಪಟ್ಟಿದೆ.

ಯಾವ ದೇಶಗಳಲ್ಲಿ ಮಲೇರಿಯಾ ಇನ್ನೂ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿಲ್ಲವೋ, ಅಲ್ಲಿಯೂ ಡಿಡಿಟಿ ಸಾಕಷ್ಟು ಮಟ್ಟಿಗೆ

ಪರಿಣಾಮ ಬೀರಿದೆ. ಭಾರತದಲ್ಲಿ ಪ್ರತಿವರ್ಷ ಮಲೇರಿಯಾ ರೋಗದಿಂದ ಸಾಯುತ್ತಿದ್ದವರ ಸಂಖ್ಯೆ ೮,೦೦,೦೦೦ ದಿಂದ ೧೯೬೦ರ ದಶಕದ ಅಂತ್ಯದ ವೇಳೆಗೆ ತಾತ್ವಿಕವಾಗಿ ಸೊನ್ನೆಗೆ ಇಳಿದಿತ್ತು. ಶ್ರೀಲಂಕಾದಲ್ಲಿ, ಮಲೇರಿಯಾ ಗ್ರಸ್ತರ ಸಂಖ್ಯೆ ೨೮ ಲಕ್ಷದಿಂದ ಕೇವಲ ೧೭ಕ್ಕೆ ಇಳಿಯಿತು. ಒಕಾಳ ತಂದೆತಾಯಿಯರು ಚಿಕ್ಕವರಾಗಿದ್ದಾಗ ಇಂಡೊನೇಶ್ಯಾದ ಕೆಲವೆಡೆಗಳಲ್ಲಿ ಒಟ್ಟು ಜನಸಂಖ್ಯೆಯ ಕಾಲುಭಾಗದಷ್ಟು ಜನರು ಮಲೇರಿಯಾದಿಂದ ಪೀಡಿತರಾಗಿರುತ್ತಿದ್ದರು. ವರ್ಷದಲ್ಲಿ ಎರಡು ಬಾರಿ ಡಿಡಿಟಿ ಸಿಂಪಡಿಸುತ್ತಿದ್ದುದರ ಫಲವಾಗಿ ಈ ಪ್ರಮಾಣ ನೂರರಲ್ಲಿ ಒಂದರಷ್ಟಕ್ಕೆ ಇಳಿಯಿತು.

''ಮಾನವ, ಡಿಡಿಟಿಗೆ ಋಣಿಯಾಗಿರುವಷ್ಟು ಬೇರಾವ ರಾಸಾಯನಿಕ ಪದಾರ್ಥಕ್ಕೂ ಋಣಿಯಾಗಿಲ್ಲ'' ಎಂದು ೧೯೭೦ರಲ್ಲಿ ಅಮೆರಿಕಾದ ರಾಷ್ಟ್ರೀಯ ವಿಜ್ಞಾನ ಪರಿಷತ್ತು ಹೇಳಿಕೆ ಕೊಟ್ಟಿತ್ತು. ಮಲೇರಿಯಾ ಸಂಬಂಧಿತವಾದ ಮಿಲಿಯಗಟ್ಟಲೆ ಸಾವುಗಳನ್ನು ಡಿಡಿಟಿ ತಪ್ಪಿಸಿದೆ ಎಂದೂ ಪರಿಷತ್ತು ವರದಿ ಮಾಡಿತ್ತು.

ಸೊಳ್ಳೆಗಳು ಡಿಡಿಟಿ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಬಹುದು. ಆದರೂ ಮನೆಗಳಲ್ಲಿ ಒಳಗೋಡೆಗಳ ಮೇಲಕ್ಕೆ ಡಿಡಿಟಿಯ ಸಿಂಪಡಿಕೆಯಿಂದ, ಬಹುತೇಕವಾಗಿ ಸೊಳ್ಳೆಗಳ ಹಾವಳಿ ನಿವಾರಣೆಯಾಗುತ್ತದೆ. ಒಳಗೆ ನುಗ್ಗಿದ ಸೊಳ್ಳೆಗಳು ಬೇಗನೇ ಹೊರಕ್ಕೆ ಹಾರಿಹೋಗುತ್ತವೆ. ಅಮೆಜಾನ್ ಪ್ರದೇಶದಲ್ಲಿ ನಡೆಸಿದ ಒಂದು ಪ್ರಯೋಗದಲ್ಲಿ, ಸೊಳ್ಳೆಯ ಕಡಿತ ಇತರ ಗುಡಿಸಲುಗಳಿಂದ ಡಿಡಿಟಿ ಸಿಂಪಡಿಸಿದ ಗುಡಿಸಲುಗಳಲ್ಲಿ ಶೇಕಡಾ ೯೭ರಷ್ಟು ಕಡಿಮೆಯಿತ್ತು ಎಂದು ಕಂಡು ಬಂದಿದೆ.

ಬೇಸಾಯದಲ್ಲಿ ನಿಷೇಧ : ಮಲೇರಿಯಾ ವಿರುದ್ಧ ಡಿಡಿಟಿ ಕಾರ್ಯಾಚರಣೆ ನಡೆಯುತ್ತಿದ್ದ ಕಾಲದಲ್ಲಿ, ಬೆಳೆಗಳನ್ನು ನಾಶಪಡಿಸುವ ಕೀಟಗಳ ನಿರ್ಮೂಲನೆಗಾಗಿ ರೈತರು ಡಿಡಿಟಿ ಪುಡಿಯನ್ನು ಅಪಾರವಾಗಿ ಬಳಸಲಾರಂಭಿಸಿದರು. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗಬಹುದೇನೋ ಎನ್ನುವ ಶಂಕೆ ಕೆಲವರಲ್ಲಿ ತಲೆದೋರಿತು. ಏಕೆಂದರೆ ಮಾನವನಾದಿಯಾಗಿ ಎಲ್ಲ ಜೀವಿಗಳ ಮೇದಸ್ಸಿನಲ್ಲಿ ಅಲ್ಪಪ್ರಮಾಣದ ಡಿಡಿಟಿಯ ಅವಶೇಷ ಕಂಡು ಬರಲು ಪ್ರಾರಂಭವಾಯಿತು. ಹಲವಾರು ಪಕ್ಷಿಜಾತಿಗಳ ಸಂಖ್ಯೆಯಲ್ಲಿ ಕಂಡುಬಂದ ಇಳಿಮುಖಕ್ಕೆ ಡಿಡಿಟಿಯೇ ಕಾರಣವಾಗಿರಬಹುದು ಎನ್ನುವ ಶಂಕೆ ಇನ್ನೂ ಹೆಚ್ಚಿನ ಆತಂಕಕ್ಕೆ ಎಡೆಮಾಡಿತು. ಬೇಸಾಯದಲ್ಲಿ ಡಿಡಿಟಿಯ ಉಪಯೋಗವನ್ನು ಅಮೆರಿಕಾ ೧೯೭೨ರಲ್ಲಿ ನಿಷೇಧಿಸಿತು. ಇತರ ಮುಂದುವರಿದ ರಾಷ್ಟ್ರಗಳೂ ಸಹ ಅಂಥ ನಿಷೇಧವನ್ನು ಜಾರಿಗೆ ತಂದುವು. ಭಾರತದಲ್ಲಿಯೂ, ವ್ಯವಸಾಯ ಕ್ಷೇತ್ರದಲ್ಲಿ ಡಿಡಿಟಿಯ ನಿಷೇಧ ಜಾರಿಯಲ್ಲಿದ್ದರೂ, ಮಲೇರಿಯಾ ನಿಯಂತ್ರಣಕ್ಕೆ ಮಾತ್ರ ಮಿತಪ್ರಮಾಣದಲ್ಲಿ ಅದು ಇನ್ನೂ ಉಪಯೋಗಿಸಲ್ಪಡುತ್ತಿದೆ.

ಸುಮಾರು ೨೫ ದೇಶಗಳಲ್ಲಿ ಮಲೇರಿಯಾ ನಿಯಂತ್ರಣಕ್ಕಾಗಿ ಈಗಲೂ ಡಿಡಿಟಿ ಬಳಸಲ್ಪಡುತ್ತಿದೆ. ಆದರೆ ಇದಕ್ಕಾಗಿ ಅಗತ್ಯವಿರುವ ಪ್ರಮಾಣವು, ವ್ಯವಸಾಯ ಕ್ಷೇತ್ರದಲ್ಲಿ ಬೇಕಾಗುವುದರಿಂದ ಎಷ್ಟೋ ಕಡಿಮೆ ಎಂಬುದು ಗಮನಿಸಬೇಕಾದ ಸಂಗತಿ. ಹತ್ತಿ ಬೆಳೆಯ ಒಂದು ಚಿಕ್ಕ ಗದ್ದೆಗೆ ಸಿಂಪಡಿಸಲು ಸುಮಾರು ಒಂದು ಟನ್ ಡಿಡಿಟಿ ಬೇಕಾದರೆ, ಮನೆಯ ಒಳಗೋಡೆಯ ಮೇಲೆ ಸಿಂಪಡಿಸಲು ಬೇಕಾಗುವುದು, ಚದರ ಮೀಟರಿಗೆ ಎರಡು ಗ್ರಾಮ್ ಮಾತ್ರ. ೪೦೦ ಹೆಕ್ಟೇರ್ ವಿಸ್ತೀರ್ಣದ ಹತ್ತಿಯ ಗದ್ದೆಯಲ್ಲಿ ಒಂದು ಫಸಲಿನ ಕಾಲದಲ್ಲಿ ಕೀಟನಾಶಕವಾಗಿ ಬಳಸುವ ಡಿಡಿಟಿಯ ಪ್ರಮಾಣ,

ಗಯಾನಾದಂಥ ದೇಶದಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯಕ್ಕಾದರೆ ಒಂದು ವರ್ಷಕ್ಕೆ ಸಾಕಾಗುತ್ತದೆ.

ಹೀಗಿದ್ದರೂ ಅಮೆರಿಕಾ, ಕೆನಡಾ ಮತ್ತು ಯೂರೋಪಿನಲ್ಲಿರುವ ಸಹಾಯ ಸಂಸ್ಥೆಗಳು, ವಿಶ್ವಸಂಸ್ಥೆ, ವಿಶ್ವಬ್ಯಾಂಕ್ ಮುಂತಾದ ಅಂತಾರಾಷ್ಟ್ರೀಯ ಸಂಸ್ಥೆಗಳು ಡಿಡಿಟಿಯನ್ನು ಯಾವ ಕಾರಣಕ್ಕೂ ಬಳಸಬೇಡಿ ಎಂದು ಪ್ರಗತಿಶೀಲ ರಾಷ್ಟ್ರಗಳನ್ನು ಒತ್ತಾಯಿಸುತ್ತಿವೆ. ಇದರ ಪರಿಣಾಮ ? ಪ್ರೊಫೆಸರ್ ಡಾನ್ ರಾಬರ್ಟ್ಸ್ ಹೇಳುವಂತೆ, ಕಳೆದ ಒಂದು ದಶಕದಲ್ಲಿ ಬ್ರೆಜಿಲ್, ಬೊಲೀವಿಯಾ ಮತ್ತು ಪೆರು ರಾಷ್ಟ್ರಗಳಲ್ಲಿ ಶೇಕಡಾ ೯೦ರಷ್ಟು ಮಲೇರಿಯಾ ರೋಗಪೀಡಿತರ ಸಂಖ್ಯೆ ಹೆಚ್ಚಾಗಿದ್ದರೆ, ಗಾಯನಾದಲ್ಲಿ ಶೇಕಡಾ ೮೦ರಷ್ಟು ಏರಿದೆ. ''ಇಕ್ವೆಡಾರ್‌ನಲ್ಲಿ ಮಾತ್ರ ತತ್ಕಾಲದ ಮಟ್ಟಿಗೆ ಡಿಡಿಟಿಯ ಪ್ರಯೋಗವನ್ನು ಏರಿಸಿದ ಪರಿಣಾಮವಾಗಿ ಮಲೇರಿಯಾ ಶೇಕಡಾ ೬೦ರಷ್ಟು ಇಳಿಮುಖವಾಯಿತು'' ಎನ್ನುತ್ತಾರೆ ರಾಬರ್ಟ್ಸ್.

ಡಿಡಿಟಿಗೆ ಯೋಗ್ಯಪರ್ಯಾಯವಾಗಿ ಅಲ್ಪಬೆಲೆಯ ಇತರ ಪದಾರ್ಥಗಳ ಅಭಾವವೇ ಈಗಿರುವ ಮುಖ್ಯವಾದ ಸಮಸ್ಯೆ. ಮಲೇರಿಯಾದ ವಿರುದ್ಧ ಪರಿಣಾಮಕಾರಿಯಾದ ಲಸಿಕೆಯೂ ಲಭ್ಯವಿಲ್ಲ. ಸೊಳ್ಳೆಗಳು ಮಲೇರಿಯಾ ಪರೋಪಜೀವಿಯ ವಾಹಕಗಳಾಗದಂತೆ ಆನುವಂಶಿಕವಾಗಿ ತಡೆಯಲು ವಿಜ್ಞಾನಿಗಳು ಪ್ರಯೋಗಗಳನ್ನೇನೋ ನಡೆಸಿದ್ದಾರೆ. ಆದರೆ ಈ ದಿಸೆಯಲ್ಲಿ ಇನ್ನೂ ನಿರೀಕ್ಷಿತ ಜಯ ಲಭಿಸಿಲ್ಲ.

ಕೃತಕ ಪೈರೆತ್ರಾಯಿಡ್‌ಗಳಂಥ ಇತರ ಕೀಟನಾಶಕಗಳು ಡಿಡಿಟಿಯಷ್ಟು ಫಲಕಾರಿಯಲ್ಲ ಮತ್ತು ಹೆಚ್ಚು ತುಟ್ಟಿ ಕೂಡ. ೩೮ ವರ್ಷಕಾಲದ ಬಳಕೆಯ ಅನಂತರ, ಇಂಡೊನೇಶ್ಯಾದಲ್ಲಿ ೧೯೮೮ರಲ್ಲಿ ಡಿಡಿಟಿ ಸಿಂಪಡಿಕೆಯನ್ನು ನಿಲ್ಲಿಸಲಾಯಿತು. ಅದನ್ನು ಬಿಟ್ಟರೆ, ಉಳಿದ ಕೀಟನಾಶಕಗಳಲ್ಲಿ ಅತ್ಯುತ್ತಮವಾದುದರ ಬೆಲೆ ಐದುಪಟ್ಟು ಹೆಚ್ಚಾದುದರಿಂದ ಮಲೇರಿಯಾ ನಿಯಂತ್ರಣ ಕಾರ್ಯಕ್ರಮವನ್ನೇ ಕೈಬಿಡಲಾಯಿತು.

ಅಮೆರಿಕಾದ ಮಲೇರಿಯಾ ತಜ್ಞ ಕೆವಿನ್ ಬೇಯರ್ಡ್, ಚಿಕಿತ್ಸಾ ಕಾರ್ಯಕ್ರಮವನ್ನು ಸುರುಮಾಡಲು ೧೯೯೫ರಲ್ಲಿ, ಒಕಾ ತೀರಿಕೊಂಡ ಜಾವಾ ಪ್ರದೇಶದ ಮೆನ್ಸೊ್ರೀ ಹಿಲ್ಸ್‌ಗೆ ಬಂದ ಸಮಯದಲ್ಲಿ ಅವರಿಗೆ ೨೫ ಮಲೇರಿಯಾ ಪೀಡಿತರನ್ನು ಪತ್ತೆಹಚ್ಚಲು ಒಂದು ತಿಂಗಳ ಸಮಯ ಬೇಕಾಯಿತು. ಆದರೆ ಈ ವರ್ಷದ ಆದಿಯಲ್ಲಿ ಅವರಿಗೆ ಒಂದೇ ದಿನದಲ್ಲಿ ೭೦ ಮಲೇರಿಯಾಗ್ರಸ್ತರು ಸಿಕ್ಕಿದರು. ''ಈ ೧೦ ಕೋಟಿ ಜನರು ತುಂಬಿದ ಜನನಿಬಿಡ ದ್ವೀಪದಲ್ಲಿ ಮಲೇರಿಯಾ ನಿಯಂತ್ರಣ ಹೇಗೆ ಸಾಧ್ಯ ಎಂಬುದು ಮುಖ್ಯವಾದ ಒಂದು ಸಮಸ್ಯೆ. ನಿಯಂತ್ರಣ ಸಾಧ್ಯವಾಗದಿದ್ದಲ್ಲಿ ಅಸಂಖ್ಯಾತ ಜನರು ಮರಣ ಹೊಂದುವ ಸಂಭವವಿದೆ. ಹಿಂದಿನ ದಾಖಲೆಯನ್ನು ನೋಡಿದರೆ, ಅವರನ್ನು ಉಳಿಸಲು ಡಿಡಿಟಿಗೆ ಮಾತ್ರ ಸಾಧ್ಯವಿದೆ ಎಂದು ತೋರುತ್ತದೆ'' ಎನ್ನುತ್ತಾರೆ ಬೇಯರ್ಡ್.

ಯಾರೊಬ್ಬರೂ ಸುರಕ್ಷಿತರಲ್ಲ : ಡಿಡಿಟಿ ಮನುಷ್ಯನ ಆರೋಗ್ಯಕ್ಕೆ ಸಂಚಕಾರಿ ಎಂದು ಭಾವಿಸಿರುವ ಹಲವಾರು ಪರಿಸರವಾದಿ ದಳಗಳು ಅದನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಅಭಿಪ್ರಾಯಪಡುತ್ತವೆ. ಉದಾಹರಣೆಗಾಗಿ 'ವಿಶ್ವ ಪ್ರಕೃತಿ ನಿಧಿ'ಯ ಒಬ್ಬ ಸದಸ್ಯ ಕ್ಲಿಫ್ಟನ್ ಕರ್ಟಿಸ್‌ರವರ ಅಭಿಪ್ರಾಯ, ''ವಿಶ್ವದಲ್ಲಿ ಎಲ್ಲೇ ಆಗಲಿ, ಡಿಡಿಟಿ ಇರುವವರೆಗೆ ನಮ್ಮಲ್ಲಿ ಯಾರೊಬ್ಬರೂ ಸುರಕ್ಷಿತರಲ್ಲ'' ಎಂದು. ಆದರೆ ಡಿಡಿಟಿಯ ಚರಿತ್ರೆಯನ್ನು ಪರಿಶೀಲಿಸಿ ಅಮೆರಿಕ ಹಾಗೂ ಯೂರೋಪಿನ ನಿವಾಸಿಗಳು ಹಲವಾರು

ವರ್ಷಗಳಿಂದ ಡಿಡಿಟಿಯನ್ನು ಅನೈಚ್ಛಿಕವಾಗಿ ತಮ್ಮ ಆಹಾರದೊಂದಿಗೆ ದಿನನಿತ್ಯವೂ ಸೇವಿಸುತ್ತ ಬಂದಿದ್ದಾರೆ. ಏಕೆಂದರೆ ಕಳೆದ ೨೦ ವರ್ಷಗಳಲ್ಲಿ ಬೇಸಾಯದ ಪಸಲಿನ ರಕ್ಷಣೆಗೋಸ್ಕರ ಅಮೆರಿಕವು ವರ್ಷಂಪ್ರತಿ ೬೦,೦೦೦ ಟನ್ ಡಿಡಿಟಿಯನ್ನು ಬಳಸುತ್ತ ಬಂದಿದೆ. ಅಮೆರಿಕದ ಹಲವಾರು ಪಟ್ಟಣದ ರಸ್ತೆಗಳಲ್ಲಿ, ಸೈಕಲ್ ಸವಾರಿ ಮಾಡುವ ಮಕ್ಕಳು, ಸೊಳ್ಳೆಗಳ ನಾಶಕ್ಕಾಗಿ ಸಿಂಪಡಿಸುತ್ತಿದ್ದ ಡಿಡಿಟಿಯ ಧೂಮಸ್ತೋಮಗಳೊಳಗೆ ಹಾಯ್ದು ಬರುವುದು ಸರ್ವೇಸಾಮಾನ್ಯವಾಗಿತ್ತು. ಏಷ್ಯಾ, ದಕ್ಷಿಣ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ (ದಕ್ಷಿಣ ಅಮೆರಿಕಾ) ಖಂಡಗಳ ಲಕ್ಷಾಂತರ ಮನೆಗಳಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ಪ್ರತಿವರ್ಷ ಒಂದೆರಡು ಬಾರಿಯಷ್ಟಾದರೂ ಡಿಡಿಟಿ ಸಿಂಪಡಿಕೆ ನಡೆಯಲ್ಪಟ್ಟಿದೆ. ಇಷ್ಟೆಲ್ಲ ಆದರೂ ಇದರಿಂದಾಗಿ ಯಾರ ಆರೋಗ್ಯಕ್ಕೂ ಧಕ್ಕೆ ಆದ ವರದಿಗಳು ಇದುವರೆಗೆ ಬಂದಿಲ್ಲ. ''ತಜ್ಞರು ಕೂಲಂಕಷವಾಗಿ ತನಿಖೆ ನಡೆಸಿದರೂ ಇನ್ನೂ ಯಾವ ಪ್ರತಿಕೂಲ ಪರಿಣಾಮಗಳೂ ಕಂಡು ಬಂದಿಲ್ಲ'' ಎನ್ನುತ್ತಾರೆ ಅಮೆರಿಕದ ಅಣುಜೀವಶಾಸ್ತ್ರಜ್ಞೆ ಹಾಗೂ ಅಂತಾರಾಷ್ಟ್ರೀಯ ಮಲೇರಿಯಾ ಪ್ರತಿಷ್ಠಾನದ ಅಧ್ಯಕ್ಷೆ ಮೇರಿ ಗೆಲಿನ್‌ಸ್ಕಿ.

''ಮಲೇರಿಯಾ ಸೊಳ್ಳೆಗಳ ನಾಶಕ್ಕಾಗಿ ಮನೆಗಳಲ್ಲಿ ಬಳಸಿದ ಡಿಡಿಟಿಯಿಂದಾಗಿ ಮನುಷ್ಯರಿಗೆ ಯಾವುದೇ ರೀತಿಯ ಹಾನಿ ಸಂಭವಿಸಿದೆ ಎನ್ನುವುದಕ್ಕೆ ಇದುವರೆಗೆ ಮನವರಿಕೆಯಾಗುವಂಥ ಯಾವ ಪುರಾವೆಯೂ ದೊರಕಿಲ್ಲ'' ಎನ್ನುತ್ತಾರೆ ಲಂಡನ್‌ನಲ್ಲಿರುವ ಆರೋಗ್ಯವಿಜ್ಞಾನ ಹಾಗೂ ಉಷ್ಣ ವಲಯದ ವೈದ್ಯಕೀಯ ಶಾಲೆಯ ಕ್ರಿಸ್ ಕರ್ಟಿಸ್.

ಡಿಡಿಟಿ ಮನುಷ್ಯನಿಗೆ ಹಾನಿಕಾರಕ ಎನ್ನುವುದು ವೈಜ್ಞಾನಿಕ ಅಧ್ಯಯನದಿಂದ ಸಿದ್ಧವಾಗಿದೆ ಎಂದು ಅದರ ವಿರೋಧಿಗಳು ವಾದಿಸಿದರೂ, ಅವರು ಮುಂದಿಡುವ ಸಾಕ್ಷಿಪುರಾವೆಗಳು ಅನಿಶ್ಚಿತ ಹಾಗೂ ವಿರೋಧಾಭಾಸಗಳಿಂದ ಕೂಡಿವೆ ಎನ್ನುತ್ತಾರೆ ಹಾರ್ವರ್ಡ್ ವಿಶ್ವವಿದ್ಯಾಲಯದ ಅಮೀರ್ ಅತ್ತಾರನ್. ಉದಾಹರಣೆಗಾಗಿ- ದೇಹದಲ್ಲಿ ಅಧಿಕ ಡಿಡಿಟಿ ಶೇಖರವಾಗಿರುವ ಹೆಂಗಸರು ಸ್ತನಗಳ ಕ್ಯಾನ್ಸರಿನಿಂದ ಪೀಡಿತರಾಗುವ ಸಂಭವ ಹೆಚ್ಚು ಎಂದು ಅಮೆರಿಕಾದ ಒಂದು ಸಮೀಕ್ಷೆ ಪ್ರಕಟಿಸಿದರೆ, ಅದೇ ರೀತಿಯ ಇತರ ಹಲವಾರು ಸಮೀಕ್ಷೆಗಳಲ್ಲಿ ಆ ಇತ್ಯರ್ಥವನ್ನು ಸಮರ್ಥಿಸುವ ಫಲಿತಾಂಶ ಸಿಕ್ಕಲೇ ಇಲ್ಲ.

ಹೀಗಿದ್ದರೂ, ದಕ್ಷಿಣ ಆಫ್ರಿಕಾದ ಜೋಹಾನೆಸ್‌ಬರ್ಗ್‌ನ ಅಧಿವೇಶನದಲ್ಲಿ ಇದೇ ತಿಂಗಳು (ಡಿಸೆಂಬರ್ ೨೦೦೦) ಜಾರಿಗೆ ಬರಲಿರುವ ಅಂತಾರಾಷ್ಟ್ರೀಯ ಒಪ್ಪಂದದಲ್ಲಿ, ಸಂಪೂರ್ಣವಾಗಿ ನಿಷೇಧಿಸಲ್ಪಡಬಹುದಾದ ಇತರ ೧೧ ಜೈವಿಕ ಪ್ರದೂಷಕಗಳೊಡನೆ ಡಿಡಿಟಿಯ ಹೆಸರು ಕೂಡ ಸೇರಿಸಲ್ಪಟ್ಟಿದೆ.

ಮುಕ್ತಪತ್ರ : ವ್ಯವಸಾಯಕ್ಷೇತ್ರದಲ್ಲಿ ಜಾಗತಿಕವಾಗಿ ನಿಷೇಧಿಸಲ್ಪಟ್ಟರೂ, 'ಮಲೇರಿಯಾ ನಿಯಂತ್ರಣ ಕೆಲಸದಲ್ಲಿ, ಜನರ ಪ್ರಾಣರಕ್ಷಣೆಗೋಸ್ಕರ' ಡಿಡಿಟಿ ನಿಷೇಧದಲ್ಲಿ ಅಪವಾದವನ್ನು ಮಾಡಬೇಕೆನ್ನುವ ಒಂದು ಮುಕ್ತಪತ್ರಕ್ಕೆ ಪ್ರಪಂಚಾದ್ಯಂತ ೪೦೦ಕ್ಕೂ ಮೇಲ್ಪಟ್ಟು ವೈದ್ಯರು ಹಾಗೂ ವಿಜ್ಞಾನಿಗಳು ಸಹಿ ಹಾಕಿದ್ದಾರೆ. ''ಡಿಡಿಟಿಯನ್ನು ಉಪಯೋಗಿಸಿದ್ದರಿಂದಾಗಿ ಹೆಚ್ಚೆಂದರೆ, ಜನರ ಆರೋಗ್ಯದ ಮೇಲೆ ಹಗುರವಾದ ಪರಿಣಾಮ ಆಗಬಹುದು. ಆದರೂ ಅದರಿಂದ ದೊರಕುವ ಲಾಭ ಅಪಾರವಾಗಿದೆ. ಆದುದರಿಂದ, ಪ್ರತಿವರ್ಷವೂ ನೂರಾರು, ಸಾವಿರಾರು ಜನರನ್ನು ಮಲೇರಿಯಾದಿಂದ ಪಾರು ಮಾಡುವ ಶಕ್ತಿಯಿರುವ ಡಿಡಿಟಿಯನ್ನು

ನಿಷೇಧಿಸುವುದು ಒಂದು ಪ್ರಮಾದವೇ ಸರಿ ಎಂದೂ ಆ ಪತ್ರದಲ್ಲಿ ನಮೂದಿಸಿದೆ.

ನಿಷೇಧಪರವಾಗಿರುವ ಒಪ್ಪಂದದ ಅಧ್ವರ್ಯುಗಳು ಈಗೀಗ ಡಿಡಿಟಿಯ ಬೆಂಬಲಿಗರ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸಲು ಪ್ರಾರಂಭಿಸಿದ್ದಾರೆ. 'ಪರಿಣಾಮಕಾರಿಯಾದ ಪ್ರತಿಬಂಧಕಗಳು ದೊರಕುವಲ್ಲಿಯವರೆಗೆ ಡಿಡಿಟಿಯನ್ನು ಬಳಸಬಹುದು' ಎನ್ನುವ ಒಕ್ಕಣೆ ಜೋಹಾನೆಸ್‌ಬರ್ಗ್‌ನಲ್ಲಿ ಅಂತಿಮವಾಗಿ ಬಿಡುಗಡೆಯಾಗಲಿರುವ ಒಪ್ಪಂದ ಪತ್ರದಲ್ಲಿ ಪ್ರಾಯಶಃ ಸೇರ್ಪಡೆಯಾಗಬಹುದು. ''ಶ್ರೀಮಂತ ರಾಷ್ಟ್ರಗಳ ಪರಿಸರವಾದಿಗಳು ಬಡದೇಶಗಳ ಮೇಲೆ ಡಿಡಿಟಿ ಬಳಕೆಯ ವಿರುದ್ಧ ಒತ್ತಡ ಹೇರುವುದನ್ನು ನಿಲ್ಲಿಸದಿದ್ದರೆ ಅನೌಪಚಾರಿಕವಾದ ನಿಷೇಧ ಜಾರಿಗೆ ಬರುವುದನ್ನು ತಪ್ಪಿಸುವುದು ಕಷ್ಟ'' ಎಂದು ಎಚ್ಚರಿಸುತ್ತಾರೆ. ಈ ಮುಕ್ತಪತ್ರದ ಸಂಘಟಕ, ಅಮೀರ್ ಅತ್ತಾರನ್.

ಈ ವರ್ಷ ಡಿಡಿಟಿ ಬಳಕೆಯ ಮೇಲಿನ ಮುಖಾಮುಖಿ ನಡೆಯಲಿರುವ ಸ್ಥಳ -ಜೋಹಾನೆಸ್‌ಬರ್ಗ್‌ನ, ಆಯ್ಕೆ ಒಂದು ರೀತಿಯಲ್ಲಿ ಔಚಿತ್ಯಪೂರ್ಣವಾಗಿದೆ. ದಕ್ಷಿಣ ಆಫ್ರಿಕಾವು, ತನ್ನ ಹೆಚ್ಚಿನ ಪ್ರಾಂತಗಳಲ್ಲಿ ಡಿಡಿಟಿಯ ಬಳಕೆಯನ್ನು ೧೯೯೬ರಲ್ಲಿ ಸ್ಥಗಿತಗೊಳಿಸಿತು. ತತ್ಪರಿಣಾಮವಾಗಿ ೧೯೯೯ರಲ್ಲಿ ಮಲೇರಿಯಾದ ಉತ್ಕರ್ಷ ಮರಳಿ ಪ್ರಾರಂಭವಾಯಿತು. ಸುದೂರದ. ಕ್ವಾಜುಲೂ/ನಟಾಲ್‌ನ ಎಮ್‌ಬಾಡ್‌ಲೇನಿ ಎನ್ನುವಲ್ಲಿ ಚಿಕಿತ್ಸಾ ಕೇಂದ್ರ ದಲ್ಲಿ ೧೯೯೭ರ ಸುಮಾರಿಗೆ ಡಾ॥ ಡೋರೀನ್ ಡೂಜಿ ದಿನಕ್ಕೆ ಎರಡೋ, ಮೂರೋ ಮಲೇರಿಯಾ ರೋಗಿಗಳನ್ನು ಉಪಚರಿಸ ಬೇಕಾಗುತ್ತಿತ್ತು. ''ಈಗ ಬೆಳಗ್ಗೆ ೭ ಘಂಟೆಗೆ ಬಾಗಿಲು ತೆರೆಯ ಬೇಕಾದರೆ ಹೊರಗೆ ೨೦೦ಕ್ಕೂ ಹೆಚ್ಚು ಜನ ರೋಗಿಗಳು ಕಾದಿರುತ್ತಾರೆ'' ಎನ್ನುತ್ತಾಳೆ ಡೂಜಿ.

ಮಲೇರಿಯಾ ಪುನರುತ್ಸರ್ಜನೆಯ ಕಾರಣವನ್ನು ಪತ್ತೆಹಚ್ಚಲು, ಕೀಟತಜ್ಞ ಕೀತ್ ಹಾರ್‌ಗ್ರೀವ್ಸ್ ಅಲ್ಲಿಯ ಗುಡಿಸಲುಗಳ ಕಿಟಿಕಿಯಲ್ಲಿ ಬಲೆಗಳನ್ನೊಡ್ಡಿದರು. ೩೦ ವರ್ಷಗಳ ಹಿಂದೆಯೇ ಡಿಡಿಟಿ ಪ್ರಯೋಗ ದಿಂದಾಗಿ ನಿರ್ನಾಮವಾಗಿದ್ದ ಜಾತಿಯ ಸೊಳ್ಳೆಗಳು ಆ ಬಲೆಗಳಲ್ಲಿ ಸಿಕ್ಕಿಬಿದ್ದುದು ಕಂಡು ಬಂತು! ''ಡಿಡಿಟಿ ಪ್ರಯೋಗ ನಿಂತೊಡನೆಯೇ ಆ ಜಾತಿಯ ಸೊಳ್ಳೆಗಳು ನೆರೆರಾಷ್ಟ್ರವಾದ ಮೊಜಾಂಬಿಕ್‌ನಿಂದ ಗಡಿ ಹಾರಿ ಬಂದುದರ ಪರಿಣಾಮ ಭಯಂಕರವಾಯಿತು'' ಎನ್ನುತ್ತಾರೆ ಒಬ್ಬ ಸ್ಥಳೀಯ ಪರಿಸರ ಆರೋಗ್ಯ ಅಧಿಕಾರಿ, ಕೋರಿಯಾ ಗುಮೇದೆ.

ಮಲೇರಿಯಾವನ್ನು ಪುನಃ ತಡೆಗಟ್ಟಲು, ಕ್ವಾಜುಲೂ/ನಟಾಲ್‌ನಲ್ಲಿ ಮನೆಮನೆಯಲ್ಲೂ ಡಿಡಿಟಿ ಸಿಂಪಡಿಸುವ ಕಾರ್ಯಕ್ರಮ ಈ ವರ್ಷದ ಆದಿಯಿಂದ ಮತ್ತೆ ಪ್ರಾರಂಭವಾಗಿದೆ. ''ಕೆಲವರೇನೋ ಡಿಡಿಟಿಯನ್ನು ಕೆಟ್ಟದೆಂದು ಭಾವಿಸಿದಾಕ್ಷಣ, ಸಾವಿರಾರು ಜನರ ಪ್ರಾಣಗಳನ್ನು ರಕ್ಷಿಸುವ ಈ ಸಾಧನವನ್ನು ತ್ಯಾಗ ಮಾಡುವುದು ಬುದ್ಧಿಮತ್ತೆಯ ಲಕ್ಷಣವಲ್ಲ'' ಎನ್ನುತ್ತಾರೆ ದಕ್ಷಿಣ ಆಫ್ರಿಕಾದ ಮಲೇರಿಯಾ ನಿಯಂತ್ರಣಾಧಿಕಾರಿ, ಕೀಟತಜ್ಞ ರಾಜೇಂದ್ರ ಮಹಾರಾಜ್.

ಸಾವಿನ ಸಮಸ್ಯೆ

ಟಿ.ಎಸ್. ಸಂಜೀವರಾವ್
ಇ.ಡಬ್ಲ್ಯು.ಎಸ್. ೪೩೪, ಕೆ.ಎಚ್.ಬಿ. ಕಾಲೋನಿ,
೨ನೇ ಹಂತ, ೪ನೇ ಮುಖ್ಯರಸ್ತೆ
ಬಸವೇಶ್ವರನಗರ, ಬೆಂಗಳೂರು-೫೬೦ ೦೭೯

ಶ್ವಾಸ ಆಡದೇ ಇರುವುದು, ಹೃದಯದ ಬಡಿತ ನಿಂತು ಹೋಗಿರುವುದು, ಮೈ ತಣ್ಣಗಾಗಿರುವುದು ಇವುಗಳಿಂದ ಮನುಷ್ಯ ಸತ್ತುಹೋಗಿದ್ದಾನೆಂದು ಸಾಮಾನ್ಯವಾಗಿ ತಿಳಿಯುತ್ತೇವೆ. ವೈದ್ಯರಿಂದ ಮರಣ ದೃಢೀಕರಣದ ಪತ್ರವನ್ನು ಪಡೆಯಲು ಸಾಮಾನ್ಯವಾಗಿ ಈ ಲಕ್ಷಣಗಳು ಸಾಕು. ಆದರೆ ಸಾವಿನ ಲಕ್ಷಣಗಳನ್ನು ಇದಕ್ಕಿಂತ ಹೆಚ್ಚು ನಿಖರವಾಗಿ ಗುರುತಿಸಬೇಕಾದ ಅವಶ್ಯಕತೆ ಈಗ ಬಂದಿದೆ.

ಈಗ ಶ್ವಾಸ ಮತ್ತು ಹೃದಯ ಚಲನ ಯಂತ್ರಗಳ ಸಹಾಯದಿಂದ ಮನುಷ್ಯ ''ಸತ್ತು'' ಹೋದಮೇಲೂ ಎಷ್ಟೋ ಕಾಲ ಅವನ ಶ್ವಾಸಕ್ರಿಯೆ ಮತ್ತು ರಕ್ತಚಲನೆ ನಡೆದುಕೊಂಡು ಹೋಗುವಂತೆ ಮಾಡಲು ಸಾಧ್ಯವಿದೆ. ''ಸತ್ತು'' ಹೋದ ನಾಯಿಯ ಶ್ವಾಸ ಹಾಗೂ ಹೃದಯಗಳನ್ನು ಪುನಶ್ಚೇತನಗೊಳಿಸುವುದರ ಮೂಲಕ ಅದು ಪುನಃ ಜೀವಂತವಾಗುವ ಹಾಗೆ ವೈದ್ಯ-ಶಸ್ತ್ರಚಿಕಿತ್ಸಕ ಪಟುಗಳು ಮಾಡಿದ್ದಾರೆ. ಹೃದಯ ಸ್ತಂಭನದಿಂದ ''ಸತ್ತು'' ಹೋಗಿದ್ದಾರೆಂದು ತಿಳಿಯಲ್ಪಟ್ಟ ಅನೇಕರು ಹೃದಯಮರ್ದನ ಚಿಕಿತ್ಸೆಯಿಂದ ಜೀವವನ್ನು ಪುನಃಪಡೆದ ಉದಾಹರಣೆಗಳು ಅನೇಕವಿವೆ. ಆದ್ದರಿಂದ ಮೂಗಿನ ಮುಂದೆ ಕನ್ನಡಿ ಹಿಡಿದು ಅದು ಮುಸುಕಾಗದಿದ್ದರೆ ಅಥವಾ ನಾಡಿಯ ಬಡಿತ ಗುರುತಿಸಲು ಸಾಧ್ಯವಾಗದಿದ್ದರೆ ಮನುಷ್ಯ ಸತ್ತುಹೋಗಿದ್ದಾನೆಂದು ಹೇಳುವುದು ಎಷ್ಟೋ ವೇಳೆ ತಪ್ಪಾಗುತ್ತದೆ.

ಈಚೆಗಂತೂ ಮನುಷ್ಯನ ಹೃದಯ, ಮೂತ್ರಪಿಂಡ, ಯಕೃತ್ತುಗಳನ್ನು ನೆಟ್ಟ ಹಾಕುತ್ತಿದ್ದಾರಷ್ಟೆ. ಇದ್ದ ತಲೆಯನ್ನು ತೆಗೆದು ಹಾಕಿ ಬೇರೆ ತಲೆಯನ್ನು ಜೋಡಿಸುವ ಸಮಯ ಬರಲು ಹೆಚ್ಚು ತಡವಾಗಲಾರದು! ಅಸಾಧ್ಯವೆಂದು ಕಾಣುವ ಈ ಹೊಸತಲೆ ಜೋಡಣೆಯ ಪ್ರಯೋಗಗಳನ್ನು ನಾಯಿಯಮೇಲೆ ರಷ್ಯದ ಶಸ್ತ್ರವೈದ್ಯರು ಯಶಸ್ವಿಯಾಗಿ ಮಾಡಿದ್ದಾರೆಂದು ವದಂತಿ ಇದೆ. ಇದು ಮನುಷ್ಯನ ವಿಷಯದಲ್ಲೂ ಸಾಧ್ಯವಾದರೆ, ಹೊಸ ತಲೆ, ಹೊಸ ಹೃದಯ, ಹೊಸಶ್ವಾಸಗಳನ್ನು ಪಡೆದ ವ್ಯಕ್ತಿ ಹೊಸ ಮನುಷ್ಯ ಎಂದು ತಿಳಿಯಬೇಕೆ? ಹಾಗೆ ತಿಳಿದರೆ ''ಹಳೆಯ'' ಮನುಷ್ಯ ಸತ್ತು ಹೋಗಿದ್ದಾನೆಂದು ತಿಳಿಯಬೇಕೆ? ಹೀಗೆ, ಇದುವರೆಗೂ ತೆಪ್ಪಗಿದ್ದ ಸಾವು ಹೊಸ ಹೊಸ ಸಮಸ್ಯೆಗಳನ್ನು ಒಡ್ಡುತ್ತಿದೆ. ಸಾವಿನ ಲಕ್ಷಣಗಳನ್ನು ನಿಖರವಾಗಿ ಗುರುತಿಸದೇ ಹೋದರೆ ಕಾನೂನಿನ ಪ್ರಕಾರ ಆಸ್ತಿಪಾಸ್ತಿ ಹಕ್ಕುಬಾಧ್ಯತೆಗಳ ವಿಷಯವಾಗಿಯೂ ಅನೇಕ ಜಟಿಲ ಪ್ರಶ್ನೆಗಳು ಏಳುವ ಸಂಭವ ಈಗ ಉಂಟಾಗಿದೆ.

ಈಗಿನ ವೈದ್ಯಶಾಸ್ತ್ರ ಎರಡು ತರಹ ಸಾವುಗಳನ್ನು ಗುರುತಿಸುತ್ತದೆ. ಸಂಪೂರ್ಣ ದೈಹಿಕ ಮರಣ ಹಾಗೂ ಮಸ್ತಿಷ್ಕಮರಣ, ಕಾಯಿಲೆ, ಅಪಘಾತ, ವೃದ್ಧಾಪ್ಯ ಇವು ಯಾವುದರಿಂದಲಾದರೂ ಸಂಪೂರ್ಣ ದೈಹಿಕ ಮರಣ ಆಗಬಹುದು; ಆಗ ಮರಣದ ವಿಷಯಕ್ಕೆ ಅನುಮಾನವೇ ಇರುವುದಿಲ್ಲ. ಮೆದುಳಿನ, ರಕ್ತದ ಮತ್ತು ದೇಹದ ಎಲ್ಲ ಭಾಗದ ಜೀವಕಣಗಳೂ ಸತ್ತು ಹೋಗಿರುತ್ತವೆ; ಸ್ನಾಯುಗಳು, ಮಾಂಸಖಂಡಗಳು ತಮ್ಮ ಹಿಗ್ಗುವ ಮತ್ತು

ಸಂಕೋಚನದ ಶಕ್ತಿಯನ್ನು ಕಳೆದುಕೊಂಡಿರುತ್ತವೆ; ಮತ್ತು ಶ್ವಾಸ ಹಾಗೂ ಹೃದಯದ ಕೆಲಸಗಳು ನಿಂತು ಹೋಗಿ ಎಷ್ಟೋ ಸಮಯವಾಗಿರುತ್ತದೆ.

ಮಸ್ತಿಷ್ಕಮರಣ ದೇಹದ ಕೆಲವು ಮಾರ್ಮಿಕ ಭಾಗಗಳಿಗೆ ಆಗುವ ಅಪಾಯದಿಂದ ಪರಿಣಮಿಸುತ್ತದೆ. ನೇಣುಹಾಕಿಕೊಂಡ ಮನುಷ್ಯ ಅಥವಾ ಗಲ್ಲಿಗೆ ಏರಿಸಲ್ಪಟ್ಟ ಮನುಷ್ಯ ಸಾಯುವುದು ಈ ರೀತಿಯಿಂದಲೇ. ಉಸಿರು ಕಟ್ಟುವುದರಿಂದ ದೇಹದಲ್ಲಿನ ಜೀವಕಣಗಳಿಗೆ, ಮುಖ್ಯವಾಗಿ ಮೆದುಳಿಗೆ, ಆಮ್ಲಜನಕ ಸಿಗದೇಹೋಗುತ್ತದೆ. ಆಮ್ಲಜನಕ ಜೀವದ ಪ್ರಾಣವಾಯು, ಇದು ಕೆಲವೇ (ನಾಲ್ಕರಿಂದ ಎಂಟು) ನಿಮಿಷ ಇಲ್ಲದಿದ್ದರೆ ಸಾಕು, ನರಮಂಡಲದ ಜೀವಾಣುಗಳು ನಾಶವಾಗುತ್ತವೆ. ಆಮ್ಲಜನಕ ಕಡಿಮೆಯಾದ್ದರಿಂದ ಮೊದಲು ಖತಂಗೊಳ್ಳುವ ಜೀವಾಣುಗಳೆಂದರೆ ಮೆದುಳಿನ ಹಾಗೂ ಬೆನ್ನುಹುರಿಯ ನರಮಂಡಲದ ಜೀವಾಣುಗಳು. ಇವು ಸತ್ತ ಕೂಡಲೇ ಹೃದಯಬಡಿಯುವುದು, ಶ್ವಾಸ ಆಡುವುದು ನಿಂತು ಹೋಗುತ್ತವೆ. ಆದರೂ ದೇಹದ ಮಿಕ್ಕ ಭಾಗಗಳ ಜೀವಾಣುಗಳು ಇನ್ನೂ ಜೀವಂತವಾಗಿರುತ್ತವೆ. ಇಂಥ ಸಮಯದಲ್ಲಿ ಬಲವಂತದಿಂದ ಶ್ವಾಸೋಚ್ಛ್ವಾಸ ಮಾಡಿಸುವುದರಿಂದಲೂ, ಹೃದಯ ಮರ್ದನದಿಂದಲೂ, ಮುಖ್ಯವಾಗಿ ಶ್ವಾಸ, ಹೃದಯ ಚಾಲನಯಂತ್ರಗಳಿಂದ, ಶ್ವಾಸ ಮತ್ತು ಹೃದಯಗಳ ಕ್ರಿಯೆಗಳನ್ನು ಪುನಃ ಪ್ರವರ್ತನಗೊಳಿಸಬಹುದು. ಹೀಗೆ ಮಾಡಿದಾಗ ಖತಂಗೊಂಡ ನರಮಂಡಲದ ಜೀವಾಣುಗಳು ಸ್ವಲ್ಪಮಟ್ಟಿಗಾದರೂ ಚೈತನ್ಯಗೊಂಡು ದೇಹದ ಕ್ರಿಯೆಗಳನ್ನು ಹಾಗೂ ಹೀಗೂ ಮಾಡಿಸಲು ಸಾಧ್ಯವಾಗಬಹುದು. ಆದರೆ ಹೀಗೆ ಪುನರ್ಜೀವಿತನಾದ ಮನುಷ್ಯನ ಬುದ್ಧಿಕೇಂದ್ರವಾದ ಮಸ್ತಿಷ್ಕದ ಜೀವಕಣಗಳು ಬಹುಶಃ ಸತ್ತೇ ಹೋಗಿರುತ್ತವೆ. ಅವನ್ನು ಪುನಶ್ಚೇತನಗೊಳಿಸಲು ಸಾಧ್ಯವಾಗದೇ ಇರಬಹುದು. ಇಂಥಾ ಸ್ಥಿತಿಯಲ್ಲಿ ಅವನೊಂದು ಬರೀ ಕೈಕಾಲು ಆಡಿಸುತ್ತಿರುವ, ಹೃದಯಶ್ವಾಸಕೋಶಗಳು ಕೆಲಸ ಮಾಡುತ್ತಿರುವ ''ಹೆಣ''ವಾಗಿರುತ್ತಾನೆ. ಕೆನಡಾದ ಮಾನ್‌ಟ್ರಿಯಲ್‌ನಲ್ಲಿ ೨೧ವರ್ಷದ ಒಬ್ಬ ಯುವತಿ ಕಾರ್ ಅಪಘಾತದಲ್ಲಿ ಗಾಯಗೊಂಡು ಪ್ರಜ್ಞೆ ಕಳೆದುಕೊಂಡಳು. ಅವಳನ್ನು ಆಸ್ಪತ್ರೆಯಲ್ಲಿ ಶ್ವಾಸ-ಹೃದಯ ಚಾಲನ ಯಂತ್ರಗಳ ಸಹಾಯದಿಂದ ''ಜೀವಂತ ಹೆಣ''ವಾಗಿ ೧೨ ವರ್ಷಕಾಲ ಇಟ್ಟಿದ್ದರು. ಕಳೆದು ಹೋದ ಪ್ರಜ್ಞೆ ಮತ್ತೆ ಬರಲೇ ಇಲ್ಲ. ಅಂಥವರನ್ನು ಜೀವಂತ ಮಾನವ/ವೀ ಎಂದು ಹೇಳಬಹುದೆ? ಹೆಸರಿಗೆ ಮಾತ್ರ ಅವರು ಜೀವಂತರೆಂದೆನಿಸಿಕೊಂಡರೂ ಪೂರ್ಣ ಜೀವಂತರಲ್ಲ. ಏಕೆಂದರೆ, ಮನುಷ್ಯನ ಬಹು ಮುಖ್ಯ ಜೈವಿಕ ಲಕ್ಷಣವಾದ ಪ್ರಜ್ಞೆ ಎಂಬುದೇ ಅವರಿಗಿರುವುದಿಲ್ಲ. ಪ್ರಜ್ಞೆಯಿಂದ ನಡೆಯುವ ಕಾರ್ಯಗಳೊಂದೂ ಅವರಿಂದ ನಡೆಯಲು ಸಾಧ್ಯವಿಲ್ಲ. ಮಾನವನ ಉತ್ತಮಾಂಗ ವಾದ ಮೆದುಳಿನ ಹೆಚ್ಚುಭಾಗ ಕೆಲಸ ಮಾಡದೇ ಇದ್ದರೂ ಭೌತಿಕ ದೇಹವನ್ನಷ್ಟೆ ಜೀವಂತವಾಗಿಡಲು ಈಗಿನ ವೈದ್ಯಕೀಯ ಸಾಹಸಗಳಿಂದಾಗಿ ಸಾಧ್ಯವಾಗಿದೆಯಷ್ಟೆ. ಶ್ವಾಸ, ಹೃದಯ ಚಾಲನಯಂತ್ರಗಳಿಂದ ಕಾನೂನಿನ ಮಟ್ಟಿಗೆ ಜೀವಂತನಾಗಿರುವ ಇಂಥ ಮನುಷ್ಯರು ಹೆಚ್ಚುತ್ತಾ ಹೋದ ಹಾಗೆಲ್ಲಾ ಸಾಂಸಾರಿಕ ಹಾಗೂ ಸಾಮಾಜಿಕವಾಗಿ ಅನೇಕ ಹೊಸ ಪ್ರಶ್ನೆಗಳು ಏಳುತ್ತವೆ ಮತ್ತು ಆಸ್ತಿಪಾಸ್ತಿ ವಿಷಯದ ಕಾನೂನೆಲ್ಲವೂ ತೊಡಕಾಗಿ ಹೋಗುತ್ತವೆ. ಈ ಜೀವಂತ ಹೆಣಗಳಿಂದ ತುಂಬಿಹೋದ ಸಮಾಜದ ಫಜೀತಿ ಅತ್ಯಂತ ಭೀಕರವಾಗಬಹುದು!

ಗ್ರೀಕರ ಕಥೆಯೊಂದರಲ್ಲಿ ಇದೇ ತರಹದ ಕರುಣಾಜನಕ ಚಿತ್ರವಿದೆ. ಟ್ರಾಯ್ ನಗರದ ದೊರೆ ಪ್ರಯಾಮಿನ ತಮ್ಮ ಟೈಥೋನಸ್ ಉಷಾದೇವಿಯಿಂದ ಅಮರತ್ವದ ವರ ಪಡೆದ; ಆದರೆ, ವೃದ್ಧಾಪ್ಯದ ವಿಷಯ ಮರೆತು ಬಿಟ್ಟ! ಎಲ್ಲರ ಹಾಗೇ ವೃದ್ಧನಾದ, ಆದರೆ ಸಾಯದೇ ಉಳಿದ : ಅವನ ಗೋಳು ಹೇಳತೀರದು. ಕಣ್ಣು ಕಾಣಿಸದಾಯ್ತು; ಹಲ್ಲುಗಳು ಉದುರಿ ಹೋದುವು: ಕೈಕಾಲುಗಳು ಉಡುಗಿ ಬೇರೆ ಯವರ ಸಹಾಯವಿಲ್ಲದೆ ಕೂಡಲು, ಎದ್ದು ನಿಲ್ಲಲೂ ಸಹ ಆಗುತ್ತಿರಲಿಲ್ಲ. ಜರಾ ಜರ್ಝ ರಿತ ದೇಹ ಜೀವಂತವಿದ್ದರೂ ಯಾವ ಕೆಲಸಕ್ಕೂ ಬಾರದೆ ಹೋಯಿತು. ಸತ್ತರೆ ಸಾಕಪ್ಪ ಎಂದರೆ ಸಾವು ಬಾರದು! ಕೊನೆಗೆ ಉಷಾದೇವಿ ಅವನನ್ನು ಒಂದು ಮಿಡಿತೆಯಾಗಿ ಮಾಡಿಬಿಟ್ಟ ಳಂತೆ. ಹೀಗೆ ಬದುಕಿದ ''ಹೆಣ''ಗಳು ಏನೇನು ಪ್ರಶ್ನೆಗಳನ್ನು ತಂದೊಡ್ಡುವುವೋ! ವೈದ್ಯ ಪಟುಗಳೀಗ ''ಸಾವು'' ಎಂಬುದರ ನಿರ್ದಿಷ್ಟಾರ್ಥಕ್ಕೋಸ್ಕರ ಹೆಣಗಾಡುತ್ತಿದ್ದಾರೆ.

ಅಂಗಾಂಗಗಳ ನಾಟೀಕರಣ ಸುರು ವಾದಾಗಲಿಂದಲಂತೂ ಇನ್ನೊಂದು ಪ್ರಶ್ನೆ ಏಳುತ್ತಿದೆ. ಶ್ವಾಸ ನಿಂತು ಹೋಗಿದೆ, ಹೃದಯದ ಬಡಿತ ನಿಂತು ಹೋಗಿದೆ ಎಂಬ ಕಾರಣದಿಂದ ಮನುಷ್ಯ ಸತ್ತುಹೋಗಿದ್ದಾನೆ ಎಂದು ತೀರ್ಮಾನವಾಗಿ ಆ ''ಹೆಣ''ದ ಅಂಗಾಂಗ ಗಳನ್ನು ಬೇರೆ ದೇಹಕ್ಕೆ ನಾಟಿ ಮಾಡುವುದ ಕ್ಕೋಸ್ಕರ ತೆಗೆದ ಸಂದೇಹ ಕ್ಕೆಡೆಗೊಡುವ ಸಂಗತಿಗಳೂ ಆಗಿಹೋಗಿವೆ. ''ಸಾವು'' ಎಂಬುದನ್ನು ಇನ್ನೂ ಖಚಿತವಾಗಿ ನಿರ್ಧರಿ ಸದೇ ಹೋದರೆ ಇಂಥಾ ಅರೆ ಸತ್ತ''ಹೆಣ'' ಗಳಿಂದ ಹೃದಯ, ಮೂತ್ರಪಿಂಡ, ಯಕೃತ್ತು ಮೊದಲಾದುವುಗಳನ್ನು ಕದಿಯುವ ಚಾಳಿ ಹೆಚ್ಚುತ್ತಾ ಹೋಗಬಹುದು. ದಶಕಗಳ ಹಿಂದೆ ''ಕೋಮ'' ಎಂಬ ಕಾದಂಬರಿ ಹಾಗೂ ಚಲನಚಿತ್ರ ಈ ಸಂಗತಿಯನ್ನು ಎತ್ತಿ ತೋರಿಸಿತ್ತು. ಬೆಂಗಳೂರಿನಲ್ಲೇ ಒಂದು ಪ್ರಸಿದ್ಧವಾದ ಆಸ್ಪತ್ರೆಯ ವೈದ್ಯರು ಹಳ್ಳಿ ಜನಗಳನ್ನು ಮೋಸಗೊಳಿಸಿ, ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ ಅವರ ಮೂತ್ರಪಿಂಡಗಳನ್ನು ಕದ್ದು ಮಾರುತ್ತಿದ್ದರೆಂಬ ಸುದ್ದಿ ಹಬ್ಬಿತ್ತು.

ಕೆಲವು ಸಂದರ್ಭಗಳಲ್ಲಿ ಅರೆ ಸತ್ತ ''ಹೆಣ''ಗಳಿಗೆ ಜೀವದಾನ ಮಾಡುವ ಶಕ್ಯತೆ ಈಗ ಇರುವುದರಿಂದ ವೈದ್ಯಕೀಯ ವೃತ್ತಿಯ ಮೇಲೇ ಒಂದು ದೊಡ್ಡ ಧರ್ಮಸಂಕಟ ಒದಗಿ ಬಂದಿದೆ. ಅರ್ಧ ''ಸತ್ತ'' ಹೆಣಗಳಿಗೆ ಜೀವ ದಾನ ಮಾಡುವುದರಿಂದ ಅವು ಬರೀ ಕೈಕಾಲು ಆಡಿಸುವ, ಉಚ್ಛ್ವಾಸ ನಿಚ್ಛ್ವಾಸಮಾಡುವ ಜೀವಂತ ಆದರೆ ಇತರೇ ವಿಷಯಗಳಲ್ಲಿ ನಿಷ್ಪ್ರಯೋಜಕವಾದ ದೇಹಗಳಾಗುವುದಾದರೆ ಜೀವದಾನ ಮಾಡುವುದು ನೈತಿಕವೇ? ಆಸ್ತಿ ಪಾಸ್ತಿ ವಿಷಯಕ್ಕಾಗಿಯೂ, ಆದಾಯ ತೆರಿಗೆ ಮೊದಲಾದುವನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದಲೂ ಕೆಲವು ವೇಳೆ ಅರ್ಧ ''ಸತ್ತ'' ಹೆಣಗಳನ್ನು ಜೀವಂತವಾಗಿಡಲು ವೈದ್ಯರಿಗೆ ಬೇಡಿಕೆ ಬರಬಹುದು. ವೈದ್ಯರು ಇಂಥ ಸಮಯದಲ್ಲಿ ಯಾವ ನೀತಿಯನ್ನನುಸರಿಸ ಬೇಕು? ಇನ್ನೂ ಸಂದಿಗ್ಧ ಪರಿಸ್ಥಿತಿಯೇನೆಂದರೆ, ಹೃದಯ ಮತ್ತು ಶ್ವಾಸಕೋಶ ಚಾಲನ ಯಂತ್ರ ಗಳಿಂದ ರಕ್ತಚಲನೆ ಮತ್ತು ಉಚ್ಛ್ವಾಸ ನಿಚ್ಛ್ವಾಸ ಗಳನ್ನು ನಡೆಸಿಕೊಂಡು ಬರುತ್ತಿರುವಾಗ ಆ ವ್ಯಕ್ತಿ ಇನ್ನು ಸ್ವತಂತ್ರವಾಗಿ ಅಂದರೆ ಆ ಯಂತ್ರಗಳ ಸಹಾಯವಿಲ್ಲದೆ ಜೀವಿಸಲಾರ ಎಂದು ಕಂಡು ಬಂದರೆ, ಯಂತ್ರಗಳ ಸಹಾಯವನ್ನು ನಿಲ್ಲಿಸಿ ದರೆ ಅದು ''ಕೊಲೆ'' ಎಂದು ಪರಿಗಣಿಸ ಲ್ಪಡುವ ಸಂಭವ. ಅಮೆರಿಕೆಯಲ್ಲಿ ಇಂಥಾ ಸಂಗತಿಗಳು ಆಗಲೇ ನ್ಯಾಯಾಲಯಗಳ ಮುಂದೆ ಬಂದಿವೆ.

ಇನ್ನೊಂದು ಭಾರಿ ಚರ್ಚೆಯಲ್ಲಿರುವ ಪ್ರಶ್ನೆ -ಮಾನವನಿಗೆ ತನಗೆ ಬೇಕೆಂದಾಗ ಸಾವನ್ನಪ್ಪಲು ಹಕ್ಕಿದೆಯೋ ಇಲ್ಲವೋ ಎಂಬುದು. ವೃದ್ಧಾಪ್ಯದ ಕೋಟಲೆಗಳನ್ನು ಅನುಭವಿಸಲು ದುಸ್ಸಾಧ್ಯವಾದಾಗ, ಜೀವನದ ಅನೇಕ ಸಂದಿಗ್ಧಗಳಲ್ಲಿ ಇನ್ನು ಬದುಕಿರುವುದು ಸಾಕು ಎಂದಾಗಲೂ ಆತ್ಮಹತ್ಯೆ ಮಾಡಿಕೊಳ್ಳಲು ಈಗಿನ ಮಾನವನಿಗೆ ಅಧಿಕಾರವಿಲ್ಲ. ಆತ್ಮಹತ್ಯೆಯ ಪ್ರಯತ್ನದಲ್ಲಿ ವಿಜಯಪೊಂದಿದವನಿಗೆ ಕಾನೂನಾಗಲಿ ಯಾರೇ ಆಗಲಿ ಏನೂ ಮಾಡುವಂತಿಲ್ಲವಷ್ಟೆ! ಆದರೆ ಈಗೀಗ ಬುದ್ಧಿಜೀವಿಗಳು ತಮಗೆ ಅವಶ್ಯವೆನಿಸಿದಾಗ ಸಾವನ್ನಪ್ಪುವುದು ಮಾನವನ ಹುಟ್ಟುಹಕ್ಕು ಎಂದು ವಾದಿಸತೊಡಗಿದ್ದಾರೆ. ಕೇರಳದ ಒಬ್ಬ ಬುದ್ಧಿಜೀವಿ ತಾನು ವೃದ್ಧಾಪ್ಯದಲ್ಲಿ ಕಾಲಿಡುತ್ತಿದ್ದೇನೆ; ಆರೋಗ್ಯವಾಗಿದ್ದೇನೆ; ಆದರೆ ಯಾವಾಗ ಬೇಕೆಂದರೆ ಆಗ ತಾನು ಪ್ರಾಣತ್ಯಾಗ ಮಾಡುವುದಕ್ಕೆ ಕಾನೂನು ಅಡ್ಡ ಬರಬಾರದು ಎಂದು ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾನೆ. ಹಿಂದಿನ ಕಾಲದಲ್ಲಿ ಪ್ರಾಣ ಕಳೆದುಕೊಳ್ಳುವ ಪ್ರಯತ್ನಕ್ಕೆ ಯಾವ ಕಾನೂನೂ ಅಡ್ಡವಾಗುತ್ತಿರಲಿಲ್ಲ. ಅಲ್ಲದೆ, ಅನೇಕ ಸಂತರು ತಮ್ಮ ಕಾರ್ಯ ಈ ಲೋಕದಲ್ಲಿ ಮುಗಿಯಿತು ಅನಿಸಿದ ತಕ್ಷಣ ಉಪವಾಸ ಮಾಡಿಯೋ, ಬೇರೆ ರೀತಿಯಲ್ಲೋ ಪ್ರಾಣ ತ್ಯಾಗ ಮಾಡುತ್ತಿದ್ದರು. ಜೈನರಲ್ಲಿ ಹೀಗೆ ''ಸಲ್ಲೇಖನ'' ವ್ರತದಿಂದ ದೇಹವನ್ನು ತ್ಯಜಿಸುವ ಪದ್ಧತಿ ಈಗಲೂ ಇದೆ. ಇದೀಗ ಬಂದಿರುವ ವಾರ್ತೆ: ಬೆಂಗಳೂರಿನ ಪಟಾಶಿ ಬಾಫ್ನ ಎಂಬ ೮೫ ವರ್ಷದ ಜೈನ ಮಹಿಳೆ 'ಸಲ್ಲೇಖನ' ವ್ರತದಿಂದ ೧೬ ದಿವಸ ಉಪವಾಸವಿದ್ದು ದೇಹತ್ಯಾಗ ಮಾಡಿದ್ದಾಳೆ. ಹಿಂದುಗಳಲ್ಲಿ ಜೀವಂತವಾಗಿ ಸಮಾಧಿಯಾಗುವ ಪದ್ಧತಿಯೂ ಇದೆ. ಮಂತ್ರಾಲಯದ ಮಹಾತ್ಮರಾದ ರಾಘವೇಂದ್ರ ಸ್ವಾಮಿಗಳು ಹೀಗೆ ತಾನೆ ವೃಂದಾವನಸ್ಥರಾದ್ದು. ಬಿಳಿಗಿರಿ ರಂಗನ ಬೆಟ್ಟದ ಸ್ವಾಮಿ ನಿರ್ಮಲಾನಂದರೂ ಪ್ರಾಯೋಪವೇಶದಿಂದ ಇತ್ತೀಚೆಗೆ ಪ್ರಾಣತ್ಯಾಗ ಮಾಡಿದರು. ಹಿಂದೆ ಸಂತ ಜ್ಞಾನೇಶ್ವರರೂ ಜೀವಂತ ಸಮಾಧಿಯಾಗಿ ಸಾವನ್ನಪ್ಪಿದರು. ಈಗ ಇಂಥ ಪ್ರಯತ್ನಗಳೆಲ್ಲವನ್ನೂ ''ಸ್ವ-ಕೊಲೆ'' ಎಂಬ ಅಪರಾಧ ವಾಗಿ ಕಾನೂನು ಎಣಿಸುತ್ತದೆ.

ಈ ಜಟಿಲ ಸಮಸ್ಯೆಗಳನ್ನು ಇಂದಿನ ವೈದ್ಯರು, ಕಾನೂನು ಎದುರಿಸಬೇಕಾದ ಸಂದರ್ಭಗಳು ಹೆಚ್ಚು ಹೆಚ್ಚಾಗಿ ಬರುತ್ತಿವೆ.

ಮೃತ್ಯು ನಿಮಿಷ ನಿಮಿಷವೂ ತಲೆಗೂದಲುಗಳನ್ನು ಹಿಡಿದು
ಜಗ್ಗುವದೆಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ
ಧರ್ಮಗಳನ್ನಾಚರಿಸಿರಿ

- ನೀತಿಶಾಸ್ತ್ರ

ಮಾನವ ಜನ್ಮ ದೊಡ್ಡದೋ

ಡಾ. ಶ್ರೀ ವೆಂಕಟರಮಣ
ಪ್ರಾಧ್ಯಾಪಕರು
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು-೫೬೦ ೦೫೬

ಪಂಚೇಂದ್ರಿಯಗಳಲ್ಲಿ ನಾಲ್ಕು ನಮ್ಮ ಮುಖದಲ್ಲಿ ಇರುವುದು ಆಕಸ್ಮಿಕವೇನೋ? ಬಾಹ್ಯ ಪ್ರಪಂಚದ ಬೇಕಾದ, ಬೇಡವಾದ ಮಾಹಿತಿ ಇವುಗಳ ಮೂಲಕ ಪ್ರವೇಶಿಸುತ್ತದೆ. ಶಿಸ್ತಿಗೆ ದೂರವಿದ್ದು ಜೀವನ ಸವೆಸಿದವರಿಗೆ, ಜೀವನದ ಸಂಜೆಯ ಹೊತ್ತಿಗೆ ತಮ್ಮ ಸರಕು ಸರಂಜಾಮುಗಳ ಯಾದಿಯನ್ನು ತಯಾರಿಸಿ ಮುಂದಿನ ಯಾತ್ರೆಗೆ ಸಿದ್ಧತೆ ನಡೆಸುವಾಗ ಬೇಡವಾದವುಗಳ ಭಾರ ಯಮಭಾರವೆನಿಸುವುದಿದೆ. ಇಂಥ ವ್ಯಕ್ತಿಯೊಬ್ಬರು ವೈದ್ಯರ ಬಳಿಗೆ 'ಹೋಗುತ್ತಾರೆ! ಕಿವಿ, ಮೂಗು, ಗಂಟಲುಗಳಿಗೆ ಒಳಸಂಬಂಧ ತೀರ ಹತ್ತಿರದ್ದು. ವೈದ್ಯ ತಪಾಸಣೆಯಲ್ಲಿ ಭೂತಕಾಲದ ಅಪರಾಧಗಳ ಪಳಿಯುಳಿಕೆಯ ಹೇರಳ ಪತ್ತೆಯಾಗುತ್ತದೆ. ಇದರಿಂದ ರೋಗಿಗೆ ಮುಜುಗರದ ಅನುಭವ. ಪಾರಮಾರ್ಥಿದ ಲೇಪವಿರುವ ಈ ಲೇಖನದ ಶೈಲಿಯಲ್ಲಿ ಹಾಸ್ಯದ ಹೂರಣವೂ ಇದೆ. ಭವರೋಗಹರನ ಬಳಿ ಈತ ಒಂದಲ್ಲ ಒಂದು ದಿನ ಮುಂದೆ ಹೋದಾಗ ಆಗಲಿರುವ ಅನುಭವದ ಸೂಚನೆಯೂ ಇಲ್ಲಿದೆ.

ಕಳೆದವಾರ ನನ್ನ ಕಿವಿ, ಮೂಗು, ಗಂಟಲು ಇವುಗಳಲ್ಲಿ ಪ್ರತಿಯೊಂದೂ ತಕರಾರು ಮಾಡಲು ಆರಂಭಿಸಿದಾಗ, ಬೇರೆ ಉಪಾಯವಿಲ್ಲದೆ ವೈದ್ಯರ ಬಳಿಗೆ ಸಾಗಿದೆ. ಸುಮಾರು ಒಂದು ಗಂಟೆಕಾಲ ಅಲ್ಲಿ ಕಾದ ಬಳಿಕ ವೈದ್ಯರ ಸನ್ನಿಧಿಗೆ ಹೋಗಲು ನನಗೆ ಅನುಮತಿ ಬಂತು. ಎತ್ತರದ ಕುರ್ಚಿಯ ಮೇಲೆ ನನ್ನನ್ನು ಕುಳ್ಳಿರಿಸಿದ ಅವರು ಮೊದಲು ಬಾಯಿ ತೆರೆಯಲು ಆಜ್ಞಾಪಿಸಿದರು; ಬಳಿಕ ಬೆಳಕಿನ ಕಂಬಿಯನ್ನು ಒಳಗೆ ಬಿಡುತ್ತ ಸೂಕ್ಷ್ಮವಾಗಿ ಪರಿಶೀಲಿಸಿದರು. ಅಲ್ಲಿ ಅವರಿಗೊಂದು ವಿಚಿತ್ರ ಪ್ರಪಂಚವೇ ಕಾಣಿಸಿರಬೇಕು! ಸೂಕ್ಷ್ಮದರ್ಶಕವನ್ನು ಬಳಸಿ ಒಳಗಿನ ಚಿತ್ರವಿಚಿತ್ರ ಜಗತ್ತನ್ನು ಕಣ್ಣಿನ ಮೂಲಕ ಸುತ್ತಾಡಿದರವರು.

ಮುಂದುಗಡೆಯ ನನ್ನೆರಡು ಹಲ್ಲು ನಾಪತ್ತೆಯಾಗಿದ್ದರಿಂದ ಅಲ್ಲಿಯ ದೃಶ್ಯ ಮುಂಬಯಿಯ ಭಾರತ ಮಹಾದ್ವಾರದಂತೆ ಕಂಡಿದ್ದರೆ ಆಶ್ಚರ್ಯವಿಲ್ಲ. ಪಕ್ಕದಲ್ಲೇ ಇದ್ದ ಎರಡು ಕೋರೆಗಳು ದ್ವಾರದಲ್ಲಿ ತೂಕಡಿಸುತ್ತಿರುವ ಕಾವಲುಗಾರರಂತೆ ಭಾಸವಾಗಿರಬೇಕು. ಹಲ್ಲಿನ ಬಣ್ಣ ಹಳದಿಗೆ ಸನಿಹವಾಗಿ ವೈದ್ಯರ ನಾಖುಶಿಗೆ ಗುರಿಯಾಯಿತು. ಹಲ್ಲುಗಳ ಸಂದಿಗೊಂದಿಯಲ್ಲಿ ಹುದುಗಿದ್ದ ಕೀಟಾಣುಗಳ ಪ್ರಪಂಚವನ್ನು ಸೂಕ್ಷ್ಮದರ್ಶಕ ಬಯಲು ಪಡಿಸಿದಾಗ ವೈದ್ಯರು ಕಣ್ಣಗಲಿಸಿ ಹುಬ್ಬೇರಿಸಿದರು. ತುಟಿಯ ಕಪ್ಪನ್ನು ಗಮನಿಸಿಯೋ ಏನೋ "ಸಿಗರೇಟು ಸೇದುತ್ತೀರಾ?" ಎಂದು ನನ್ನ ಹಳೆಯ ಅಪರಾಧದ ಜಾಡನ್ನು ಪತ್ತೆ ಹಚ್ಚಿದರು. ನನ್ನ ವಕ್ತ್ರದೊಳಗೆ ವೈದ್ಯರಿಗೆ ಹಾಳು ಹಂಪಿಯನ್ನು ಹೋಲುವ ದೃಶ್ಯ ಕಂಡಿರಬೇಕು. ನನಗೆ ನನ್ನ ಹಲವಾರು ಅಪರಾಧಗಳ ಯಾದಿಯನ್ನೇ ಅರುಹಿದರವರು. ಎತ್ತರದ ಕುರ್ಚಿಯಲ್ಲಿ ಆಸೀನನಾಗಿದ್ದರೂ ನನ್ನ ಕಳಪೆ ವ್ಯಕ್ತಿತ್ವ ಅಂಗೈಯ ನೆಲ್ಲಿಕಾಯಿಯಂತೆ ಸ್ಪಷ್ಟವಾಗ ಹತ್ತಿತು!

ವೈದ್ಯರು ನನಗೆ ಬಲಕ್ಕೆ ತಿರುಗಲು ಸನ್ನೆ ಮಾಡಿ, ನನ್ನ ಎಡಕಿವಿಯ ತಪಾಸಣೆಯನ್ನಾರಂಭಿಸಿದರು. ಕೈದೀಪದ ತೀಕ್ಷ್ಣ ಬೆಳಕು ಅವರಿಗೆ

ಏನೇನನ್ನು ತೋರಿಸಿತೋ? ಬಾಯಿಯೊಳಗಿನ ಅಧ್ವಾನ ನನಗೆ ಕನ್ನಡಿಯ ಸಹಾಯದಿಂದ ಸುಮಾರಾಗಿ ತಿಳಿದಿದ್ದ ವಿಚಾರವೇ. ಆದರೆ ತಮ್ಮ ಕಿವಿಯ ಒಳಗನ್ನು ತಾವೇ ಕಾಣುವುದು ಸುಲಭವೇ? ಎದುರು ಬದುರು ಕನ್ನಡಿಗಳ ಸಹಕಾರ ಅದಕ್ಕೆ ಅಗತ್ಯ. ಕಿವಿ ನೋವುತ್ತಿತ್ತೆಂಬುದು ಮಾತ್ರ ನನಗೆ ಗೊತ್ತಿತ್ತು! ವೈದ್ಯರು ನನ್ನನ್ನು ಎಡಕ್ಕೆ ತಿರುಗಿಸಿ ಬಲಕಿವಿಯನ್ನೂ ಪರಿಶೀಲಿಸಿದರು. ಕೇಳಬಾರದ ನಾದಸಂಗ್ರಹವನ್ನು ದೀರ್ಘಕಾಲ ಆಲಿಸಿದ್ದ ನನ್ನ ಅಪರಾಧವೂ ಅವರಿಗೆ ತಿಳಿದುಬಂದಂತೆ ನನಗನಿಸಿತು. ಬಹಳ ಜನ ನನ್ನ ಕಿವಿಚುಚ್ಚಿದ್ದು, ಯದ್ವಾತದ್ವಾ ತುಂಬಿ ಸಿದ್ದು ಎಲ್ಲ ಗತಕಾಲದ ವೈಭವದಲ್ಲಿ ಸೇರಿತ್ತು! ಒಟ್ಟು ಮೌನ. ಮೌನವನ್ನು ಭೇದಿಸುತ್ತ ಅವರು, ''ನಿಮ್ಮ ಕಿವಿಬಾಯಿಗಳ ಜಾಗ್ರತೆ ನಿಮಗಿಲ್ಲ'' ಎಂದು ಆರಂಭಿಸಿ, ಜ್ಯೋತಿಯ ಕವಡೆ ತಿರುಗಿಸುತ್ತ ನನ್ನ ಕೆಟ್ಟ ಚಾಳಿಗಳನ್ನು, ಪಾಪಕೃತ್ಯಗಳನ್ನು ಪಟ್ಟಿ ಮಾಡುತ್ತ ಭೂತಕಾಲದಲ್ಲಿ ನಾವು ಜಾರಿದುದನ್ನು ತಿಳಿಸುವಂತೆ, ವೈದ್ಯರು ಮುಂದುವರಿಸುತ್ತ ಹೋದರು. ಕುಳಿತಿದ್ದ ಕುರ್ಚಿಯ ಎತ್ತರ ನನ್ನ ವ್ಯಕ್ತಿತ್ವಕ್ಕೆ ಸಹಾಯಮಾಡಲಾರದೆ ಹೋಯಿತು. ಇದ್ದ ಚೂರುಪಾರು ಅಭಿಮಾನವೂ ನೆಲಕಚ್ಚಿತು.

ಇನ್ನು ಉಳಿದಿದ್ದ ಅಂಗ ಮೂಗು. ನನ್ನ ಆಂಜನೇಯ ಮೂರ್ತಿಯ ಪ್ರಧಾನ ಅಂಗವೇ ಅದು. ಅದರ ಉದ್ದ ವಿಪರೀತವಾಗಿದ್ದುದು ಮಾತ್ರವಲ್ಲ ಕೊನೆಯಲ್ಲಿ ತಿರುವು ಕೂಡಾ ಇತ್ತು. ಹೀಗಾಗಿ ಮಾರುತಿ ಹಾಗೂ ಪಕ್ಷಿರಾಜ ನನ್ನೊಡನೆ ಸಾರೂಪ್ಯಕ್ಕೆ ವಿವಾದವೆಬ್ಬಿಸುವ ಸನ್ನಿವೇಶವಿತ್ತು. ಬಾಲ ಮತ್ತು ರೆಕ್ಕೆಗಳ ಇಲ್ಲದಿರುವಿಕೆ ಈ ವಿವಾದದ ಇತ್ಯರ್ಥವನ್ನು ಕ್ಲಿಷ್ಟಗೊಳಿಸಿತ್ತು. ಬುದ್ಧಿ ಮತ್ತು ಸಂಯಮಗಳ ದೃಷ್ಟಿಯಲ್ಲಿ ನನ್ನ ಸ್ಥಿತಿಗತಿ ತೀರ ಶೋಚನೀಯವಾದ್ದರಿಂದ ಒಳಸೌಂದರ್ಯ ಕೂಡ ಗೈರು ಹಾಜರಿ. ಇದರ ಅಳತೆ ಸಾಧ್ಯವಾದರೆ ಆಂಜನೇಯ-ಗರುಡರ ಪಂಕ್ತಿಯಿಂದ ಮೈಲು ದೂರ ಇರಬೇಕಿತ್ತು ನಾನು!

ವೈದ್ಯರು ತಮ್ಮ ಅಧಿಕಾರ ಚಲಾಯಿಸುತ್ತ ನನ್ನ ನಾಸಿಕದ ಒಳಗೆ-ಹೊರಗೆ ಪರೀಕ್ಷಿಸಿದರು. ಹೊರಗೆ ಅವರು ಏನನ್ನು ಕಂಡರೆಂಬುದು ಸುಸ್ಪಷ್ಟ. ಆದರೆ ಒಳಗೇನನ್ನು ಕಂಡಿರಬಹುದವರು ? ಈ ಕುರಿತು ನನ್ನ ಮಾಹಿತಿ ಸೊನ್ನೆಗೆ ಸನಿಹವಿತ್ತು. ಬೆಳಕಿನ ಕಂಬಿ ನನ್ನ ಮೂಗಿನ ಒಳಗೆ ಸರಿಯಿತು, ಬಳಿಕ ಇದ್ದ ವಿಶಾಲ ಜಾಗದಲ್ಲಿ ಅದು ಸರಿದಾಡಿತು. ವೈದ್ಯರ ಕಣ್ಣಗಲಿಸುವಿಕೆ, ಹುಬ್ಬೇರಿಸುವಿಕೆ ಯಥಾ ಪ್ರಕಾರ ಪುನರಾವರ್ತನೆಯಾದುವು. ಮೂಗಿನ ಮೂಲಕ ಜನ ಮಾಡಲಾಗುವ ಅಪರಾಧ ಸಾಕಷ್ಟು ಕಡಿಮೆ ಇರುವುದರಿಂದ ನನ್ನ ಮನಸ್ಸಿನ ಕಳವಳ ಅಧಿಕವಾಗಲು ಆಸ್ಪದ ಕಡಿಮೆ ಇತ್ತು. ಆದರೂ ನನ್ನ ಮನಸ್ಸಿನೊಳಗೆ ಏನೇನೋ ಗೊಂದಲ. ಎಲ್ಲರ ವ್ಯವಹಾರಗಳಲ್ಲೂ ಮೂಗು ಹಾಯಿಸುವ ಸ್ವಭಾವ ನನ್ನದು. ಇದಕ್ಕಾಗಿ ಹಲವರಿಂದ ಹಲವಾರು ಬಾರಿ ಅನ್ನಿಸಿಕೊಂಡಿದ್ದೇನೆ. ಮನೆಯವರಂತೂ ನನ್ನನ್ನು ಈ ಒಂದು ಕಾರಣಕ್ಕಾಗಿಯೇ ಇಷ್ಟಪಡಲು ಕಷ್ಟಪಡುತ್ತಾರೆ. ''ಎಲ್ಲ ಸರಿ, ಆದರೆ'' ಎನ್ನುವ ಪ್ರಸಂಗವಾಗಿತ್ತು ಇದು. ನಾನು ಸುಮ್ಮನಿದ್ದೆ, ಭಂಡ ಧೈರ್ಯ ವಹಿಸಿ. ಅದೊಂದೇ ನನ್ನ ಬಳಿ ಹೇರಳವಾಗಿದ್ದ ಪದಾರ್ಥ . ''ನಾಸಿಕಾಚೂರ್ಣ ಸೇವಿಸುವ ಹವ್ಯಾಸ ಧಾರಾಳವಾಗಿ ಇದ್ದಂತಿದೆ'' ಎಂದರು ವೈದ್ಯರು. ನಾನು ಸುಮ್ಮನಿದ್ದೆ. ಮೌನ ಸಮ್ಮತಿ ಸೂಚಕವೆಂದು ತಿಳಿದ ಡಾಕ್ಟರರು ಏರುದನಿಯಲ್ಲಿ ''ಅಲ್ಲ, ನಿಮ್ಮ ನಾಸಿಕಾಗುಹೆ ಧಾರಾಳವಾಗಿ ಆರಂಭವಾಗುವುದಾದರೂ ಬರಬರುತ್ತ

ತೀರ ಅಗಲ ಕಿರಿದಾಗುತ್ತಿದೆಯಲ್ಲ; ಅಲ್ಲಿ ಮುಂದೆ ಗಾಳಿಗೆ ಒಳನುಗ್ಗಲು ಕನಿಷ್ಠ ಅವಕಾಶವೂ ಇಲ್ಲವಲ್ಲ. ಇನ್ನು ಉಸಿರು ಕಟ್ಟದೆ ಬೇರೆ ಏನು ಗತಿ ಸಾಧ್ಯ?'' ಎಂದರು. ನಸ್ಯ ಸೇವಿಸುವುದು ಜನ್ಮಸಿದ್ಧಹಕ್ಕು ಎಂದು ತಿಳಿದಿದ್ದ ನನಗೆ ಎದೆ ಧಸಕ್ಕೆಂದಿತು. ನನ್ನ ಜೀವಿತಾವಧಿಯನ್ನು ನಾನೇ ಕೈಯಾರೆ ಕಡಿಮೆ ಮಾಡಿಕೊಂಡೆನೇ ಎಂದೆನಿಸಿತು. ಜೀವಿಸಲು ಮೂಗು ಅತಿಮುಖ್ಯವೆಂಬ ಅಂಶ ನನ್ನ ಪೂರ್ಣ ಗಮನಕ್ಕೆ ಬಂದುದು ಆಗಲೇ ! ಯಾರು ಯಾರದೋ ವ್ಯವಹಾರದಲ್ಲಿ ಮೂಗು ಹಾಯಿಸಿ ಬೈಸಿಕೊಂಡಿದ್ದು, ಡಬ್ಬತುಂಬಿದ್ದ ಯಾವುದೋ ಚೂರ್ಣವನ್ನು ಹೊತ್ತುಗೊತ್ತು ಇಲ್ಲದೆ ಮೂಗಿನ ಹೊಳ್ಳೆಗಳಲ್ಲಿ ತುಂಬಿಸಿಕೊಂಡು ಈಗ ಮೂಗಿನ ಒಳಮಾರ್ಗವನ್ನು ತೀರ ಅಗಲ ಕಿರಿದಾಗಿಸಿ ಉಸಿರುಕಟ್ಟಿಸಿಕೊಳ್ಳುವ ಸನ್ನಿವೇಶವನ್ನು ಸ್ವಯಂಸೃಷ್ಟಿಸಿಕೊಂಡಿದ್ದು ನನ್ನನ್ನು ನಾನೇ ಹೀಯಾಳಿಸಿಕೊಳ್ಳುವ ಪರಿಸ್ಥಿತಿಗೆ ನನ್ನನ್ನು ಒಯ್ದಿತು.

ಇನ್ನೀಗ ಈ ಜೀವನದಲ್ಲಿ ನನ್ನ ಕಿವಿ, ಮೂಗು, ಗಂಟಲುಗಳ ಬಗ್ಗೆ ವೈದ್ಯರು ಹೇಳಿದ್ದನ್ನು ಮಾಡಿ ಈ ಜೀವಿತಾವಧಿಯನ್ನು ಆದಷ್ಟು ವೃದ್ಧಿಸಿಕೊಳ್ಳುವುದು, ಅಂದರೆ ಮೃತ್ಯುದರ್ಶನವನ್ನು ಕೂಡಿದಷ್ಟು ಮುಂದೆ ಹಾಕುವುದು ಎಂಬ ದೃಢನಿರ್ಧಾರಕ್ಕೆ ಬಂದೆ, ಬೇರೆ ಯಾವ ಮಾರ್ಗವೂ ಕಾಣಿಸದೆ. ಆದರೆ ನಮ್ಮ ಶಾಸ್ತ್ರಗಳು ಹೇಳುವಂತೆ 'ಧ್ರುವಂ ಜನ್ಮ ಮೃತಸ್ಯ' ತಾನೇ? ಹೀಗೆ ಮುಂದಿನ ಬಾರಿ ದೊರೆತಾಗ ನನ್ನ ಜೀವನಕ್ರಮಗಳನ್ನೆಲ್ಲ ನೆಟ್ಟಗಾಗಿಸಿಕೊಂಡು ಯಾವ ಹುಂಬತನದ ಕಾರ್ಯಕ್ರಮವನ್ನೂ ನನ್ನದಾಗಿಸಿಕೊಳ್ಳದೆ ಬಾಳೋಣ ಎಂಬ ನಿಶ್ಚಯವನ್ನೂ ಮಾಡಿಕೊಂಡೆ. ಏನೇ ಇದ್ದರೂ ವೈದ್ಯರ ಎತ್ತರದ ಕುರ್ಚಿಯಲ್ಲಿ ಕುಳಿತಿದ್ದೂ ಸಾಕಷ್ಟು ಸಣ್ಣತನದ ಅನುಭವ ನನ್ನದಾಯಿತು, ನೀರೊಳಗಿದ್ದೂ ಬೆಮರ್ತನುರಗ ಪತಾಕಂ ಎನ್ನುವ ಆ ಸುಯೋಧನ ಅನುಭವದಂತೆ. ಮುಂದಿನ ಜನ್ಮದಲ್ಲಿ ನನಗೆ ಒಳ್ಳೆಯದಾಗಲಿ. ಪುರಂದರ ದಾಸರು ನನ್ನ ಮನದೊಳಗೆ ಹಾಡಿದರು.

ಮಾನವಜನ್ಮ ದೊಡ್ಡದು, ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ
ಕಣ್ಣು ಕೈ ಕಾಲ್ ಕಿವಿ(ಮೂಗುಕೂಡ) ಇರಲಿಕೆ
ಮಣ್ಣುಮುಕ್ಕಿ ಮರುಳಾಗುವರೆ!



ಬವಣೆಯ ಬದುಕು

ರುಕ್ಮಿಣಿ ಮಾಲಾ
ಮನೆಸಂಖ್ಯೆ ೮ 'ಅತ್ರಿ' ಕಾಮಾಕ್ಷಿ-
ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ವೀರಮ್ಮಳಿಗೆ ಇಬ್ಬರು ಮಕ್ಕಳು. ಆರತಿಗೊಬ್ಬಳು ಕೀರುತಿಗೊಬ್ಬ! ಅವರನ್ನು ಹತ್ತನೇ ಈಯತ್ತೆವರೆಗೆ ಬಲವಂತದಿಂದ ಶಾಲೆಗೆ ಕಳಿಸಿದಳು. ಮಕ್ಕಳು ತಾಯಿಯ ಒತ್ತಾಯಕ್ಕೆ ಮಣಿದು ಶಾಲೆಗೆ ಹೋಗಿ ಬರುತ್ತಿದ್ದರು. ಅಂತು ಇಂತು ಮಕ್ಕಳು ಹತ್ತನೆ ತರಗತಿಯವರೆಗೆ ಹಂತ ದಾಟಿದರು. ಅಲ್ಲಿಂದ ಮುಂದಕ್ಕೆ ದಾಟಲಾಗಲಿಲ್ಲ. ಶಿಕ್ಷಣ ಅಲ್ಲಿಗೇ ಕೈದು. ಅಲ್ಪ ಸ್ವಲ್ಪ ಓದಲು ಕಲಿತುದನ್ನು ಮರೆತೂ ಆಯಿತು.

ವೀರಮ್ಮಳ ಗಂಡ ಮಹಾ ಕುಡುಕ. ಇವಳು ನಾಲ್ಕು ಮನೆಗಳಲ್ಲಿ ಕಸ ಮುಸುರೆ ತಿಕ್ಕಿ ಕೆಲಸ ಮಾಡಿದರೆ, ಗಂಡನೆನಿಸಿಕೊಂಡವ ಇವಳು ಕೆಲಸ ಮಾಡುವ ಮನೆಗಳಿಗೆ ಹೋಗಿ ಇವಳ ಸಂಬಳವನ್ನು ಮುಂಗಡ ಪಡೆದು ಆ ದುಡ್ಡಲ್ಲಿ ಕಂಠಪೂರ್ತಿ ಕುಡಿದು ಬಂದು ಮನೆಯಲ್ಲಿ ಬಿದ್ದಿರುತ್ತಿದ್ದ. ವೀರಮ್ಮ ಅವನೊಂದಿಗೆ ಹತ್ತು ವರ್ಷ ಸಂಸಾರ ನಡೆಸಿದಳು. ಅನಂತರ ಅವನ ಉಪಟಳ ತಡೆಯಲಾರದೆ ಇಬ್ಬರು ಚಿಕ್ಕಮಕ್ಕಳನ್ನು ಕರೆದುಕೊಂಡು ಬೇರೆ ಮನೆ ಮಾಡಿದಳು. ಅವನು ಆ ಮನೆಗೂ ಬಂದು ಪೀಡಿಸಲಾರಂಭಿಸಿದ. ದುಡ್ಡು ಕೊಡದಿದ್ದರೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ.

''ಹುಟ್ಟಿಸಿದ ಮಕ್ಕಳಿಗೂ ಅವನು ಇದುವರೆಗೆ ಏನೂ ತಂದು ಕೊಟ್ಟವನಲ್ಲ'' ಎಂದು ವೀರಮ್ಮ ನೊಂದು ನುಡಿಯುತ್ತಾಳೆ. ಈ ಮನೆಯಲ್ಲಿ ಅವನ ಆಟ ಹೆಚ್ಚು ದಿನ ನಡೆಯಲಿಲ್ಲ. ವೀರಮ್ಮಳ ಮೂರು ಜನ ಅಣ್ಣಂದಿರು ಅವನನ್ನು ತಮ್ಮ ತಂಗಿ ಮನೆಯೊಳಗೆ ಕಾಲಿಡಲು ಬಿಡಲಿಲ್ಲ. ಅವರು ನೋಡಲು ದಾಂಡಿಗರಂತಿದ್ದರು. ಅಣ್ಣಂದಿರ ಹೆದರಿಕೆಯಿಂದ ಅವನೂ ವೀರಮ್ಮಳ ಮನೆ ಬಳಿ ಸುಳಿಯುವ ಧೈರ್ಯ ಮಾಡಲಿಲ್ಲ. ಗಂಡನ ಕಾಟ ತಪ್ಪಿ ವೀರಮ್ಮ ನೆಮ್ಮದಿಯ ಉಸಿರು ಬಿಟ್ಟಳು. ಮಕ್ಕಳ ಮತ್ತು ತನ್ನ ಹೊಟ್ಟೆಗೆ ನಾಲ್ಕು ಮನೆಗಳಲ್ಲಿ ಕೆಲಸ ಮಾಡುತ್ತಿದ್ದಳು. ವೀರಮ್ಮ ಕೆಲಸ ಮಾಡುವ ಒಂದು ಮನೆಯ ಯಜಮಾನಿ, ಅವಳ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ವಹಿಸಿಕೊಂಡಿದ್ದರು. ವೀರಮ್ಮ ಅವರಿಗೆ ಋಣಿಯಾಗಿದ್ದಳು.

ವೀರಮ್ಮಳ ಮಗಳು ಪ್ರಾಪ್ತ ವಯಸ್ಸಿಗೆ (೧೮ವರ್ಷ) ಬಂದಾಗ ಅವಳಿಗೆ ಮದುವೆ ಮಾಡಿದಳು. ಅಳಿಯ ಏನು ಕೆಲಸ ಮಾಡುತ್ತಾನೆ ಎಂದು ಅವಳಿಗೆ ತಿಳಿಯದು. ಕೇಳುವ ಕ್ರಮವಿಲ್ಲವಂತೆ. ಅಳಿಯನಿಗೆ ಎರಡು ಸಾವಿರ ರೂಪಾಯಿ ಬೆಲೆಬಾಳುವ ಕೈಗಡಿಯಾರ, ಉಂಗುರ, ಸರ ಬಳುವಳಿ ಕೊಟ್ಟು ಅದ್ಧೂರಿಯಿಂದ ಮಗಳ ಮದುವೆ ಮಾಡಿದಳು. ದೊಡ್ಡ ಛತ್ರದಲ್ಲೇ ಮದುವೆ ಮಾಡಬೇಕು ಎಂಬ ಒತ್ತಡ ಗಂಡಿನ ಕಡೆಯವರಿಂದ. ''ಮದುವೆ ಜೋರಾಗಿ ನಡೆಸಿಕೊಡಬೇಕು, ವಾಲಗ ಇರಬೇಕು, ಫೋಟೊ ತೆಗೆಯಬೇಕು, ವೀಡಿಯೋ ಆಗಬೇಕು ಎಂದಿದ್ದಾನೆ ನನ್ನಳಿಯ. ನಮ್ಮಲ್ಲಿ ಹತ್ತು ಸಾವಿರವಾದರೂ ವರದಕ್ಷಿಣೆ ಪಡೆಯದೆ ಯಾರೂ ಮದುವೆ ಮಾಡಿಕೊಳ್ಳುವುದಿಲ್ಲ. ನಮ್ಮ ಜಾತಿಯವರಲ್ಲಿ ಹಾಂಗೇ. ಅಂಥಾದ್ದರಲ್ಲಿ ನಮ್ಮಳಿಯ ಒಂದು ಕಾಸೂ ಕೇಳಿರಲಿಲ್ಲ. ಅದಕ್ಕೆ ಮದುವೆ ಆದರೂ ಚೆಂದಾಗಿ ಮಾಡಬೇಡವೇ?'' ಎಂದು ವೀರಮ್ಮಳ ವಾದ. ಹಾಗೂ ಹೀಗೂ ಎಲ್ಲಕಡೆ ಸಾಲ ಮಾಡಿ ಒಂದು ಲಕ್ಷ ಖರ್ಚು ಮಾಡಿ ಮಗಳ ಮದುವೆ ಮಾಡಿ ಮುಗಿಸಿದಳು

ಮಗಳನ್ನು ಅಳಿಯನೊಂದಿಗೆ ಅವನ ಮನೆಗೆ ಕಳಿಸಿಕೊಟ್ಟಳು. ಅಳಿಯನಿಗೆ ಏನು ಕೆಲಸ ಎಂದು ಈಗಲಾದರೂ ಕೇಳಿದೆಯಾ ಎಂದು ವೀರಮ್ಮಳನ್ನು ಕೇಳಿದರೆ, ''ನನಗೆ ಯಾಕೆ ಬೇಕು ಅವ್ವಾ, ಏನೊ ಸಾಲಸೋಲ ಮಾಡಿ ಮಗಳನ್ನು ಮದುವೆ ಮಾಡಿ ಕೊಟ್ಟಾಯಿತು. ಅವನು ಏನು ಕೆಲಸವಾದರೂ ಮಾಡಿ ನನ್ನ ಮಗಳನ್ನು ಸಾಕುತ್ತಾನೆ. ನಾನು ಯಾಕೆ ಕೇಳಬೇಕು? ಹೆಂಗಾದರೂ ಇರಲಿ, ನನ್ನ ಮಗಳನ್ನು ಮಾತ್ರ ಚೆಂದಾಗಿ ನೋಡಿಕೊಂಡರೆ ಸಾಕು ಅಷ್ಟೆ'' ಎನ್ನುತ್ತಾಳೆ. ಅಳಿಯ ಯಾವುದೊ ದೂರದ ಊರಲ್ಲಿದ್ದಾನೆ. ಅವನು ಏನು ಕೆಲಸ ಮಾಡುತ್ತಾನೆ ಎಂದು ಕೇಳಬೇಕೆಂಬ ಅಗತ್ಯ ಅವಳಿಗಿಲ್ಲ. ಮಗಳಿಗೂ ತನ್ನ ಗಂಡ ಯಾವ ಊರಲ್ಲಿ, ಏನು ಕೆಲಸ ಮಾಡುತ್ತಾನೆ ಎಂದು ಗೊತ್ತಿರುವುದು ಸಂಶಯ.

ವೀರಮ್ಮಳ ಮಗ ಹತ್ತನೇ ಈಯತ್ತೆ ಪಾಸಾಗದೆ ಓದಿಗೆ ಶರಣು ಹೊಡೆದು ಒಂದು ಬ್ರೆಡ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ. ತನ್ನ ಹದಿನಾರನೇ ವಯಸ್ಸಿನಲ್ಲಿಯೇ ದುಡಿಮೆಗೆ ಇಳಿದ. ಎಂಟು ತಿಂಗಳು ಅಲ್ಲಿ ನಿಯತ್ತಿನಿಂದ ಕೆಲಸ ಮಾಡಿದ. ಅನಂತರ ಆ ಕೆಲಸ ಬಿಟ್ಟು ಕಂಪ್ಯೂಟರ್ ಸೆಂಟರ್‌ನಲ್ಲಿ ಕೆಲಸಕ್ಕೆ ಸೇರಿದ. ಬ್ರೆಡ್ ಅಂಗಡಿ ಮನೆಯಿಂದ ತುಂಬ ದೂರ, ಸೈಕಲಿನಲ್ಲಿ ಹೋಗಿಬರಲು ಕಷ್ಟ ಎಂಬ ಕಾರಣಕ್ಕೆ ಅವನು ಕೆಲಸ ಬಿಟ್ಟದ್ದು ಎಂದು ತಾಯಿಯ ವಿವರಣೆ. ಕಂಪ್ಯೂಟರ್ ಸೆಂಟರ್‌ನಲ್ಲಿ ಐದು ತಿಂಗಳು ಶ್ರದ್ಧೆಯಿಂದ ದುಡಿದ. ಸಂಬಳ ಸರಿಯಾದ ಸಮಯಕ್ಕೆ ಸಿಗುತ್ತಿತ್ತು. ಮನೆಗೂ ಹತ್ತಿರವಿತ್ತು. ಎಲ್ಲ ಸರಿಹೋಗುತ್ತದೆ ಎನ್ನುವಾಗ ಆ ಕೆಲಸವನ್ನೂ ಬಿಡುವ ಪರಿಸ್ಥಿತಿ ಎದುರಾಯಿತು. ಅಲ್ಲಿ ಮುಖ್ಯಸ್ಥರಾಗಿದ್ದವರು ಬೇರೆ ಕಡೆಗೆ ವರ್ಗವಾಗಿ ಹೋದ ತರುವಾಯ ಈ ಹುಡುಗನಿಗೆ ಸಂಬಳ ಸರಿಯಾಗಿ ಸಿಗುತ್ತಿರಲಿಲ್ಲ. ತಿಂಗಳು ಕಳೆದು ಹದಿನೈದು ದಿನಗಳಾದರೂ ಪಗಾರ ಕೊಡುತ್ತಿರಲಿಲ್ಲ. ಅಲ್ಲಿ ಕೆಲಸಕ್ಕೆ ಸೇರಿದ ಹೊಸ ಮುಖ್ಯ ಅಧಿಕಾರಿಯವರಲ್ಲಿ ಸಂಬಳ ಕೇಳಿದರೆ ''ನಿನ್ನಿಂದ ಕೆಲಸ ಮಾಡಲು ಆಗದಿದ್ದರೆ ಬಿಟ್ಟು ಹೋಗು'' ಎನ್ನುತ್ತಿದ್ದರಂತೆ. ಇದರಿಂದ ಹತಾಶೆಗೊಂಡ ಹುಡುಗ ಆ ಕೆಲಸ ಬಿಟ್ಟು ಒಂದು ಐಸ್‌ಕ್ರೀಮ್ ಪಾರ್ಲರಿನಲ್ಲಿ ಕೆಲಸಕ್ಕೆ ಸೇರಿದ. ಸಂಬಳವೂ ಹೆಚ್ಚು ಕೊಡುತ್ತಾರೆ ಎಂಬ ಸಂತಸವೂ ಈ ಕೆಲಸಕ್ಕೆ ಸೇರಲು ಪ್ರೇರಣೆ ನೀಡಿತು.

ಹುಡುಗ ಬೆಳಗ್ಗೆ ಬೇಗನೆ ಎದ್ದು ಮನೆ ಮನೆಗೆ ದಿನಪತ್ರಿಕೆ ಹಂಚಿ, ಅನಂತರ ಒಂದು ಕಚೇರಿಯಲ್ಲಿ ಗುಡಿಸಿ ಸಾರಿಸಿ ಮನೆಗೆ ಬಂದು ತಿಂಡಿ ತಿಂದು ಪಾರ್ಲರ್‌ಗೆ ಹೋಗಿ ರಾತ್ರಿ ಹತ್ತು ಗಂಟೆಗೆ ಮನೆಗೆ ಬರುತ್ತಾನೆ. ಬೆಳಗ್ಗೆ ಏಳರಿಂದ ಸುರುವಾದ ದುಡಿತ ರಾತ್ರಿ ಹತ್ತು ಗಂಟೆಯವರೆಗೂ ಮುಂದುವರಿಯುತ್ತದೆ. ಇಷ್ಟು ದುಡಿದರೂ ಸ್ವಂತಕ್ಕೆಂದು ಅವನು ಒಂದು ಕಾಸು ಬಳಸುವಂತಿಲ್ಲ. ದುಡಿದ ನಾಲ್ಕು ಕಾಸೆಲ್ಲವು ಅಕ್ಕನ ಮದುವೆಗೆ ಮಾಡಿದ ಸಾಲ ತೀರಿಸಲು ಮೀಸಲು. ಐಸ್‌ಕ್ರೀಮ್ ಪಾರ್ಲರಿನ ಕೆಲಸವನ್ನೂ ಬಿಡುವ ಪ್ರಸಂಗ ಬಂತು. ಅಲ್ಲಿ ಇವನನ್ನು ಶೋಷಣೆ ಮಾಡಿದರು. ಕತ್ತೆ ದುಡಿತ, ಸಂಬಳ ನಿಗದಿತವಾಗಿ ಕೊಡುತ್ತಿರಲಿಲ್ಲ. ಇವನೋ ಬಹಳ ಸಾಧು. ಅಲ್ಲಿ ಅವರೊಂದಗೆ ಏಗಲು ಇನಿಂದಾಗಲಿಲ್ಲ. ಈಗ ಒಂದು ಆಸ್ಪತ್ರೆಯಲ್ಲಿ ವಾರ್ಡ್‌ಬಾಯ್ ಕೆಲಸ ಸಿಕ್ಕಿದೆ. ಅಲ್ಲಿ ಅವರೊಂದಿಗೆ ಏಗಲು ಇವನಿಂದಾಗಲಿಲ್ಲ. ಈಗ ಒಂದು ಆಸ್ಪತ್ರೆಯಲ್ಲಿ ವಾರ್ಡ್‌ಬಾಯ್ ಕೆಲಸ ಸಿಕ್ಕಿದೆ. ಅಲ್ಲಿ ಹೆಚ್ಚಿನ ಕೆಲಸವೇನು ಇಲ್ಲ. ಮನಸ್ಸಿಗೆ ನೆಮ್ಮದಿ ದೊರೆತಿದೆ. ನಿಷ್ಠೆಯಿಂದ ಕೆಲಸ ಮಾಡುತ್ತಾನೆ. ಸಂಬಳ ಸರಿಯಾಗಿ ಸಿಗುತ್ತಿದೆ.

ಏನೋ ಹೇಗೋ ದುಡಿದು ಸಾಲ ತೀರುತ್ತದೆ ಎಂದು ನೆಮ್ಮದಿಯಿಂದ ತಾಯಿ ಮಗ ಯೋಚಿಸಿದರೆ ಮದುವೆಯಾದ ಮಗಳು

ಬಾಣಂತನಕ್ಕೆಂದು ಬಂದಳು. ಅವಳ ಸೀಮಂತಕ್ಕೆ ಪುನಃ ಸಾಲ. ಹೆರಿಗೆ ಸುಸೂತ್ರವಾಗಿ ನಡೆದು ಗಂಡುಮಗುವನ್ನು ಹಡೆದಳು. ಆಸ್ಪತ್ರೆ ಖರ್ಚಿಗಾಗಿ ಸಾಲ ಏರಿತು. ಆಸ್ಪತ್ರೆಯಲ್ಲಿ ಹೆರಿಗೆಯಾದ ದಿನವೇ ಅದೇ ರಾತ್ರಿ ಮನೆಗೆ ಕರೆದುಕೊಂಡು ಬಂದರೂ ರೂ. ಒಂದು ಸಾವಿರವನ್ನು ಇವರ ಕೈಯಿಂದ ಕಿತ್ತಿದ್ದರು.

ಮಗಳ ಬಾಣಂತನಕ್ಕಾಗಿ ವೀರಮ್ಮ ರಜೆ ಹಾಕಿದಳು. ಅವಳು ದಿನನಿತ್ಯದ ಊಟದ ಖರ್ಚಿಗಾಗುವಷ್ಟು ದುಡಿಯುತ್ತಿದ್ದಳು. ಈಗ ಅದಕ್ಕೂ ಸಂಚಕಾರ, ಮಗ ದುಡಿಯುತ್ತಿದ್ದ ನಾಲ್ಕು ಕಾಸಿನಲ್ಲಿ ಮಗಳ ಆರೈಕೆ, ತಮ್ಮಿಬ್ಬರ ಹೊಟ್ಟೆಗೂ ಅಲ್ಲದೆ ಅಳಿಯನಿಗೂ ಊಟ ಹಾಕಬೇಕಾಗಿ ಬಂತು. ಹೆಂಡತಿ ತವರಿನಲ್ಲಿದ್ದಾಳೆಂದು ಈ ಭೂಪನೂ ಅತ್ತೆ ಮನೆಯಲ್ಲೇ ರಥ್ಥಾಂಡ ಊರಿದ. ವೀರಮ್ಮ ಮಗಳ ಬಾಣಂತನದೊಂದಿಗೆ ಅಳಿಯನ ಉಪಚಾರವನ್ನೂ ಮಾಡಬೇಕಾಯಿತು. ದೂರದ ಊರಿನಲ್ಲಿದ್ದ ಅಳಿಯ, ಹೆಂಡತಿಯ ಹೆರಿಗೆಗೆ ಒಂದು ತಿಂಗಳ ಮೊದಲು ಊರಿಗೆ ಬಂದವ ತಿರುಗಿ ಮತ್ತೆ ಹೋಗಲಿಲ್ಲ. ಈಗ್ಗೆ ಹತ್ತು ತಿಂಗಳಿನಿಂದಲೂ ಅತ್ತೆ ಮನೆಯಲ್ಲೇ ಅವನ ಬಿಡಾರ. ಬೆಳಿಗ್ಗೆ ತಿಂಡಿ ತಿಂದು ಹೋದರೆ ತಿರುಗಿ ಮತ್ತೆ ರಾತ್ರಿಗೇ ಮನೆಗೆ ಬರುವುದು. ''ಇಲ್ಲಿ ನಿನ್ನಳಿಯ ಏನು ಕೆಲಸ ಮಾಡುತ್ತಾನೆ?'' ಎಂದು ವೀರಮ್ಮಳನ್ನು ಕೇಳಿದರೆ ''ಸಿಟಿಯಲ್ಲಿ ಬಳೆ ವ್ಯಾಪಾರ ಮಾಡುತ್ತಾನಂತೆ'' ಎನ್ನುತ್ತಾಳೆ. ಬರುವಾಗ ಮನೆ ಖರ್ಚಿಗೆ ಏನಾದರೂ ತರುತ್ತಾನ ಎಂದು ಕೇಳಿದರೆ, ''ಇಲ್ಲ ಅವ್ವ, ಬರಿಗೈಯಿಂದ ಬರುತ್ತಾನೆ. ದಿನಾ ಅವನಿಗೆ ಊಟಕ್ಕೆ ಮಾಂಸ ಆಗಬೇಕು. ಮಾಂಸವನ್ನಾದರೂ ತಂದು ಕೊಟ್ಟರೆ ಮಾಡಿಹಾಕಬಹುದು. ಅದನ್ನೂ ತರುವುದಿಲ್ಲ'' ಎಂದು ಗೋಳಿಡುತ್ತಾಳೆ.

ಮಗವಿಗೆ ಒಂದು ತಿಂಗಳಾದ ಮೇಲೆ ವೀರಮ್ಮ ಕೆಲಸಕ್ಕೆ ಬರಲು ಪ್ರಾರಂಭಿಸಿದಳು. ಇಲ್ಲದಿದ್ದರೆ ಹೊಟ್ಟೆ ಪಾಡು ನಡೆಯಬೇಕಲ್ಲ. ಅವಳ ಆರೋಗ್ಯವೂ ದಿನೇ ದಿನೇ ಸ್ವಲ್ಪ ಸ್ವಲ್ಪವೇ ಹದಗೆಡತೊಡಗಿತು. ಶ್ರೀಮಂತರ ಸೊತ್ತಾದ ರಕ್ತದೊತ್ತಡ ಖಾಯಿಲೆಯನ್ನು ಸಾಲದ ಚಿಂತೆಯಲ್ಲಿ ತನ್ನ ಬಗಲಿಗೆ ಎಳೆದುಕೊಂಡಳು.

ಬರುವೆಲ್ಲ ಬೇನೆಗಂ ಮದ್ದನಾರಿರಿಸಿಹರು?
ನರರ ಕೀಳ್ತನಕೆಲ್ಲ ಪರಿಹಾರವೆಂತು?
ಕಿರಿದು ಪಲ್ಲನು ತಾಳಿಕೊಳಲೇ ಬೇಕಷ್ಟಿಷ್ಟು
ಧರೆಯಂತರುಷ್ಣವನು ಮಂಕುತಿಮ್ಮ

ಅವಳ ಖಾಯಿಲೆಗೆ ಔಷಧಿ ಖರ್ಚು ಬೆಳೆದು, ಸಾಲದ ಮೊತ್ತವೂ ಏರುತ್ತಲಿತ್ತು. ತಿಂಗಳಿಗೆ ನಾಲ್ಕೈದು ದಿನ ರಜೆ ಹಾಕತೊಡಗಿದಳು. ಅದಕ್ಕೆ ಕಾರಣಗಳು : ಒಂದು ದಿನ ಮಗುವಿಗೆ ಸೌಖ್ಯವಿಲ್ಲ, ಮತ್ತೊಂದು ದಿನ ಅವಳಿಗೇ ಅಸೌಖ್ಯ, ಮಗುದೊಂದು ದಿನ ರಾತ್ರಿ ಮಗು ನಿದ್ದೆ ಮಾಡಲೇ ಇಲ್ಲ, ಒಂದೇ ಸಮ ಅಳುತ್ತಲಿತ್ತು. ಇಷ್ಟು ಕಷ್ಟ ಸಾಲದೆಂದು ಮಗ ಹೊಟ್ಟೆನೋವಿನಿಂದ ಸಾಯುವ ಮಟ್ಟಕ್ಕೂ ಹೋಗಿ ಎರಡು ದಿನ ಆಸ್ಪತ್ರೆಯಲ್ಲಿದ್ದು ಚೇತರಿಸಿಕೊಂಡು ಮನೆಗೆ ಬಂದ. ಇಂಥ ತಾಪತ್ರಯಗಳ ಮಧ್ಯೆಯೂ ಯಾರ ಅರಿವು, ಹಂಗು, ನೋವು ಇಲ್ಲದೆ ಕಾಲ ಸರಿಯುತ್ತಲೇ ಇತ್ತು.

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು
ಬಿದಿಯ ಬಾಯಿಗೆ ಕವಳವಾಗದುಳಿಯುವನೆ?
ಎದೆಯ ಸುಕ್ಕಾಗಿಸುತ, ಮತಿಗದೆಯ ಪಿಡಿದು ನೀ-
ನೆದುರು ನಿಲೆ ಬಿದಿಯೊಲಿವ ಮಂಕುತಿಮ್ಮ

ವೀರಮ್ಮಳ ಪದ್ಧತಿಯ ಬಾಣಂತನದಲ್ಲಿ ಆಹಾರ ಪಥ್ಯಗಳಿವೆ. ಬಾಣಂತಿ ಬಾಳೆಹಣ್ಣು ತಿನ್ನುವಂತಿಲ್ಲ. ಬಾಳೆಹಣ್ಣು ತಾಯಿ ತಿಂದರೆ ಮಗು ಹೆಳವನಾಗುತ್ತದಂತೆ ! ಇಂಥ ಮೂಢ ನಂಬಿಕೆಯನ್ನು ಅಕ್ಕಪಕ್ಕದ ಮನೆಯವರು ಇವಳ ತಲೆಗೆ ತುಂಬಿದ್ದರು. ತರಕಾರಿಗಳಲ್ಲಿ ಬದನೆ

ಕಾಯಿ, ಆಲೂಗಡ್ಡೆ, ತಗಣಿಕಾಳು, ಅವರೆ ಕಾಳು ನಿಷಿದ್ಧ. ಆದರೆ ಇವನ್ನೆಲ್ಲ ಬಾಣಂತಿಗೆ ಅಲ್ಪಸ್ವಲ್ಪ ಕೊಟ್ಟಿದ್ದಾಳೆ. ಈ ತರಕಾರಿಗಳಿಂದ ಮಗುವಿಗೆ ಏನೂ ಹಾನಿ ಇಲ್ಲವೆಂದು ಹೇಳಿದ್ದರಿಂದ ಧೈರ್ಯದಲ್ಲಿ ಕೊಟ್ಟಿದ್ದಾಳೆ. ಬಾಣಂತಿಗೆ ಶಕ್ತಿ ಬರಲು ಮಾಂಸ ಕೊಡಲೇಬೇಕು.

''ಬಾಣಂತಿ ಬಾಳೆಹಣ್ಣು ತಿಂದರೆ ಮಗುವಿಗೆ ಏನೂ ಆಗುವುದಿಲ್ಲ. ನಾಲ್ಕು ತಿಂಗಳ ಮಗುವಿಗೂ ಬಾಳೆಹಣ್ಣು ಗಿವುಚಿ ತಿನ್ನಿಸಬಹುದು. ಇದು ಆರೋಗ್ಯಕ್ಕೆ ಬಹಳ ಒಳ್ಳೆಯದು,'' ಎಂದು ತಿಳಿ ಹೇಳಿದರೆ, ''ಅಯ್ಯೋ ಅದೊಂದು ಬೇಡ ಅವ್ವ, ಹಿರೀಕರು ಹೇಳುತ್ತಾರೆ? ಅವನ್ನೆಲ್ಲ ನಾವು ಪಾಲಿಸಬೇಕು. ಒಂದು ಪಕ್ಷ ನಾನು ಅವಳಿಗೆ ಬಾಳೇಹಣ್ಣು ತಿನ್ನಲು ಕೊಟ್ಟು, ಆಮೇಲೆ ಏನಾದರೂ ಹೆಚ್ಚುಕಮ್ಮಿ ಯಾದರೆ ಏನು ಮಾಡಲಿ? 'ಮಗುವಿಗೆ ಏನಾದರು ಆದರೆ ನೀನೇನು ಕಾಸು ಗಂಟುಕಟ್ಟಿ ಇಟ್ಟಿದ್ದೀಯ? ಸುಮ್ಮಿರು' ಎಂದು ನಮ್ಮ ಪಕ್ಕದ ಮನೆಯವರು ಹೆದರಿಸಿದರು. ಹಾಗಾಗಿ ಬಾಳೆಹಣ್ಣು ಕೊಡಲು ಧೈರ್ಯ ಬರಲೇ ಇಲ್ಲ. ಒಮ್ಮೆ ಅವಳನ್ನು, ಮಗುವನ್ನು ಜೋಪಾನವಾಗಿ ಅವಳ ಮನೆಗೆ ಕಳುಹಿಸಿ ಕೊಡುತ್ತೇನೆ, ಅಷ್ಟಾದರೆ ಸಾಕು'' ಎನ್ನುವ ವೀರಮ್ಮಳ ಮುಗ್ಧ ಮೂಢನಂಬಿಕೆಯನ್ನು ಹೇಗೆ ಬಿಡಿಸುವುದು?

ಒಂದು ದಿನ ವೀರಮ್ಮ ಅವಳ ಮೊಮ್ಮಗನ ಆಟವನ್ನು ಸಂತೋಷದಿಂದ ಹೀಗೆ ವಿವರಿಸಿದಳು : ''ನೋಡಿ ಅವ್ವ, ನಿನ್ನೆ ಬೇಕರಿ ಬಿಸ್ಕೆಟ್ಟನ್ನು ಅವನಿಗೆ ಕೊಟ್ಟಿದ್ದೆ. ಏನು ಚೆನ್ನಾಗಿ ಬಿಸ್ಕೆಟ್ಟನ್ನು ಚೀಪಿ ಚೀಪಿ ಆಟ ಆಡುತ್ತ ಆಡುತ್ತ ನೆಲದಲ್ಲಿ ಇಡೀ ಉರುಳಾಡಿ ಅರ್ಧ ಬಿಸ್ಕೆಟ್ ತಿಂದೇ ಬಿಟ್ಟ''.

''ಸಣ್ಣ ಮಗುವಿಗೆ ಬೇಕರಿ ಬಿಸ್ಕೆಟ್ ಕೊಡಬಾರದು. ಬಾಳೆಹಣ್ಣು, ಮೂಸಂಬಿ, ಕಿತ್ತಳೆಹಣ್ಣುಗಳನ್ನು ಗಿವುಚಿ ರಸ ತೆಗೆದು ಕುಡಿಸು''.

''ಆಯಿತು, ಇನ್ನು ಅಂಥ ಹಾಳು ಮೂಳು ಕೊಡಾಕಿಲ್ಲ. ಕೊಡಬಾರದೆಂದು ನನಗೆ ಗೊತ್ತಿರಲಿಲ್ಲ'' ಎಂದು ನಮ್ರತೆಯಿಂದ ಒಪ್ಪಿಕೊಂಡಳು.

''ಬಾಳೆಹಣ್ಣನ್ನು ನಿನ್ನ ಮಗಳಿಗೆ ಕೊಡು. ತಿಂದರೆ ಅವಳ ಆರೋಗ್ಯಕ್ಕೆ ಒಳ್ಳೆಯದು. ಇದರಿಂದ ಅವಳ ಮಗುವಿಗೆ ಏನೂ ಹಾನಿಯಾಗುವುದಿಲ್ಲ. ಹೆದರಬೇಡ'' ಎಂದು ವೀರಮ್ಮಳಿಗೆ ಸಮಯ ಸಿಕ್ಕಿದಾಗಲೆಲ್ಲ ಬುದ್ಧಿ ಹೇಳಿದರೆ ''ಬಾಳೆಹಣ್ಣು ಕೊಟ್ಟರೆ ಏನು ಭಯವಿಲ್ಲ ಎಂದು ನೀವು ಇಷ್ಟು ಧೈರ್ಯ ಕೊಟ್ಟಿರಲ್ಲ, ಇನ್ನುಮುಂದೆ ಅವಳಿಗೆ ಬಾಳೆಹಣ್ಣು ಕೊಡುತ್ತೇನೆ. ಮೊನ್ನೆ ನನ್ನ ಮಗಳು ಬಾಳೆಹಣ್ಣಿಗಾಗಿ ಏನು ಗೋಗರೆದಳೂಂತೀರ 'ಅಮ್ಮ ಅಮ್ಮ ಒಂದೇ ಒಂದು ಬಾಳೆಹಣ್ಣು ಕೊಡು, ತಿನ್ನದೆ ಬಾಳ ಸಮಯವಾಯಿತು' ಎಂದು ನನ್ನನ್ನು ಪೀಡಿಸಿದಳು. ನಾನು ಹೆದರಿಕೊಂಡು ಕೊಡಲೇ ಇಲ್ಲ. ನೀವು ಮೊನ್ನೆ ಆರು ಹಣ್ಣು ಕೊಟ್ಟಿದ್ದೀರಲ್ಲ, ಅವನ್ನು ಅಲ್ಲೇ ಇಟ್ಟರೆ ಮಗಳು ತಿಂದರೆಂದು ಹೆದರಿ ಎಲ್ಲವನ್ನು ನಾನೂ ಮಗನೂ ಸೇರಿ ತಿಂದೆವು'' ಎಂದು ಆ ಘಟನೆಯನ್ನು ವಿವರಿಸಿದಳು.

ಒಂಬತ್ತು ತಿಂಗಳು ಮಗಳ ಬಾಣಂತನ ಸಾಂಗವಾಗಿ ನೆರವೇರಿಸಿದ ಮೇಲೆ ಮಗುವಿನ ಓಲೆ, ಉಂಗುರ, ಸರ, ಗೆಜ್ಜೆ ಮುಂತಾದ ಆಭರಣಗಳನ್ನ ಮತ್ತು ಹೊಸ ಅಂಗಿ, ಮಗಳಿಗೆ ಸೀರೆ ಇಷ್ಟನ್ನು ಕೊಟ್ಟು ಮಗಳನ್ನು ಮೊಮ್ಮಗುವನ್ನು ಕ್ಷೇಮವಾಗಿ ಮನೆಗೆ ಕಳುಹಿಸಿಕೊಡಬೇಕು. ಇವಕ್ಕೆಲ್ಲ ವೀರಮ್ಮಳ ಸಾಲದ ಮೊತ್ತ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದೆ.

''ಮಗುವಿಗೆ ಉಂಗುರ ಯಾಕೆ ಹಾಕಬೇಕು? ಮಗು ದೊಡ್ಡದಾದನಂತರ ಅದನ್ನು ಹಾಕಲಾಗುವುದಿಲ್ಲ, ಈಗಲೂ ಹಾಕುವಂತಿಲ್ಲ. ಅದನ್ನು ತೆಗೆದು ಬೀಸಾಕೀತು ಇಲ್ಲವೇ ಬಾಯಿಗೆ ಹಾಕಿಕೊಂಡೀತು. ಸುಮ್ಮಗೆ ಉಂಗುರ ಮಾಡಿಸಿ ದುಡ್ಡು ದಂಡ ಮಾಡಬೇಡ. ಈಗ ನಿನ್ನ

ಕೈಯಲ್ಲೂ ಆಗುವುದಿಲ್ಲ. 'ಮಗು ದೊಡ್ಡ ದಾದ ಮೇಲೆ ಮಾಡಿಸಿ ಕೊಡುತ್ತೇನೆ' ಎಂದು ಆಶ್ವಾಸನೆ ಕೊಡು. ಈ ರಾಜಕಾರಣಿಗಳೆಲ್ಲ ಎಂತೆಂಥ ಆಶ್ವಾಸನೆಗಳನ್ನು ಕೊಡುತ್ತಾರೆ. ಅವನ್ನೆಲ್ಲ ಅವರು ನೆರವೇರಿಸಬೇಕೆಂದೇನು ನಿಯಮವಿಲ್ಲ. ಹಾಗೆಯೇ ನಿನ್ನದೇನು ಬಿಡು. ಅಳಿಯನಿಗೆ ನಿನ್ನ ಕಷ್ಟವನ್ನು ಹೇಳಿಕೊ'' ಎಂದು ವಿವೇಕ ಹೇಳಿದರೆ-

''ಅದು ಹೇಗಾಗುತ್ತದವ್ವ, ಇದರಿಂದ ನಾಳೆ ಮನಸ್ತಾಪ ಹೆಚ್ಚಿ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳದಿದ್ದರೆ ಏನು ಮಾಡುವುದು? ಈಗ ಎಲ್ಲ ಕಡೆ ಸೀಮೆಎಣ್ಣೆ ಸುರಿದು ಸೊಸೆಯನ್ನು ಸುಟ್ಟರು ಎಂಬ ಸುದ್ದಿಯೇ ದಿನ ಬೆಳಗಾದರೆ. ಹಾಗಾಗಿ ಭಯವಾಗುತ್ತದೆ. ಆದ ಕಾರಣ ಸಾಲ ಮಾಡಿ ಯಾದರೂ ಅವನ್ನೆಲ್ಲ ಕೊಟ್ಟೇ ಕಳುಹಿಸು ವುದು. ನನ್ನ ಮಗಳಿಗೆ ನಮ್ಮ ಕಷ್ಟ ಅರ್ಥವಾಗುತ್ತದೆ. ಆದರೆ ಅಳಿಯನಿಗೆ ಅರ್ಥವಾಗಬೇಕಲ್ಲ? ಅರ್ಥಮಾಡಿಕೊಳ್ಳುವಂಥ ಅಳಿಯನಾಗಿದ್ದರೆ ಈ ಹತ್ತು ತಿಂಗಳಿನಿಂದ ಅವನು ಇಲ್ಲೇ ಇರುತ್ತಿದ್ದನಾ? ಇಷ್ಟು ದಿನದಲ್ಲಿ ಒಂದು ಕೆ.ಜಿ. ಅಕ್ಕಿಯನ್ನೂ ತಂದುಕೊಟ್ಟವನಲ್ಲ. ಸುಮ್ಮಗೆ ತಿಂದುಂಡು ಹೋಗುತ್ತಾನೆ. ಮನೆಯಲ್ಲಿ ಮಗುವಿದೆ, ಅದಕ್ಕಾದರೂ ಒಂದು ಅರ್ಧಲೀಟರ್ ಹಾಲು ತಂದವನಲ್ಲ. ಅಂಥ ಅವನು ನಮ್ಮ ಕಷ್ಟವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾನೆ? ಹೇಗಾದರೂ ದುಡಿದು ದುಡಿದು ನಾನು ನನ್ನ ಮಗ ಸಾಲ ತೀರಿಸುತ್ತೇವೆ. ನನ್ನ ಅಣ್ಣ ಉಂಗುರ ಮಾಡಿಸಿಕೊಡುತ್ತೇನೆಂದಿದ್ದಾನೆ. ಅವನಿಗೂ ಕಷ್ಟವೇ. ಅವನೊಬ್ಬನ ಸಂಬಳದಲ್ಲಿ ಹೆಂಡತಿ ಮಕ್ಕಳನ್ನು ಸಾಕಬೇಕು. ಸ್ವಂತ ಮನೆ ಮಾಡಬೇಕು ಎಂಬ ಆಲೋಚನೆಯಲ್ಲಿದ್ದಾನೆ. ಹೇಗೋ ಆಗುತ್ತದೆ ಬಿಡಿ. ಆ ದೇವರು ಏನಾದರೂ ಒಂದು ದಾರಿ ತೋರಿಸುತ್ತಾನೆ. ಮಗಳನ್ನು ಅವಳ ಮನೆಗೆ ಕಳುಹಿಸಿಕೊಟ್ಟರೆ ಮತ್ತೆ ಖರ್ಚು ಕಡಿಮೆಯಾಗುತ್ತದೆ. ನಾನೂ ಮಗನೂ ಇದ್ದದ್ದನ್ನು ತಿಂತೀವಿ. ಸಾಲ ತೀರಿಸಬಹುದು'' ಎಂದು ಆಶಾಭಾವನೆ ವ್ಯಕ್ತಪಡಿಸಿದಳು.

ಮಗಳನ್ನು ಮೊಮ್ಮಗುವನ್ನು ಮನೆಗೆ ಕಳುಹಿಸಿ ನೀನು ನೆಮ್ಮದಿಯ ಉಸಿರು ಬಿಡುವಷ್ಟರಲ್ಲಿ ಪುನಃ ಅವಳು ಬಸಿರಾಗಿ ಬಾಣಂತನಕ್ಕೆಂದು ಮನೆಗೆ ಬಂದರೆ ಏನು ಮಾಡುತ್ತಿ? ಎಂದು ಅವಳನ್ನು ಪ್ರಶ್ನಿಸಿದರೆ ''ನನ್ನಿಂದ ಆಗುವುದಿಲ್ಲ. ಒಂದನ್ನು ಹೇಗೋ ನಿಭಾಯಿಸಿದೆವು. ಇನ್ನೊಂದನ್ನು ನೀವೇ ನೋಡಿಕೊಳ್ಳಬೇಕು ಎನ್ನುತ್ತೇನೆ ಅಷ್ಟೆ'' ಎಂದಳು.

ಆದರೆ ಅವಳು ಈಗ ಹಾಗೆಂದು ಹೇಳಿದರೂ ಮುಂದೆ ಮಗಳು ತಿರುಗಿ ಗರ್ಭಿಣಿಯಾದಾಗ ಇದೇ ಬವಣೆಯಿಂದ ಮಗದೊಮ್ಮೆ ಸಾಲಗಾರಳಾಗಿ ಬಾಣಂತನ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಬರುತ್ತದೆ ಮಗಳು ಎಂಬ ಮಮತೆ ಎಲ್ಲ ಕಷ್ಟಗಳನ್ನು ಮರೆಸಿ ಬಿಡುತ್ತದೆ. ನಿಷ್ಠುರವಾಗಿ ನಡೆದುಕೊಳ್ಳಲು ಆಗುವುದೇ ಇಲ್ಲ. ವೀರಮ್ಮಳಂಥವರದ್ದು ಸಾಯುವವರೆಗೂ ಇದೇ ತೆರನಾದ ಬವಣೆಯ ಬದುಕು.

ಹೊಟ್ಟೆರಾಯನ ನಿತ್ಯದಟ್ಟಹಾಸವೊ ಬಾಳು
ಧೃಷ್ಟ ಧಣಿಯೂಳಿಗಕೆ ಸೊಟ್ಟು ಮೈ ಬಾಗು
ಹಿಟ್ಟಿಗಗಲಿದ ಬಾಯಿ, ಬಟ್ಟೆಗೊಡ್ಡಿದ ಕೈಯಿ
ಇಷ್ಟೆ ನಮ್ಮೆಲ್ಲಕಥೆ -ಮಂಕುತಿಮ್ಮ

ಪುಸ್ತಕ ಪರಿಚಯ ಮತ್ತು ಪುಸ್ತಕ ವಿಮರ್ಶೆ

ಕನ್ನಡ ಕಾವ್ಯ ಮೀಮಾಂಸೆ: ಡಾ. ಎಸ್. ಎಂ. ಹಿರೇಮಠ, ಅಶ್ವಿನೀ ಪ್ರಕಾಶನ: ಕಲಬುರ್ಗಿ VI+ 174 + ರೂ 100.

'ಕನ್ನಡ ಕಾವ್ಯ ಮೀಮಾಂಸೆ' ಡಾ. ಎಸ್. ಎಂ. ಹಿರೇಮಠ ಅವರ ಇತ್ತೀಚಿನ ಕೃತಿ. ಕನ್ನಡ ಕವಿಗಳ ಮೀಮಾಂಸಾ ಸ್ರೋತವನ್ನು, ಪ್ರಾಚೀನ ಕನ್ನಡ ಕಾವ್ಯದ ಅನನ್ಯತೆಯನ್ನು ಈ ಗ್ರಂಥ ಸಮರ್ಥವಾಗಿ ಎತ್ತಿಹಿಡಿದಿದೆ. ನಮ್ಮ ನಾಡಿನ ಕವಿಗಳು ಕಾವ್ಯ ಮೀಮಾಂಸೆಯನ್ನು ಕಟ್ಟಿ ಬೆಳೆಸಿದ ರೀತಿಯನ್ನು ಅರ್ಥಮಾಡಿಕೊಳ್ಳಲು ಈ ಕೃತಿ ಮಾರ್ಗದರ್ಶಿಯಾಗಿದೆ. ಪ್ರಾಚೀನ ಕನ್ನಡ ಕಾವ್ಯ ಪರಂಪರೆಯ ಜ್ಞಾನವನ್ನು ನಮಗೊದಗಿಸಿ, ಎಚ್ಚರಿಸುವ ಕಾರ್ಯವನ್ನು ಡಾ. ಹಿರೇಮಠ ಅವರು ಈ ಗ್ರಂಥದಲ್ಲಿ ಮಾಡಿದ್ದಾರೆ. ಆಧುನಿಕ ದೃಷ್ಟಿಕೋನ ಮತ್ತು ಪರಂಪರೆಗಳ ಮಧ್ಯದ ಕೊಂಡಿಯಾಗಿಯೂ ಈ ಕೃತಿ ಕಾಣಿಸಿಕೊಂಡಿದೆ.

ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಅನುಸರಿಸಿಯೂ ನಮ್ಮ ಕವಿಗಳು ಹೇಗೆ ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡರೆಂಬುದನ್ನು ವಿವರಿಸುವ ಈ ಕೃತಿಯಲ್ಲಿ ಹದಿನೇಳು ಚಿಕ್ಕಚಿಕ್ಕ ಅಧ್ಯಾಯಗಳಿವೆ. ಕಾವ್ಯದ ಸ್ವರೂಪ, ಕಾವ್ಯಕಾರಣ, ಕಾವ್ಯ ಪ್ರಯೋಜನ, ಅಲಂಕಾರ, ಗುಣ, ರೀತಿ, ರಸ, ಧ್ವನಿ, ಕಾವ್ಯ ಪ್ರಭೇದಗಳು, ಸಹೃದಯ, ವಿಮರ್ಶಕ, ವಚನಕಾರರ ಕಾವ್ಯ ವಿಚಾರ-ಹೀಗೆ ಬೇರೆ ಬೇರೆ ನೆಲೆಯಲ್ಲಿ ಡಾ. ಹಿರೇಮಠರ ಬರವಣಿಗೆ ಸಂಶೋಧನೆಯಾಗಿ ಬಿಚ್ಚಿಕೊಳ್ಳುತ್ತಾ ವಿಮರ್ಶೆಯಾಗಿ ಬೆಳೆಯುತ್ತದೆ. ಪಂಪ, ರನ್ನ, ಹರಿಹರ, ರಾಘವಾಂಕ, ಜನ್ನ ಮೊದಲಾದ ಕವಿಗಳು ಬಿಡಿಬಿಡಿಯಾಗಿ ನಡೆಸಿರುವ ಕಾವ್ಯ ಚರ್ಚೆಯನ್ನು ಇಲ್ಲಿ ಕನ್ನಡ ಕಾವ್ಯ ಮೀಮಾಂಸೆಯ ಚೌಕಟ್ಟಿಗೆ ಅಳವಡಿಸಿರುವುದು ಈ ಕೃತಿಯ ಹೆಚ್ಚುಗಾರಿಕೆ.

'' ನಮ್ಮ ಕವಿಗಳು ಅನುಕರಣಶೀಲರಾದರೂ ತಮ್ಮ ಅನುಕರಣ ಕ್ರಿಯೆಗೆ ತಮ್ಮತನದ ಮುದ್ರೆಯನ್ನು ಒತ್ತಿದರು. ಬೇರೆಯವರದ್ದನ್ನು ಯಾಥಾವತ್ತಾಗಿ ಕಳವು ಮಾಡಿಕೊಂಡು: ತಮ್ಮದ್ದನ್ನಾಗಿಸಿಕೊಳ್ಳುವ ಕವಿಗಳನ್ನು ಕನ್ನಡ ಕವಿಗಳು ಎಂದೂ ಒಪ್ಪಿಕೊಂಡಿಲ್ಲ.'' ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ. ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ ಹಾಗಾಗಿ ಅಲ್ಲಿ ಹೊಸತನವಿದೆ. ಕನ್ನಡ ಕವಿಗಳು ಕಾವ್ಯಕ್ಕೆ ಪ್ರತಿಭೆಯು ಪ್ರಥಮ ಕಾರಣವೆಂದು ಒಪ್ಪಿಕೊಂಡಿದ್ದಾರೆ. ಅಷ್ಟಕ್ಕೆ ಅವರು ನಿಲ್ಲದೆ ಪ್ರತಿಭೆಯನ್ನು ಬೆಳೆಯಿಸಬಹುದಾದ ಏನೆಲ್ಲ ಆಕರ ಪರಿಕರಗಳ ಬಗ್ಗೆಯೂ ಆಲೋಚನೆ ಮಾಡಿದ್ದಾರೆ. ಕನ್ನಡದ ಕವಿಗಳು ಕೇವಲ ಕಾವ್ಯಾನಂದದ ಬೆನ್ನುಹತ್ತಿ ಬರೀ ಆದರ್ಶದಲ್ಲಿಯೇ ಮುಳುಗಿ ಹೋದವರಲ್ಲ. ಅವರಿಗೆ ವಾಸ್ತವತೆಯ ಗಾಢವಾದ ಅರಿವಿರುವುದರಿಂದ ಕಾವ್ಯದಿಂದ ಜೀವನೋಪಯೋಗಿಯಾದ ಇತರ ಪ್ರಯೋಜನಗಳನ್ನು ಬಯಸಿದ್ದಾರೆ, ಉಲ್ಲೇಖಿಸಿದ್ದಾರೆ. ಸಮಗ್ರ ಜೀವನದ ಪ್ರಗತಿಯಲ್ಲಿ ಕಾವ್ಯದ ಪಾಲೂ ಇದೆಯೆಂಬುದನ್ನು ಕವಿಗಳು ಇಲ್ಲಿ ಗುರುತಿಸದೆ ಬಿಟ್ಟಿಲ್ಲ. ಆದುದರಿಂದ ಕನ್ನಡದ ಕವಿಗಳು ಜನಸಮ್ಮುಖಿ, ಸಮಾಜ ಸಮ್ಮುಖವಾದ ಕಾವ್ಯ ಕೃತಿಗಳನ್ನು ಬಯಸಿದ್ದಾರೆ. ಅಂತೆಯೇ ರಚಿಸಿ ಸಹೃದಯರಿಗೆ ಕೊಟ್ಟಿದ್ದಾರೆ. ಇಲ್ಲೆಲ್ಲ ಡಾ. ಹಿರೇಮಠರ ಗಂಭೀರ ಚಿಂತನಗಳಿಂದಾಗಿ ಅನೇಕ ಸತ್ಯಾಂಶಗಳು ಬಯಲಿಗೆ ಬಂದಿವೆ. ಲೇಖಕರ ವಿದ್ವತ್ತಿಗೆ

ಖಚಿತ ಶಾಸ್ತ್ರಜ್ಞಾನಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಇಂದು ಕನ್ನಡ ಕಾವ್ಯದ ಹಾದಿ ಬಹು ದೂರ ಗತಿಸಿ ಬಂದಿದೆ. ವಚನಕಾರರ ಕಾಲದಲ್ಲಿ ಕೈ ತೊಳೆದುಕೊಂಡು ಮಡಿಯಿಂದ ಮುಟ್ಟಿ ಮನನಿಸಬೇಕಾದ ಕಾವ್ಯವಿಂದು ಮುಟ್ಟಿ ಕೈ ತೊಳೆಯ ಬೇಕಾದ ಹಂತವು ತಲುಪುತ್ತಿರುವುದು ದುರಂತದ ಸಂಗತಿ. ವ್ಯಕ್ತಿತ್ವಕ್ಕೂ ಕಾವ್ಯಕ್ಕೂ ಮುಚ್ಚಲಾಗದ ಕಂದಕವು ತಲೆದೊರಿದೆ ಎಂಬುದನ್ನು ಖೇದದಿಂದ ದಾಖಲಿಸಿದ್ದಾರೆ. ಇದೊಂದು ಗರುಡ ಗಮನದ ಕೃತಿ. ಒಂದೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ವಾಙ್ಮಯವನ್ನು ಇಲ್ಲಿ ಲೇಖಕರು ಸೂಕ್ಷ್ಮವಾಗಿ ಅವಲೋಕಿಸಿ ಕನ್ನಡ ಕಾವ್ಯದ ಗುಣ-ಲಕ್ಷಣ ವಿಶೇಷಗಳನ್ನು ಶೋಧಿಸಿ ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯು ಸಂಸ್ಕೃತದ ಸಾಹಿತ್ಯ ಪರಂಪರೆಗಿಂತಲೂ ವಿಶಿಷ್ಟವಾಗುತ್ತ, ಕಾವ್ಯ ಮೀಮಾಂಸೆಯ ಎಷ್ಟೋ ವಿವರಗಳನ್ನು ತನ್ನಲ್ಲಿ ಅಂತರ್ಗತಗೊಳಿಸುತ್ತಾ ವುಂದುವರೆಯಿತು. ಆದುದರಿಂದ ಸಂಶೋಧಕರಿಗೆ, ಅಧ್ಯಯನಶೀಲರಿಗೆ ಕನ್ನಡ ಕಾವ್ಯ ಮಾರ್ಗದಲ್ಲಿ ಹಲವಾರು ಕಾವ್ಯ ಮೀಮಾಂಸೆಯ ವಿವರಗಳು ಎದುರಾಗುತ್ತವೆ. ಅವುಗಳನ್ನೆಲ್ಲವನ್ನು ಕ್ರೋಢೀಕರಿಸುವುದರ ಮೂಲಕವಾಗಿ ಸ್ಥೂಲವಾಗಿಯಾದರೂ ಕನ್ನಡ ಕಾವ್ಯಮೀಮಾಂಸೆಯ ಪಥವನ್ನು ರೂಪಿಸಬಹುದೆಂಬ ಆಶಯವನ್ನು ಲೇಖಕರು ಆರಂಭದಲ್ಲೇ ವ್ಯಕ್ತಪಡಿಸಿದ್ದಾರೆ. ಕನ್ನಡ ಸಾಹಿತ್ಯ ಹಾಗೂ ಭಾಷೆಗಳ ಮೂಲಾಧಾರಗಳನ್ನು ಕಟ್ಟಲು ಇಂಥ ಕೃತಿಗಳು ನಮಗಿಂದು ಬೇಕಾಗಿವೆ.

ಕನ್ನಡ ಕಾವ್ಯ ರಚನೆಯಲ್ಲಿ ತೊಡಗಿಕೊಳ್ಳುವವರಿಗೆ, ಕನ್ನಡ ಭಾಷೆ, ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಸಮಾನವಾಗಿ ಬೇಕಾಗಿರುವ ಕೃತಿಯಿದು. ಇಲ್ಲಿಯ ನಿರೂಪಣೆ ಶಾಸ್ತ್ರೀಯವಾಗಿದ್ದರೂ ಎಲ್ಲಿಯೂ ಶುಷ್ಕವಾಗಿಲ್ಲ, ಕೃತಿಗೆ ಸೂಕ್ತ ಮುಕ್ತಾಯವೂ ಇದೆ. ಒಟ್ಟಿನಲ್ಲಿ ಕನ್ನಡ ಕಾವ್ಯ ಮೀಮಾಂಸೆ ನಡೆದು ಬಂದ ದಾರಿಯತ್ತ, ಅದರ ಹೆಜ್ಜೆ ಹಾದಿಗಳತ್ತ ಲೇಖಕರು ನಮ್ಮ ಗಮನ ಸೆಳೆದಿದ್ದಾರೆ. ಇದೊಂದು ಶ್ಲಾಘನೀಯ ಪ್ರಯತ್ನ.

ಕನ್ನಡ ಕಾವ್ಯ ಮೀಮಾಂಸೆಯ ಬಗೆಗಿನ ವಿಚಾರಗಳನ್ನು ಕಲೆಹಾಕಿದ ಹಾಗೂ ಕಾಳಜಿ ವಹಿಸಿದ ಬಗೆಗೆ ಡಾ. ಹಿರೇಮಠ ಅವರನ್ನು ನಾವಿಲ್ಲಿ ಅಭಿನಂದಿಸಲೇಬೇಕು. 'ಕನ್ನಡ ಕಾವ್ಯ ಮೀಮಾಂಸೆ' ಒಂದು ಉಪಯುಕ್ತ ಹಾಗೂ ಅತ್ಯುತ್ತಮ ಕೃತಿ. ಕನ್ನಡ ಅಧ್ಯಯನದ ವೈಚಾರಿಕ ವಿಕಾಸಕ್ಕೆ ಇದು ಪೂರಕವಾಗಿದೆ. ನಮ್ಮದೇ ಆದ ಸಾಹಿತ್ಯದ ಮಾನದಂಡದ ಹುಡುಕಾಟವೂ ಇಲ್ಲಿದೆ. ''ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನರಿಯ ಲಾರದು'' ಎಂಬ ಅಲ್ಲಮಪ್ರಭುವಿನ ಮಾತು ವರ್ತಮಾನದ ಅರಿವಿಗೆ ಪೂರ್ವಸ್ಮೃತಿಯ ಅವಶ್ಯಕತೆ ಎಷ್ಟೆಂಬುದನ್ನು ಮಾರ್ಮಿಕವಾಗಿ ತಿಳಿಸುತ್ತದೆ. ಈ ನಿಟ್ಟಿನಿಂದಲೂ ಪ್ರಸ್ತುತ ಕೃತಿಗೆ ವಿಶೇಷ ನೆಲೆಬೆಲೆಯಿದೆ.

ಡಾ. ಜಿ. ಎನ್. ಉಪಾಧ್ಯ
ಕನ್ನಡ ಉಪನ್ಯಾಸಕರು
ಮುಂಬಯಿ ವಿಶ್ವವಿದ್ಯಾನಿಲಯ
ಸಾಂತಾಕ್ರೂಜ್, ವಿದ್ಯಾನಗರ,
ಮುಂಬಯಿ-೪೦೦ ೦೯೮

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ, ಲೇಖಕರು : ಡಾ.ಎಸ್.ಶಿವರಾಜಪ್ಪ, ಪ್ರಕಾಶನ: ನಾಗಮಲೆ ಜ್ಯೋತಿ ಪ್ರಕಾಶನ, ಮೈಸೂರು, ಪ್ರಕಟಣ ವರ್ಷ : ೨೦೦೦, ಪುಟಗಳು: ೧೦೦, ದರ: ರೂ ೪೦.

ಬಾಳಿನ ಒಳತಿರುಳನ್ನು ಅರಿಯಲು ಒಂದು ಮಟ್ಟದ ಬಡತನವನ್ನಾದರೂ ಅನುಭವಿಸಬೇಕೊ ಏನೋ? ಬದುಕಿನ ಅಂತರಾಳವನ್ನು ಬಿದಕಿ ಮಾಮೂಲಿ ಜೀವನದ ಕಣ್ಣಿಗೆ ಕಾಣದ ನಿತ್ಯಸತ್ಯದ ದರ್ಶನ ಮೂಡಿಸುತ್ತದೆ ಬಡತನ. ಆದರ ಸ್ಪರ್ಶ ಹಾಗೂ ಸಂಸರ್ಗದ ಹಂಗಿಲ್ಲದೆ ಬೆಳೆಯುವವರು ಕೃತಕ ಕುಸುಮಗಳ ಹಾಗೆ ಪರಿಮಳವಿಲ್ಲದೆ ಜೀವನಯಾತ್ರೆ ಪೂರಯಿಸುವ ಜೀವಿಗಳಾಗಿಬಿಡುತ್ತಾರೆ. ಈ ನಿಟ್ಟಿನಲ್ಲಿ ಡಾ. ಎಸ್. ಶಿವರಾಜಪ್ಪ ಅದೃಷ್ಟವಂತರು. ಆರಂಭದಲ್ಲಿ ಜೀವನ ಅವರ ಪಾಲಿಗೆ ಕಠೋರವಾಗಿ ಕಂಡ ಪರಿಣಾಮವಾಗಿ ಹಲವು ವಿಧಗಳಲ್ಲಿ ಆ ಕಠೋರತೆಯನ್ನು ತಗ್ಗಿಸಿ ಅಧ್ಯಯನ ಹಾಗೂ ಅಂತರಂಗದ ಪರಿಪಾಕದ ಮೂಲಕ ಹಿಗ್ಗಿನ ಬುಗ್ಗೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದರೆ ಮನಸ್ಸು ಮಾತ್ರ ನಿರ್ಧನಿಕವೂ, ನಿರಾಧಾರವೂ ಆದ ಆ ದಿನಗಳನ್ನು ಸದಾ ನೆನೆದಿರುತ್ತದೆ; ತನ್ಮೂಲಕ ನೇರ್ಪುಗೊಳ್ಳತೊಡಗಿದೆ.

ಕೃತಿಯ ಬಗ್ಗೆ ಮಾತನಾಡುವ ಬದಲು ಕೃತಿಕಾರನಿಂದ ಮೊದಲು ಮಾಡಿರುವುದಕ್ಕೆ ಕಾರಣವಿದೆ. ಎಂಥ ನೆಲದಲ್ಲಿ ಎಂಥ ಬೆಳೆ ಬೆಳೆಯುತ್ತದೆ ಎಂಬುದನ್ನು ನಾವು ಊಹಿಸಬಹುದು. ಉತ್ತು ಹದ ಮಾಡದ ಒರಟು ನೆಲದಲ್ಲಿ ಹುಲುಸು ಬೆಳೆ ತೆಗೆಯಲೆಂತಾದೀತು? ಅದೇ ಪ್ರಕಾರವಾಗಿ ಪಾಕಗೊಂಡ ವ್ಯಕ್ತಿ ಘನತೆ ತಗ್ಗಿಸುವ ಸ್ತರದಲ್ಲಿ ಆಲೋಚಿಸಲಾರ. ಈ ಎಲ್ಲ ಕಾರಣಗಳಿಂದ ಡಾ. ಶಿವರಾಜಪ್ಪನವರು ಶರಣ ಚಳವಳಿಯಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿರುವ ಸ್ಮರಣೀಯ ದಂಪತಿಗಳಾದ ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮನವರನ್ನು ಕುರಿತು ಬರೆದಿದ್ದಾರೆ.

ಪ್ರಸ್ತುತ ಗ್ರಂಥವನ್ನು ಮೂರುಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯ ಭಾಗದಲ್ಲಿ ಲೇಖಕರು ಆಯ್ದಕ್ಕಿ ಮಾರಯ್ಯ ಲಕ್ಕಮ್ಮರ ಜೀವನ ಸಂದೇಶವನ್ನು ತಿಳಿಸುತ್ತಾ ವಿಷಯ ಪ್ರವೇಶದಲ್ಲಿ ಹನ್ನೆರಡನೇ ಶತಮಾನದ ವಚನ ಚಳವಳಿಯ ಸಂದರ್ಭದಲ್ಲಾದ ವೈಚಾರಿಕ ಕ್ರಾಂತಿಯನ್ನು ಪರಿಚಯಿಸಿಕೊಡುತ್ತಾರೆ; ಈ ಹಿನ್ನೆಲೆಯಿಂದಲೇ ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮರಂಥ ಚೇತನಗಳು ಹೊರಹೊಮ್ಮಲು ಸಾಧ್ಯವಾಯಿತೆಂದು ಸೂಚಿಸುತ್ತಾರೆ. ಮೊದಲನೆಯ ಭಾಗದಲ್ಲೇ ಆಯ್ದಕ್ಕಿಮಾರಯ್ಯ ಹಾಗೂ ಲಕ್ಕಮ್ಮರ ಸಮಗ್ರವಚನವನ್ನು ದಕ್ಕಿಸಿದ್ದಾರೆ. ಎರಡನೆಯ ಭಾಗದಲ್ಲಿ ಈ ವಚನಗಳ ಇಂಗ್ಲಿಷ್ ಭಾಷೆಯ ಅನುವಾದವಿದೆ. ಮೂರನೆಯ ಭಾಗದಲ್ಲಿ ಗುಮ್ಮಳಾಪುರದ ಸಿದ್ಧಲಿಂಗ ವಿರಚಿತ ಶೂನ್ಯ ಸಂಪಾದನೆಯಲ್ಲಿ ಬರುವ ಆಯ್ದಕ್ಕಿ ಮಾರಯ್ಯ-ಲಕ್ಕಮ್ಮನವರ ಪ್ರಸಂಗಗಳನ್ನು ಕಾಣಿಸಿದ್ದಾರೆ. ಡಾ. ಎಲ್. ಬಸವರಾಜುಅವರ ಗ್ರಂಥದಿಂದ ಇದನ್ನು ಆಯ್ದುಕೊಳ್ಳಲಾಗಿದೆ. ಕೊನೆಯಲ್ಲಿ ಗ್ರಂಥ ಋಣದ ಜೊತೆಗೆ ನೀಡಿರುವ ಶಿವಶರಣ ಶರಣೆಯರ ವಚನಗಳಲ್ಲಿ ಕಂಡುಬರುವ ಅಂಕಿತನಾಮಗಳ ಪಟ್ಟಿ ಬಹಳ ಉಪಯುಕ್ತವಾದುದಾಗಿದೆ.

ಆಯ್ದಕ್ಕಿ ಮಾರಯ್ಯ-ಲಕ್ಕಮ್ಮರ ಪ್ರಸಂಗವು ವರ್ತಮಾನದ ಅತಿಲಾಲಸೆ ಹಾಗೂ ಕೊಳ್ಳುಬಾಕ

ಸಂಸ್ಕೃತಿಗೆ ವಿರುದ್ಧವಾದ ಜೀವ ಪರವಾದ ತತ್ವವನ್ನು ತಿಳಿಸಿಕೊಡುವುದರಿಂದ ಬಹಳ ಮೌಲಿಕವಾಗಿದೆ. ಜನಸಾಮಾನ್ಯರಾಗಿದ್ದವರೂ ಕೂಡ ಅರಿವಿನ ಬೆಳಕಿನ ಸ್ಪರ್ಶದಿಂದ ಜ್ಞಾನವಂತರಾಗಿದ್ದರೆಂಬುದಕ್ಕೆ ಈ ಪ್ರಸಂಗ ಒಂದು ಜ್ವಲಂತ ನಿದರ್ಶನವಾಗಿದೆ. ಈ ವಿಮರ್ಶೆ ಬರೆಯುವ ಕಾಲಕ್ಕೆ ಬಾನುಲಿಯಿಂದ ಒಂದು ಸುದ್ದಿ ಬಿತ್ತರವಾಗುತ್ತಿದೆ; ಅದೇನೆಂದರೆ ದಕ್ಷಿಣ ಭಾರತದಲ್ಲೇ ಬಹಳ ಕ್ಷಿಪ್ರವಾಗಿ ಬೆಂಗಳೂರಿನಲ್ಲಿ ತೀವ್ರತರವಾಗಿ ಆತ್ಮಹತ್ಯೆಯ ಪ್ರಕರಣ ಗಳು ಬರುತ್ತಿದೆಯಂತೆ. ಇದಕ್ಕೆ ತಜ್ಞರು ನೀಡುವ ಅಭಿಪ್ರಾಯವೆಂದರೆ: ಜನರಲ್ಲಿ ಪೂರಿಸಲಾರದ ಪ್ರಮಾಣದಲ್ಲಿ ಆಸೆ ಹೆಚ್ಚಾಗಿರುವುದು ಪ್ರಧಾನ ಕಾರಣ. ಅಂಥ ಸನ್ನಿವೇಶದಲ್ಲಿ ಅನೇಕರು ಆತ್ಮಹತ್ಯೆಯ ದಾರಿ ಹಿಡಿಯುತ್ತಾರೆ. ಹುಚ್ಚೆದ್ದು ಕುಣಿಯುವ ಭೋಗದ ಬದುಕಿನ ಅನೈತಿಕ ಕರೆಗೆ ಓಗೊಡುವ ತರಾತುರಿಯಲ್ಲಿ ಮಂದಿ ಹಾದಿ ತಪ್ಪುತ್ತಾರೆ; ಸಮಾಜ ಅಸ್ತವ್ಯಸ್ತವಾಗುತ್ತದೆ; ತತ್ಪರಿಣಾಮವಾಗಿ ಅನೇಕ ಕಷ್ಟನಷ್ಟಗಳಿಗೆ ಈಡಾಗುತ್ತದೆ. ಪರಿಸ್ಥಿತಿಯ ಹತೋಟಿಗೆ ''ಷಾಕ್ ಅಬ್ಸಾರ್ಬರ್''ಗಳ ರೀತಿಯಲ್ಲಿ ನಮ್ಮ ಸಂಸ್ಕೃತಿಯಲ್ಲೇ ಅಂತರ್ಗತವಾದ ನೀತಿಪಾಠಗಳನ್ನು ಹೆಕ್ಕಿ ತೆಗೆದುಕೊಂಡು ಕಣ್ಣಮುಂದಿರಿಸಿ ಕೊಂಡರ ಬಿಯ ತಪ್ಪುವ ಅಪಾಯವನ್ನು ಆದಷ್ಟೂ ತಗ್ಗಿಸಬಹುದು.

ಒಂದು ದಿನ ಅಗತ್ಯಕ್ಕಿಂತ ಹೆಚ್ಚು ಧಾನ್ಯವನ್ನು ಆಯ್ದು ತರುವ ಪತಿ ಆಯ್ದಕ್ಕಿ ಮಾರಯ್ಯನನ್ನು ಕುರಿತು ''ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೋ? ಬಸವಣ್ಣನ ಅನುಮಾನದ ಚಿತ್ತವೋ? ಈ ಮಾತು ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ, ಅಲ್ಲಿಯೇ ಸುರಿದು ಬನ್ನಿ ಮಾರಯ್ಯ!'' ಎಂದು ಲಕ್ಕಮ್ಮ ಕೇಳುವ ಆತ್ಮನಿಯಂತ್ರಣದ ನುಡಿಗಳ ಮಾರ್ದನಿ ಇಂದೂ ಕೂಡ ಮೊಳಗ ಬೇಕಾಗಿದೆ. ಮಾರುಕಟ್ಟೆಯೇ ಬದುಕಾಗಿರುವ ಪ್ರಸ್ತುತದಲ್ಲಿ ಪದಾರ್ಥಗಳೇ ಪ್ರಮುಖ ಪಾತ್ರಧಾರಿಗಳಾಗಿವೆ. ನಾವು ಕೇವಲ ಅವುಗಳ ಆರಾಧಕರಾಗಿದ್ದೇವೆ. ಈ ಜಾಡನ್ನು ಬದಲಿಸಿ ದಾರಿ ತೋರುವ ರೀತಿ ಯಲ್ಲಿ ಆಯ್ದಕ್ಕಿ ಮಾರಯ್ಯ-ಲಕ್ಕಮ್ಮರ ಕಥೆ ಇದೆ.

ಈ ಗ್ರಂಥದ ಪ್ರಸ್ತುತತೆಯನ್ನು ಪ್ರಶ್ನಿಸುವಂತೆಯೇ ಇಲ್ಲ. ಆದಾಗ್ಯೂ ಪುಸ್ತಕದ ಒಟ್ಟಂದದ ದೃಷ್ಟಿಯಿಂದ ಒಂದು ಮಾತು: ಇದು ಇಲ್ಲಿ ಪ್ರಕಟವಾಗಿರುವ ವಚನಗಳ ಆಂಗ್ಲಭಾಷಾ ಅನುವಾದವನ್ನು ಕುರಿತದ್ದು. ಕನ್ನಡಬಾರದಿರುವವರಿಗೆ ವಚನಗಳನ್ನು ಇಂಗ್ಲಿಷ್ ಭಾಷೆಯಲ್ಲಾದರೂ ದಕ್ಕಿಸಬೇಕೆಂದು ಶಿವರಾಜಪ್ಪನವರು ಹಂಬಲಿಸುವವರು. ಆದರೆ ಈ ಗ್ರಂಥದಲ್ಲಿ ಯಾವ ಪೂರ್ವ ಸೂಚನೆ ಮತ್ತು ಪೂರ್ವಪೀಠಿಕೆಯಿಲ್ಲದೆ ಈ ಅನುವಾದ ಮಧ್ಯದಲ್ಲಿ ಧುತ್ತನೆ ಪ್ರತ್ಯಕ್ಷವಾಗು ತ್ತದೆ. ಆರಂಭದ ನುಡಿಯಲ್ಲೂ ಇದರ ಪ್ರಸ್ತಾಪವಿಲ್ಲ. ಜೊತೆಗೆ ಈ ಅನುವಾದ ಲೇಖಕರದೋ ಅಥವಾ ಯಾರ ಸಹಾಯದಿಂದಲಾದರೂ ಕೈಗೂಡಿದುದೋ- ಅದೂ ತಿಳಿಯುವುದಿಲ್ಲ. ಅನುವಾದ ಬೇರೊಬ್ಬರ ದಾಗಿದ್ದರೆ ಅಥವಾ ಅವರ ಸಹಾಯದಿಂದ ಆದುದಾಗಿದ್ದರೆ ಅವರ ಹೆಸರನ್ನು ಉಲ್ಲೇಖಿಸಬೇಕಾಗಿತ್ತು. ಬರಹದ ಸಂಸ್ಕೃತಿಯಲ್ಲಿ ನಾವು ಅತ್ಯಗತ್ಯವಾಗಿ ಪರಿಪಾಲಿಸಲೇಬೇಕಾದ ನಿಯಮವಿದು. ಈ ಗ್ರಂಥದಲ್ಲಿ

ಇದು ಒಂದು ಗೈರುಹಾಜರಾದ ಕೊಂಡಿಯಂತೆ ಕಾಣಿಸುತ್ತದೆ. ಮುಂದಿನ ಆವೃತ್ತಿಯಲ್ಲಿ ಲೇಖಕರು ಈ ಲೋಪವನ್ನು ಸರಿಪಡಿಸುವರೆಂದು ಭಾವಿಸುತ್ತೇನೆ.

ಮೂರನೇ ಭಾಗವಾದ ಶೂನ್ಯ ಸಂಪಾದನೆಯ ಪ್ರಸಂಗ ಮತ್ತೆ ನಮ್ಮನ್ನು ಮೂಲದ ಶೃತಿಗೆ ಬೆಸೆಯುತ್ತದೆ. ಮೇಲೆ ಹೇಳಿದ ಸಣ್ಣ ದೋಷವೊಂದನ್ನು ಹೊರತುಪಡಿಸಿದರೆ ಈ ಗ್ರಂಥ ಬಹಳ ಉಪಯುಕ್ತವಾದುದಾಗಿದೆ. ಆರಂಭದಲ್ಲಿ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪನವರ ಮೌಲಿಕ ಮುನ್ನುಡಿ ಇದೆ. ವಚನಕಾರರ ಜೀವನ ನೀಡುವ ಸ್ಫೂರ್ತಿಯ ಪರಿಯೆಂತೆಂದರೆ ಲಭ್ಯವಿರುವ ಸೂಳೆ ಸಂಕವ್ವೆಯ ಒಂದು ವಚನದ ಆಧಾರದ ಮೇಲೆ ಹಿರಿಯ ಸಾಹಿತಿ ಮುದೇನೂರು ಸಂಗಣ್ಣನವರು ಇತ್ತೀಚೆಗೆ ಒಂದು ಪೂರ್ಣ ಪ್ರಮಾಣದ ನಾಟಕವನ್ನೇ ರಚಿಸಿದ್ದಾರೆ. ಹೊಳೆದ ಒಂದೆಳೆಯ ಬೆಂಬಲದಿಂದ ಒಂದು ಸುಂದರವಾದ ವಸ್ತ್ರವನ್ನೇ ಅವರು ನೇಯ್ದಿದ್ದಾರೆ. ದೊಡ್ಡವರ ಬದುಕು ಉಂಟು ಮಾಡುವ ಪರಿಣಾಮ ಅಂಥದ್ದು. ದೊಡ್ಡದನ್ನು ಗುರುತಿಸುವ ಗುರಿಯಿದ್ದರೆ ಮಾತ್ರ ಈ ತರಹದ ಪ್ರತಿಫಲನ ಸಾಧ್ಯವಾಗುವುದು. ತುಪ್ಪೇರಿದ ದರ್ಪಣದಲ್ಲಿ ಪ್ರತಿಬಿಂಬ ಪ್ರಜ್ವಲಿಸುವುದಿಲ್ಲವೆಂಬುದನ್ನು ನಾವು ಬಲ್ಲೆವು. ಇದೇ ಪ್ರಕಾರ ದೊಡ್ಡವರ ಬದುಕನ್ನರಿತ ಡಾ. ಶಿವರಾಜಪ್ಪನವರು ಶರಣ ವಾಙ್ಮಯಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುವರೆಂದು ನಾವು ಧಾರಾಳವಾಗಿ ನಿರೀಕ್ಷಿಸಬಹುದಾಗಿದೆ.

ಪ್ರೊ. ಸಿ. ನಾಗಣ್ಣ
ನಂ. ೩೧೯೫, ೨೧/ಸಿ. ಮೆಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

ಕಣ್ಣಿಲ್ಲದವನಿಗೆ ಕನ್ನಡಿಯಿಂದ ಹೇಗೆ ಪ್ರಯೋಜನ ಇಲ್ಲವೊ ಹಾಗೆಯೇ ಸ್ವಬುದ್ಧಿ ಇಲ್ಲದವನಿಗೆ ಶಾಸ... ...ಗೋಜನ ಇಲ್ಲ.

- ಚಾಣಕ್ಯ

ಯಾರೂ ತಮ್ಮ ಕೆಲಸಗಳನ್ನು ... ಮಾಡಿಕೊಳ್ಳುತ್ತಾರೊ ಅಂಥವರಿಗೆ ದೇವರೂ ಸಹಾಯ ಮಾಡುತ್ತಾನೆ

- ಎಸ್. ರಾಧಾಕೃಷ್ಣನ್

: ಓದುಗರ ಅನಿಸಿಕೆ :

ಮಾನ್ಯ ಸಂಪಾದಕರಿಗೆ,

ಏಪ್ರಿಲ್ ೨೦೦೧ರ 'ಪುಸ್ತಕ ಪ್ರಪಂಚ' ಕೈಸೇರಿತು. ಭಾರತೀ ಕಾಸರಗೋಡು ಅವರ ಲೇಖನ 'ದಕ್ಷ ದಾರ್ಶನಿಕ ಪ್ರೊ. ಜಿ. ಹನುಮಂತರಾವ್' ಓದಿದೆ. ಅತ್ಯಂತ ಆನಂದವಾಯಿತು.

ನಾನು ಹಿಂದೆ ''ಪ್ರಬುದ್ಧ ಕರ್ನಾಟಕ''ದಲ್ಲಿ ಪ್ರೊ. ಜಿ. ಹನುಮಂತರಾವ್ ಅವರ ಲೇಖನ ಓದುತ್ತಿದ್ದೆ. ಪುಸ್ತಕ ಪ್ರಪಂಚಕ್ಕೆ ಪ್ರಧಾನ ಸಂಪಾದಕರಾಗಿದ್ದರೆಂದೂ ಆ ಮೇಲೆ ತಿಳಿದಿದ್ದಿತು.

ಶ್ರೀ ಎ. ಪಿ. ಚಂದ್ರಶೇಖರ ಅವರ ಲೇಖನವೂ ಅತ್ಯುತ್ತಮವಾಗಿದೆ. ಇಂತಹ ಇನ್ನೂ ಅನೇಕ ಲೇಖನಗಳನ್ನು ಪ್ರಕಟಿಸಿದ ಪುಸ್ತಕಪ್ರಪಂಚಕ್ಕೆ ಧನ್ಯವಾದಗಳು.

ವಂದನೆಗಳೊಡನೆ

ತಮ್ಮ ವಿಶ್ವಾಸಿ
ಮಾಧವರಾವ್ ಮುಧೋಳ್
೧೬೯೧ ೧೭ನೇ ಮುಖ್ಯರಸ್ತೆ
ಜೆ. ಪಿ. ನಗರ ೨ನೇ ಹಂತ
ಬೆಂಗಳೂರು-೫೬೦ ೦೭೮

ಸನ್ಮಾನ್ಯ ಸಂಪಾದಕರಿಗೆ,

ಸಪ್ರೇಮ ವಂದನೆಗಳು,

ಏಪ್ರಿಲ್ ತಿಂಗಳ ಸಂಚಿಕೆ ತಲಪಿತು ಧನ್ಯವಾದಗಳು. ಶ್ರೀಮತಿ ಸತ್ಯವತಿ ಮತ್ತು ಶೋಭಾ ಪ್ರಮೋದರವರ ಲೇಖನಗಳು ಚೆನ್ನಾಗಿ ಮೂಡಿಬಂದಿವೆ. ಸಾಮಾನ್ಯವಾಗಿ ಮರೆಗುಳಿತನದ ತೊಂದರೆಗಳು ಮಾನವ ಜೀವನದ ಅಂಗವೆಂಬುದು ಕಟುಸತ್ಯ. ಶ್ರೀಮತಿಯವರು ಮರೆವು ಪರಿಹಾರಗೊಳಿಸಲು ಕೆಲವು ಉಪಯುಕ್ತ ತಂತ್ರಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿರುವುದು ಶ್ಲಾಘನೀಯ. ಸತ್ಯವತಿಯವರಿಗೆ ವಂದನೆಗಳು.

ಶೋಭಾ ಪ್ರಮೊದ್‌ರವರ ವಸಂತ ಋತುವಿನ ದಿವಸ ಕಥೆ ಚೆನ್ನಾಗಿದೆ. ಸಾರಾ ಮತ್ತು ವಾಲ್ಟರ್‌ರವರ ಭೇಟಿಯನ್ನು ಕುತೂಹಲಕರವಾಗಿ ಮುಕ್ತಾಯ ಮಾಡಿರುವುದು, ಓದುಗರ ಮನಮೆಚ್ಚುವಂತದಾಗಿರುವುದು. ಇನ್ನಿತರ ಲೇಖನಗಳು ಸಹಾ ಚೆನ್ನಾಗಿ ಮೂಡಿಬಂದಿರುತ್ತೆ. ಲೇಖನಗಳನ್ನು ಪ್ರಕಟಿಸಿದ ತಮಗೂ ಮತ್ತು ಪುಸ್ತಕ ಬಳಗದ ಸನ್ಮಿತ್ರರಿಗೂ ವಿನಯ ಪೂರ್ವಕವಂದನೆಗಳು.

ಗೌರವ ಪೂರ್ವಕ ವಂದನೆಗಳೊಂದಿಗೆ

ಇಂತಿ ನಿಮ್ಮ
ಜಿ. ಶಿವಾಜಿರಾವ್ ಸೋಮವಂಶಿ
೨೦೬೮, ೧೮ನೇ ಪಶ್ಚಿಮ ತಿರುವು
ಅಶೋಕ ರಸ್ತೆ, ಮೈಸೂರು

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ಸಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ದೂರವಾಣಿ : 511 875